ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಶಾಲಾ ಪಠ್ಯಗಳೇ ಮಕ್ಕಳ ಪತ್ರಿಕೆಯಾದರೆ?



ಆಳ-ಅಗಲ
ಹಮಾಸ್-ಇಸ್ರೇಲ್ ಸಂಘರ್ಷ ಕ್ರೌರ್ಯ ಮೆರೆದ ಯುದ್ಧಾಪರಾಧ
ಜಾಗತಿಕ ಬಿಕ್ಕಟ್ಟು: ಐ.ಟಿ ನೇಮಕಕ್ಕೆ ಗ್ರಹಣ 10
ಮಾರುಕಟ್ಟೆ ಮೇಲೆ ವಿವಿಧ ವಿದ್ಯಮಾನಗಳ ಪ್ರಭಾವ? 10
ಸಂತ್ರಸ್ತರ ಸಂಖ್ಯೆ ಹತ್ತು ಲಕ್ಷ: ವಿಶ್ವಸಂಸ್ಥೆ 9
ಅ.18ರಿಂದ ಬಸ್ ಯಾತ್ರೆ 8

ಮುಂದುವರಿದ ಐ.ಟಿ ದಾಳಿ: ₹100 ಕೋಟಿ ದಾಟಿದ ಜಪ್ತಿಯ ಮೊತ್ತ

₹45 ಕೋಟಿ ನಗದು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ರಾಜಾಜಿನಗರದ ಕೇತಮಾರನಹಳ್ಳಿಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಸಂತೋಷ್ ಕೃಷ್ಣಪ್ಪ ಅವರ ಫ್ಲ್ಯಾಟ್‌ನಲ್ಲಿ ಸಂಗ್ರಹಿಸಿಟ್ಟಿದ್ದ ₹45 ಕೋಟಿಗೂ ಹೆಚ್ಚು ಮೊತ್ತದ ನಗದನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶನಿವಾರ ತಡರಾತ್ರಿ ವಶಪಡಿಸಿಕೊಂಡಿದ್ದಾರೆ.

ನಗರದಲ್ಲಿ ಗುರುವಾರದಿಂದ ಆರಂಭವಾದ ಐ.ಟಿ ಶೋಧ ಭಾನುವಾರವೂ ಮುಂದುವರಿಯಿತು. ನಾಲ್ಕು ದಿನಗಳ ನಿರಂತರ ಕಾರ್ಯಾಚರಣೆಯಲ್ಲಿ ಗುತ್ತಿಗೆದಾರರು, ಉದ್ಯಮಿಗಳು, ವಾಸ್ತುಶಿಲ್ಪಿಗಳ ಮನೆಗಳಿಂದ ₹100 ಕೋಟಿಗೂ ಹೆಚ್ಚು ಮೊತ್ತದ ನಗದನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಗುರುವಾರ ಬೆಳಿಗ್ಗೆ ನಗರದ ವಿವಿಧೆಡೆ ಐ.ಟಿ ಅಧಿಕಾರಿಗಳು ದಾಳಿ ನಡೆಸಿದ್ದರು. ಶನಿವಾರ ಸಂಜೆಯವರೆಗೆ 45ಕ್ಕೂ ಹೆಚ್ಚು ಸ್ಥಳಗಳಲ್ಲಿ ಶೋಧ ನಡೆಸಲಾಗಿತ್ತು. ಭಾನುವಾರ ಕೂಡ ಹತ್ತಕ್ಕೂ ಹೆಚ್ಚು ಸ್ಥಳಗಳ ಮೇಲೆ ದಾಳಿ ಮಾಡಿದ ಐ.ಟಿ ಅಧಿಕಾರಿಗಳು, ಇಡೀ ದಿನ ಶೋಧ ನಡೆಸಿದ್ದಾರೆ.

ರಾಜಾಜಿನಗರದ ಕೇತಮಾರನಹಳ್ಳಿಯಲ್ಲಿನ ಅಪಾರ್ಟ್‌ಮೆಂಟ್ ಒಂದರಲ್ಲಿ ಐದನೇ ಮಹಡಿಯಲ್ಲಿ ಸಂತೋಷ್ ಕೃಷ್ಣಪ್ಪ ಹೊಂದಿರುವ ಫ್ಲ್ಯಾಟ್ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶನಿವಾರ ರಾತ್ರಿ ದಾಳಿ ನಡೆಸಿದ್ದರು. ಭಾನುವಾರ ತಡರಾತ್ರಿಯಾದರೂ ಶೋಧ ಪೂರ್ಣಗೊಂಡಿರಲಿಲ್ಲ.

ಸಂತೋಷ್ ಕೃಷ್ಣಪ್ಪ ಕೆಲವು ರಾಜಕೀಯ ಮುಖಂಡರೊಂದಿಗೆ ನಂಟು ಹೊಂದಿದ್ದರು. ಭಾರಿ ಪ್ರಮಾಣದ ನಗದು ಸಂಗ್ರಹಿಸಿ ಇಟ್ಟುಕೊಂಡಿರುವ ಸುಳಿವು ಆಧರಿಸಿ ಅವರ ಮನೆ ಮೇಲೆ ದಾಳಿ ನಡೆಸಲಾಗಿತ್ತು. ಕಬ್ಬಿಣದ ಪೆಟ್ಟಿಗೆಗಳಲ್ಲಿ (ಟ್ರಂಕ್) ನಗದು, ಚಿನ್ನಾಭರಣ ಮತ್ತು ದಾಖಲೆಗಳನ್ನು ಸಂಗ್ರಹಿಸಿಟ್ಟಿರುವುದು ಪತ್ತೆಯಾಗಿದೆ. ಎಲ್ಲ ಪೆಟ್ಟಿಗೆಗಳನ್ನೂ ವಶಕ್ಕೆ ಪಡೆದು ಕೊಂಡೊಯ್ದಿರುವ ತನಿಖಾಧಿಕಾರಿಗಳು, ನಗದು ಎಣಿಕೆಯಲ್ಲಿ ನಿರತರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಾಸ್ತುಶಿಲ್ಪಿಯೊಬ್ಬರ ಮನೆ ಮೇಲೆ ಶನಿವಾರ ಬೆಳಿಗ್ಗೆ ದಾಳಿ ಮಾಡಿದ್ದ ಐ.ಟಿ ಅಧಿಕಾರಿಗಳು ಶೋಧ ನಡೆಸಿದ್ದರು. ಅಲ್ಲಿ ಕೋಟ್ಯಂತರ ರೂಪಾಯಿ ನಗದು ಪತ್ತೆಯಾಗಿತ್ತು.

8ನೇ ಪುಟ ನೋಡಿ

ಹಣಕ್ಕೆ ರಾಜಕಾರಣಿಯ ನಂಟು?

‘ಫ್ಲ್ಯಾಟ್‌ನಲ್ಲಿ ಪತ್ತೆಯಾಗಿರುವ ನಗದು ನನ್ನದಲ್ಲ. ನನಗೆ ಪರಿಚಿತರಾಗಿರುವ ವಾಸ್ತುಶಿಲ್ಪಿಯೊಬ್ಬರು ರಾಜಕಾರಣಿಯೊಬ್ಬರನ್ನು ಕರೆತಂದು ಈ ಪೆಟ್ಟಿಗೆಗಳನ್ನು ಫ್ಲ್ಯಾಟ್‌ನಲ್ಲಿ ಇರಿಸಿ ಹೋಗಿದ್ದರು’ ಎಂಬುದಾಗಿ ಸಂತೋಷ್ ಕೃಷ್ಣಪ್ಪ ಆದಾಯ ತೆರಿಗೆ ಅಧಿಕಾರಿಗಳ ವಿಚಾರಣೆ ವೇಳೆ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಶನಿವಾರವೇ ಉದ್ಯಮಿಯನ್ನು ವಶಕ್ಕೆ ಪಡೆದಿದ್ದ ತನಿಖಾ ತಂಡ ಕೆಲಕಾಲ ವಿಚಾರಣೆ ನಡೆಸಿತ್ತು. ನಗದು, ಚಿನ್ನಾಭರಣ ಮತ್ತು ಆಸ್ತಿ ದಾಖಲೆಗಳ ಮೂಲವನ್ನು ಬಹಿರಂಗಪಡಿಸುವಂತೆ ಸೂಚಿಸಿತ್ತು. ಆಗ, ವಾಸ್ತುಶಿಲ್ಪಿ ಮತ್ತು ರಾಜಕಾರಣಿಯ ನಂಟಿನ ಕುರಿತು ಬಹಿರಂಗಪಡಿಸಿದ್ದಾರೆ. ವಾಸ್ತುಶಿಲ್ಪಿಯು ರಾಜ್ಯದ ಕೆಲವು ಪ್ರಭಾವಿ ರಾಜಕಾರಣಿಗಳ ಜತೆ ನಂಟು ಹೊಂದಿರುವ ಮಾಹಿತಿಯೂ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಲಭಿಸಿದೆ ಎಂದು ಗೊತ್ತಾಗಿದೆ. ವಶಕ್ಕೆ ಪಡೆದಿರುವ ನಗದು, ಚಿನ್ನಾಭರಣ ಹಾಗೂ ಆಸ್ತಿ ದಾಖಲೆಗಳ ಕುರಿತು ಸೂಕ್ತ ಮಾಹಿತಿಯೊಂದಿಗೆ ವಿಚಾರಣೆಗೆ ಹಾಜರಾಗುವಂತೆ ಸಂತೋಷ್ ಕೃಷ್ಣಪ್ಪ ಅವರಿಗೆ ಐ.ಟಿ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ. ವಾಸ್ತುಶಿಲ್ಪಿ ಮತ್ತು ರಾಜಕಾರಣಿಗೂ ನೋಟಿಸ್ ಜಾರಿಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಆರೋಪ ಅಲ್ಲಗಳೆದ ಕಾಂತರಾಜ್

ಸಂತೋಷ್ ಕೃಷ್ಣಪ್ಪ ಫ್ಲ್ಯಾಟ್‌ನಲ್ಲಿ ಪತ್ತೆಯಾಗಿರುವ ನಗದು, ಚಿನ್ನಾಭರಣ ಮತ್ತು ಆಸ್ತಿ ದಾಖಲೆಗಳು ವಿಧಾನ ಪರಿಷತ್‌ನ ಮಾಜಿ ಸದಸ್ಯ, ಕಾಂಗ್ರೆಸ್ ಮುಖಂಡ ಬಿಎಂಎಲ್ ಕಾಂತರಾಜ್ ಅವರಿಗೆ ಸೇರಿದ್ದು ಎಂಬ ಸುದ್ದಿ ಹಬ್ಬಿತ್ತು. ಆದರೆ, ಆರೋಪವನ್ನು ಅವರು ಅಲ್ಲಗಳೆದಿದ್ದಾರೆ.

‘ಐ.ಟಿ ಅಧಿಕಾರಿಗಳು ದಾಳಿ ಮಾಡಿರುವ ರಿಯಲ್ ಎಸ್ಟೇಟ್ ಉದ್ಯಮಿಗೂ ನನಗೂ ಯಾವುದೇ ನಂಟು ಇಲ್ಲ. ದುರುದ್ದೇಶದಿಂದ ನನ್ನ ಹೆಸರನ್ನು ಎಳೆದು ತರಲಾಗಿದೆ’ ಎಂದು ಕಾಂತರಾಜ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.



ಸಂಗೀತ ನಿರ್ದೇಶಕ ಹಂಸಲೇಖ ಅವರು ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಇದ್ದರು —ಪ್ರಜಾವಾಣಿ ಚಿತ್ರ/ ಅನೂಪ್ ರಾಘ ಟಿ

ಚಾಮುಂಡಿ ಬೆಟ್ಟದಲ್ಲಿ ನಾಡಹಬ್ಬಕ್ಕೆ ವಿಧ್ಯುಕ್ತ ಚಾಲನೆ

ಕನ್ನಡ ಶ್ರುತಿಯಾಗಲಿ, ಅಭಿವೃದ್ಧಿ ಕೃತಿಯಾಗಲಿ: ಹಂಸಲೇಖ

• ಕೆ.ನರಸಿಂಹಮೂರ್ತಿ

ಮೈಸೂರು: ನಾಡನ್ನು ಆವರಿಸಿದ ಬರಗಾಲ ಮತ್ತು ಕಾವೇರಿ ಹೋರಾಟದ ನಡುವೆಯೇ, ನಗರದ ಚಾಮುಂಡಿ ಬೆಟ್ಟದಲ್ಲಿ ಭಾನುವಾರ ಉದ್ಘಾಟನೆಗೊಂಡ ಸಂಭ್ರಮದ ದಸರಾ ಉತ್ಸವವು, ಕನ್ನಡ ಮತ್ತು ಕರ್ನಾಟಕದ ಅಭಿವೃದ್ಧಿ ಆಶಯಕ್ಕೆ ಮುನ್ನುಡಿ ಬರೆಯಿತು.

‘ಬರಗಾಲ ಕಳೆದು ಹಿಂಗಾರು ಮಳೆ ಚೆನ್ನಾಗಿ ಆಗಲಿ, ರೈತರಿಗೆ ಉತ್ತಮ ಬೆಳೆ ಸಿಗಲಿ’ ಎಂದು ಪ್ರಾರ್ಥಿಸಲಾಯಿತು. ಹತ್ತು ದಿನಗಳ ವೈವಿಧ್ಯಮಯ ಕಾರ್ಯಕ್ರಮಗಳಿಗೆ ಶುಭಾರಂಭವೂ ದೊರಕಿತು.

ಪತ್ನಿ ಲತಾ ಅವರೊಂದಿಗೆ ಉತ್ಸವಕ್ಕೆ ಚಾಲನೆ ನೀಡಿದ ಸಂಗೀತ ನಿರ್ದೇಶಕ ಹಂಸಲೇಖ, ‘ಕನ್ನಡ, ಕರ್ನಾಟಕದ ಅಭಿವೃದ್ಧಿಗೆ ದಸರಾ ಮುನ್ನುಡಿ ಬರೆಯಲಿ. ಕನ್ನಡ ಶ್ರುತಿಯಾಗಲಿ, ಅಭಿವೃದ್ಧಿ ಕೃತಿಯಾಗಲಿ’ ಎಂದು ಕರೆ ನೀಡಿದರು.

5ನೇ ಪುಟ ನೋಡಿ

76ನೇ ವಸಂತಕ್ಕೆ ಕಾಲಿಟ್ಟ ಪ್ರಜಾವಾಣಿ

ನಿಮ್ಮ ಮೆಚ್ಚಿನ ‘ಪ್ರಜಾವಾಣಿ’ ಪತ್ರಿಕೆ 76ನೇ ವಸಂತಕ್ಕೆ ಕಾಲಿಟ್ಟಿದೆ. ಸರಿಯಾಗಿ 75 ವರ್ಷಗಳ ಹಿಂದೆ (15-10-1948) ನಾಡಿನ ಜನರ ಶಕ್ತಿಯುತ ದನಿಯಾಗಿ ಆರಂಭವಾದ ‘ಪ್ರಜಾವಾಣಿ’ ಮೊದಲ ದಿನದಿಂದಲೂ ಸುದ್ದಿಯ ಘನತೆಯನ್ನು ಬಿಟ್ಟುಕೊಡದೆ ನಿಷ್ಪಕ್ಷಪಾತ, ನಿರ್ಭಿಡೆ ಪತ್ರಿಕೋದ್ಯಮ ನಡೆಸಿಕೊಂಡು ಬಂದಿದೆ. ಪತ್ರಿಕಾ ವೃತ್ತಿಯ ಪಾವಿತ್ರ್ಯವನ್ನು ಕಾಪಾಡುತ್ತಿದೆ. ಸಂಸ್ಥಾಪಕ ಕೆ.ಎನ್.ಗುರುಸ್ವಾಮಿ ಅವರ ಆದರ್ಶಗಳನ್ನು ಮುಂದುವರಿಸಿಕೊಂಡು ಹೋಗುತ್ತಿದೆ. ಯಾವುದೇ ಸಿದ್ಧಾಂತಕ್ಕೆ ಜೋತು ಬೀಳದೆ ಘಟನೆಗಳನ್ನು ಇದ್ದದ್ದು ಇದ್ದಂತೆ ಚಿತ್ರಿಸುವ ಬದ್ಧತೆಯೊಂದಿಗೆ ಮುನ್ನಡೆಯುತ್ತಿದೆ. ಪತ್ರಿಕೆಯು ಕಾಲಕಾಲಕ್ಕೆ ಹೊಸ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಬಂದಿದೆ. ಓದುಗರ ಹಿತವನ್ನು ಎಂದೂ ಬಿಟ್ಟುಕೊಟ್ಟಿಲ್ಲ. ಅಂತರ್ಜಾಲ ತಾಣ, ಇ-ಪೇಪರ್, ಪಾಡ್ ಕಾಸ್ಟ್, ವಿಡಿಯೊಗಳಲ್ಲಿಯೂ ಅದೇ ವಿಶ್ವಾಸ ಉಳಿಸಿಕೊಂಡಿದೆ. 75 ವರ್ಷಗಳಿಂದಲೂ ಕನ್ನಡನಾಡಿನ ಜೀವನಾಡಿಯೇ ಆಗಿರುವ ‘ಪ್ರಜಾವಾಣಿ’ಯನ್ನು ಕೈಹಿಡಿದು ಮುನ್ನಡೆಸಿದ ನಮ್ಮೆಲ್ಲ ಓದುಗರಿಗೆ, ವಿತರಕರಿಗೆ, ಜಾಹೀರಾತುದಾರರಿಗೆ ಕೃತಜ್ಞತೆಗಳು. ಜನಸಾಮಾನ್ಯರ ದೂರುದುಮ್ಮಾನಗಳಿಗೆ ಯಾವತ್ತೂ ಕಿವಿಯಾಗಿರುತ್ತೇವೆ. ಪತ್ರಿಕೋದ್ಯಮದ ಉನ್ನತ ಮೌಲ್ಯ ಎತ್ತಿಹಿಡಿಯುವುದನ್ನು ಮುಂದುವರಿಸುತ್ತೇವೆ. ನಿಮ್ಮ ಸಂಪೂರ್ಣ ಬೆಂಬಲ ಸದಾ ಇರಲಿ.

ಕಾರ್ಯನಿರ್ವಾಹಕ ಸಂಪಾದಕ

ಪ್ರತ್ಯೇಕ ಅಪಘಾತ 31 ಸಾವು

ಪ್ರಜಾವಾಣಿ ವಾರ್ತೆ

ಛತ್ರಪತಿ ಸಂಭಾಜಿನಗರ/ ತಿರುವಣ್ಣಾಮಲೈ/ ಜೈಪುರ: ದೇಶದ ವಿವಿಧೆಡೆ ಭಾನುವಾರ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಬೆಂಗಳೂರಿನ ಏಳು ಮಂದಿ ಸೇರಿದಂತೆ ಒಟ್ಟಾರೆ 31 ಜನರು ಮೃತಪಟ್ಟಿದ್ದಾರೆ.

ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರ ಜಿಲ್ಲೆಯ ಸಮೃದ್ಧಿ ಎಕ್ಸ್‌ಪ್ರೆಸ್ ವೇನಲ್ಲಿ ನಸುಕಿನಲ್ಲಿ ವೇಗವಾಗಿ ಬಂದ ಮಿನಿ ಬಸ್, ಸರಕು ಸಾಗಣೆಯ ಟ್ರಕ್‌ಗೆ ಡಿಕ್ಕಿ ಹೊಡೆದು ಮೂವರು ಅಪ್ರಾಪ್ತ ವಯಸ್ಕರು ಸೇರಿದಂತೆ 17 ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಿನಿ ಬಸ್ ಚಾಲಕ ಸೇರಿದಂತೆ 18 ಮಂದಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ತಮಿಳುನಾಡಿನ ದೇವಸ್ಥಾನಗಳಿಗೆ ಭೇಟಿ ನೀಡಿ ಬೆಂಗಳೂರಿಗೆ ವಾಪಸ್ ಆಗುತ್ತಿದ್ದ ಕುಟುಂಬದ ಸದಸ್ಯರಿದ್ದ ಕಾರು ತಿರುವಣ್ಣಾಮಲೈ-ಬೆಂಗಳೂರು ಹೆದ್ದಾರಿಯಲ್ಲಿ ಅಪಘಾತಕ್ಕೀಡಾಗಿದ್ದು, ಬೆಂಗಳೂರಿನ ಏಳು ಮಂದಿ ಮೃತಪಟ್ಟಿದ್ದಾರೆ. ರಾಜಸ್ಥಾನದ ಡುಂಗರಪುರ ಜಿಲ್ಲೆಯಲ್ಲಿ ಟ್ರಕ್ ಮತ್ತು ಜೀಪಿನ ನಡುವೆ ಡಿಕ್ಕಿ ಸಂಭವಿಸಿದ್ದು, ಏಳು ಮಂದಿ ಸ್ಥಳದಲ್ಲೇ ಮೃತಪಟ್ಟು, ಇತರ ಎಂಟು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಲವು ಶಾಸಕರಿಗೆ ತಪ್ಪಿದ ಟಿಕೆಟ್

ಮಧ್ಯಪ್ರದೇಶ, ಛತ್ತೀಸಗಢ, ತೆಲಂಗಾಣ ‘ಕೈ’ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧ್ಯಪ್ರದೇಶ, ಛತ್ತೀಸಗಢ, ತೆಲಂಗಾಣ ವಿಧಾನಸಭೆಗೆ ಮುಂದಿನ ತಿಂಗಳು ನಡೆಯಲಿರುವ ಚುನಾವಣೆಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಕಾಂಗ್ರೆಸ್ ಭಾನುವಾರ ಬಿಡುಗಡೆ ಮಾಡಿದೆ. ಪ್ರಮುಖರಾದ ಕಮಲ್‌ನಾಥ್, ಭೂಪೇಶ್ ಬಘೆಲ್, ಟಿ.ಎಸ್.ಸಿಂಗ್ ದೇವ್ ಹಾಗೂ ಸಂಸದರಾದ ಎ. ರೇವಂತ್ ರೆಡ್ಡಿ, ದೀಪಕ್ ಬೈಜ್ ಕಣದಲ್ಲಿ ಇರಲಿದ್ದಾರೆ.

ಮಧ್ಯಪ್ರದೇಶದ 230 ಸ್ಥಾನಗಳ ಪೈಕಿ 144 ಸ್ಥಾನಗಳಿಗೆ, ಛತ್ತೀಸಗಢದ 90 ಸ್ಥಾನಗಳ ಪೈಕಿ 30ಕ್ಕೆ, ತೆಲಂಗಾಣದಲ್ಲಿ 119 ಸ್ಥಾನಗಳ ಪೈಕಿ 55ಕ್ಕೆ ಅಭ್ಯರ್ಥಿಗಳ ಹೆಸರು ಘೋಷಿಸಲಾಗಿದೆ. ರಾಜಸ್ಥಾನ, ಮಿಜೋರಾಂ ಅಭ್ಯರ್ಥಿಗಳ ಪಟ್ಟಿ ಈ ವಾರ ಬಿಡುಗಡೆ ಆಗುವ ಸಾಧ್ಯತೆ ಇದೆ.

8ನೇ ಪುಟ ನೋಡಿ

ಪ್ರಜಾವಾಣಿ
ನವವರ್ಣ
5ಬಿ ಮತ್ತು 5ಡಿ ಪುಟಗಳನ್ನು ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಯುವಕರ ಮೇಲೆ ಪಿಡಿಒ ಹಲ್ಲೆ

ಕೆಂಭಾವಿ (ಯಾದಗಿರಿ ಜಿಲ್ಲೆ): ಶುದ್ಧ ಕುಡಿಯುವ ನೀರಿನ ಘಟಕದ ನಲ್ಲಿ (ನಳ) ಮುರಿದಿದ್ದರಿಂದ ರೊಚ್ಚಿಗೆದ್ದ ಪಿಡಿಒ ಪುತ್ರಪ್ಪಗೌಡ ವ್ಯಕ್ತಿಯೊಬ್ಬರಿಗೆ ಚಪ್ಪಲಿಯಿಂದ ಹೊಡೆದಿದ್ದಾರೆ. ಮತ್ತೊಬ್ಬರಿಗೆ ಕೆನ್ನೆಗೆ ಹೊಡೆದಿದ್ದಾರೆ.

ತಾಲ್ಲೂಕಿನ ಮಲ್ಲಾ (ಬಿ) ಗ್ರಾಮದಲ್ಲಿ ಘಟನೆ ನಡೆದಿದ್ದು, ಈ ಕುರಿತು ವಿಡಿಯೊ ಭಾನುವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಗ್ರಾಮಸ್ಥರಾದ ಸಿದ್ದಣ್ಣ ದೊಡ್ಡಮನಿ ಹಾಗೂ ಶಿವಶಂಕರ ತಳವಾರ ಗ್ರಾಮದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ನೀರು ತರಲು ಹೋಗಿದ್ದರು. ಆ ಸಂದರ್ಭದಲ್ಲಿ ಬಿಲ್‌ಕಲೆಕ್ಟರ್, 'ಕರೆಂಟ್ ಹೋಗಿದೆ. ಅದು ಬಂದ ಮೇಲೆ ನೀರು ಬಿಡುತ್ತೇನೆ' ಎಂದಿದ್ದಾರೆ. ಆ ವೇಳೆ ಮಾತಿಗೆ ಮಾತು ಬೆಳೆದಿದೆ. ಪಿಡಿಒ ಜತೆ ಪೋನ್‌ನಲ್ಲಿ ಮಾತನಾಡುವಂತೆ ಬಿಲ್ ಕಲೆಕ್ಟರ್ ತಿಳಿಸಿದ್ದಾರೆ. ಆಗ ಸಿದ್ದಣ್ಣ ಮಾತನಾಡಿದ್ದಾನೆ. ಆಗ ಪಿಡಿಒ ಪುತ್ರಪ್ಪಗೌಡ ಮತ್ತು ಸಿದ್ದಣ್ಣ ಒಬ್ಬರಿಗೊಬ್ಬರು ಅವಾಚ್ಯ ಶಬ್ದಗಳಿಂದ ನಿಂದಿಸಿಕೊಂಡಿದ್ದಾರೆ.

ಬಳಿಕ ಪಿಡಿಒ ಪುತ್ರಪ್ಪಗೌಡ ಅವರಿಬ್ಬರನ್ನೂ ಕರೆಯಿಸಿದ್ದಾರೆ. ಗ್ರಾಮ ಪಂಚಾಯಿತಿ ಆವರಣಕ್ಕೆ ಬರುತ್ತಿದ್ದಂತೆ ಒಬ್ಬರಿಗೆ ಚಪ್ಪಲಿಯಿಂದ ಹೊಡೆದು, ಮತ್ತೊಬ್ಬರಿಗೆ ಕೆನ್ನೆಗೆ ಹೊಡೆದಿದ್ದಾರೆ. ಈ ಕುರಿತು ಪಿಡಿಒ ಮತ್ತು ಗ್ರಾಮದ ಇಬ್ಬರ ಮೇಲೆ ಪ್ರಕರಣ ದಾಖಲಾಗಿದೆ.

'ಕನ್ನಡ ಕಣ್ಮಣಿ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಎಲ್‌. ಹನುಮಂತಯ್ಯ

ರಾಜಕುಮಾರ್‌ಗೆ ಕಾವ್ಯ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಚಿತ್ರರಂಗದಲ್ಲಿ ಯಾವ ಕಲಾವಿದನ ಬಗ್ಗೆ ಇಲ್ಲಿವರೆಗೆ ಕಾವ್ಯ ಸಂಪುಟ ಬಂದಿದ್ದಿಲ್ಲ. ಭಾರತೀಯ ಚಿತ್ರರಂಗದ ಅನರ್ಘ್ಯರತ್ನ ರಾಜಕುಮಾರ್ ಅವರಿಗೆ ಕಾವ್ಯದ ಮೂಲಕ ಇಂದು ಗೌರವ ಸಲ್ಲಿಕೆಯಾಗಿದೆ ಎಂದು ರಾಜ್ಯಸಭಾ ಸದಸ್ಯ ಎಲ್‌. ಹನುಮಂತಯ್ಯ ತಿಳಿಸಿದರು.

ಪೇರೂರು ಜಾರು ರಚಿಸಿರುವ 'ಕನ್ನಡ ಕಣ್ಮಣಿ ಡಾ. ರಾಜಕುಮಾರ್' ಕಾವ್ಯ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಟರ ಬಗ್ಗೆ ಚಿತ್ರ, ಸಾಕ್ಷ್ಯಚಿತ್ರ, ಅನುಭವ ಕಥನ ಬಂದಿರಬಹುದು. ಆದರೆ, ಕಾವ್ಯ ಇಲ್ಲಿವರೆಗೆ ಬಂದಿರಲಿಲ್ಲ. ಅಂಥ ಗೌರವ ಕನ್ನಡದ ನಟನಿಗೆ ಸಿಕ್ಕಿರುವುದು ಚಿತ್ರರಂಗದ ಭಾಗ್ಯ ಎಂದು ಬಣ್ಣಿಸಿದರು.

ಗೋಕಾಕ ಚಳವಳಿಯನ್ನು ರಾಜಕುಮಾರ್ ಆರಂಭಿಸಿದ್ದಲ್ಲ. ಆದರೆ, ಅವರು ನೇತೃತ್ವವಹಿಸಿದ ಮೇಲೆ ಈ ಹೋರಾಟ ಜನಚಳವಳಿಯಾಗಿ ಪರಿವರ್ತನೆಗೊಂಡಿತು. ಲಕ್ಷಾಂತರ ಕನ್ನಡಿಗರು ಚಳವಳಿಯಲ್ಲಿ ಭಾಗವಹಿಸುವಂತಾಗಿತ್ತು. ರಾಜಕುಮಾರ್ ಹೊರತುಪಡಿಸಿದ ಕನ್ನಡ ಚಿತ್ರರಂಗವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ತಾಂತ್ರಿಕತೆ ಬೆಳೆದಿಲ್ಲದ, ಹಣ ಹಾಕಿ ಚಿತ್ರ ಮಾಡುವುದು ಕಷ್ಟ ಇದ್ದ, ಕಪ್ಪು ಬಿಳುಪಿನ ಕಾಲದಲ್ಲಿ ರಂಗಭೂಮಿಯಿಂದ ಸಿನಿಮಾರಂಗಕ್ಕೆ ಪ್ರವೇಶಿಸಿದ ರಾಜಕುಮಾರ್ ಕನ್ನಡ ಚಿತ್ರರಂಗ ಬೆಳೆಯಲು ಕಾರಣರಾದರು ಎಂದು ನೆನಪು ಮಾಡಿಕೊಂಡರು.

'ಪುನೀತ್ ರಾಜಕುಮಾರ್ ನಿಧನರಾದಾಗ ಅವರು ಮಾಡುತ್ತಿದ್ದ ಸೇವೆಗಳು ಏನು ಎಂಬುದು ಗೊತ್ತಾಯಿತು. ಅಲ್ಲಿವರೆಗೆ ಯಾರಿಗೂ ಗೊತ್ತಿರಲಿಲ್ಲ. ಅದೇ ರೀತಿಯ ಸೇವೆಗಳನ್ನು ರಾಜಕುಮಾರ್ ಕೂಡ ಮಾಡುತ್ತಿದ್ದರು' ಎಂದು ತಿಳಿಸಿದರು.

ಸಾಹಿತಿ ಕೆ. ಷರೀಫಾ ಮಾತನಾಡಿ, 'ಹೊಸತನದ ಸಿನಿಮಾಗಳು ಬಹಳ ಬಂದಿರಬಹುದು. ಆದರೆ, ಸದಭಿರುಚಿಯ ಚಿತ್ರಗಳು ಬಹಳ ಇಲ್ಲ. ರಾಜಕುಮಾರ್ ಅವರ ಎಲ್ಲ ಚಿತ್ರಗಳು ಸದಭಿರುಚಿಯದ್ದಾಗಿದ್ದವು. ಶಿಕ್ಷಣವಿಲ್ಲದ, ಹಣವಿಲ್ಲದ, ಗಾಡ್‌ಫಾದರ್‌ಗಳಿಲ್ಲದ ರಾಜಕುಮಾರ್ ಸ್ವಂತ ಪ್ರತಿಭೆಯಿಂದಲೇ ಬೆಳೆದವರು' ಎಂದು ಹೇಳಿದರು.

ರಾಜಕುಮಾರ್ ಅವರ ಮಗಳು ಲಕ್ಷ್ಮೀ ಗೋವಿಂದರಾಜ್, 'ವಿಶಾಲ ಜನಸಂಕುಲ'ದ ಎ.ಕೆ. ಕರುಣಾಕರ ಇದ್ದರು.



ಪೇರೂರು ಜಾರು ಅವರು 'ಕನ್ನಡ ಕಣ್ಮಣಿ ಡಾ. ರಾಜಕುಮಾರ್' ಪುಸ್ತಕವನ್ನು ರಾಜಕುಮಾರ್ ಅವರ ಮಗಳು ಲಕ್ಷ್ಮೀ ಗೋವಿಂದರಾಜ್ ಅವರಿಗೆ ಹಸ್ತಾಂತರಿಸಿದರು. ಎಸ್‌.ಎ. ಗೋವಿಂದರಾಜ್, ಕೆ. ಷರೀಫಾ, ಎಲ್‌. ಹನುಮಂತಯ್ಯ, ಟಿ. ಲಕ್ಷ್ಮಿನಾರಾಯಣ, ಪ್ರಕಾಶ್ ರಾಜ್ ಮೇಹು, ಬಸ್ಸಪ್ಪ ಬಂಗಾರಿ ಇದ್ದರು. –ಪ್ರಜಾವಾಣಿ ಚಿತ್ರ

'ಹಾಡಿಗೆ ಸಂಭಾವನೆ ಪಡೆಯುತ್ತಿದ್ದ ಅಪ್ಪಾಜಿ'

ಅಮ್ಮ (ಪಾರ್ವತಮ್ಮ) ಅವರೇ ಚಿತ್ರ ನಿರ್ಮಿಸುತ್ತಿದ್ದರೂ ಅದರಲ್ಲಿ ಅಪ್ಪಾಜಿ (ರಾಜಕುಮಾರ್) ಹಾಡುತ್ತಿದ್ದ ಹಾಡುಗಳಿಗೆ ಸಂಭಾವನೆ ಪಡೆಯುತ್ತಿದ್ದರು ಎಂದು ರಾಜಕುಮಾರ್ ಅವರ ಅಳಿಯ ಎಸ್‌.ಎ. ಗೋವಿಂದರಾಜ್ ನೆನಪು ಮಾಡಿಕೊಂಡರು.

ಹಾಡು ಮುಗಿದ ಕೂಡಲೇ 'ನನ್ನ ಸಂಭಾವನೆ ಕೊಡು' ಎಂದು ಕೇಳಿ ಪಡೆಯುತ್ತಿದ್ದ ಅಪ್ಪಾಜಿ, ಅಶಕ್ತರಿಗೆ ನೀಡುತ್ತಿದ್ದರು ಎಂದು ಹೇಳಿದರು.

ಪುಸ್ತಕ ಪರಿಚಯ

ಕೃತಿ: 'ಕನ್ನಡ ಕಣ್ಮಣಿ ಡಾ. ರಾಜಕುಮಾರ್'
ಕವಿ: ಪೇರೂರು ಜಾರು
ಪ್ರಕಾಶಕ: ತೂಟೆ ಪ್ರಕಾಶನಾಲಯ
ಪುಟ: 324
ದರ: ₹ 300

ಸುದ್ದಿ 2 ನಿಮಿಷ

ಮೊಳಕಾಲ್ಮುರು: ತಂದೆ ಬೀಸಿದ ಕತ್ತರಿಗೆ ಮಗ ಬಲಿ

ಮೊಳಕಾಲ್ಮುರು (ಚಿತ್ರದುರ್ಗ): 'ಟಿ.ವಿ ರಿಮೋಟ್ ಬೇಕು' ಎಂಬ ವಿಚಾರಕ್ಕಾಗಿ ಇಬ್ಬರು ಮಕ್ಕಳ ಮಧ್ಯೆ ನಡೆದ ಗಲಾಟೆಯಿಂದ ಸಿಟ್ಟಿಗೆದ್ದ ತಂದೆ ಬೀಸಿ ಎಸೆದ ಕತ್ತರಿಯು ಮಗನನ್ನು ಬಲಿ ಪಡೆದಿದೆ. ಇದು ಪಟ್ಟಣದ ಎನ್‌ಎಂಎಸ್ ಬಡಾವಣೆಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಚಂದ್ರಶೇಖರ್ (16) ಮೃತ ಬಾಲಕ. ಪಾರ್ಶ್ವವಾಯು ಪೀಡಿತರಾಗಿರುವ ಲಕ್ಷ್ಮಣಬಾಬು ಮಗನತ್ತ ಕತ್ತರಿ ಬೀಸಿರುವ ಆರೋಪಿ. ಚಂದ್ರಶೇಖರ್ ಹಾಗೂ ಆತನ ತಮ್ಮ ಪವನ್ ಕುಮಾರ್ (14) ಟಿ.ವಿ ರಿಮೋಟ್‌ಗಾಗಿ ಜಗಳವಾಡುತ್ತಿದ್ದರು. ಆಗ ಲಕ್ಷ್ಮಣಬಾಬು, 'ಕಚ್ಚಾಡಬೇಡಿ' ಎಂದು ಬೈದರೂ ಕೇಳದಿದ್ದಾಗ ಸಿಟ್ಟಿಗೆದ್ದು, ಪಕ್ಕದಲ್ಲಿದ್ದ ಕತ್ತರಿಯನ್ನು ಚಂದ್ರಶೇಖರ್ ಕಡೆಗೆ ಬೀಸಿದ್ದಾರೆ. ಕತ್ತರಿ ಕುತ್ತಿಗೆಯ ಬಲಭಾಗಕ್ಕೆ ಬಿದ್ದ ಕಾರಣ ಚಂದ್ರಶೇಖರ್ ತೀವ್ರ ಗಾಯಗೊಂಡಿದ್ದ.

ಗಲಾಟೆಯ ಶಬ್ದ ಕೇಳಿದ ತಕ್ಷಣ ಚಂದ್ರಶೇಖರನ ತಾಯಿ ಲಕ್ಷ್ಮಿ ಅಡುಗೆ ಮನೆಯಿಂದ ಓಡಿಬಂದು ಗಾಯಾಳು ಪುತ್ರನನ್ನು ಪಟ್ಟಣದ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದರು. ಹೆಚ್ಚಿನ ಚಿಕಿತ್ಸೆಗೆ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಚಂದ್ರಶೇಖರ್ ಮೃತಪಟ್ಟಿದ್ದಾನೆ. ಪಿಯುಸಿ ಓದುತ್ತಿದ್ದ ಚಂದ್ರಶೇಖರ್ ರಜೆ ಇದ್ದಾಗ ಕೂಲಿ ಕೆಲಸಕ್ಕೆ ಹೋಗುತ್ತಿದ್ದ.

ತಂದೆ ಲಕ್ಷಣಬಾಬು ಪಾರ್ಶ್ವವಾಯು ಪೀಡಿತರಾಗಿದ್ದು, ಒಂದು ಕಾಲು, ಒಂದು ಕೈ ಸ್ವಾಧೀನದಲ್ಲಿ ಇಲ್ಲ. ಮಕ್ಕಳ ಜಗಳ ಬಿಡಿಸಲು ಎದ್ದು ಹೋಗಲಾಗದ ಸ್ಥಿತಿಯಲ್ಲಿದ್ದ ಅವರು, ಕೋಪಗೊಂಡು ಕುಳಿತಲ್ಲಿಂದಲೇ ಪಕ್ಕದಲ್ಲಿದ್ದ ಕತ್ತರಿ ಎಸೆದಿದ್ದಾರೆ. ಲಕ್ಷ್ಮಣ ಬಾಬು ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರಾಮನಗರ:ರೌಡಿ ಶೀಟರ್ ಕೊಲೆ

ರಾಮನಗರ: ತಾಲ್ಲೂಕಿನ ಕೈಲಾಂಚ ಹೋಬಳಿಯ ಕೆರೆಮೇಗಳದೊಡ್ಡಿ ಗ್ರಾಮದ ರೌಡಿಶೀಟರ್ ಲೋಕೇಶ್ (49) ಎಂಬಾತನನ್ನು ದುಷ್ಕರ್ಮಿಗಳು ಮಾರಕಾಸ್ತ್ರದಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಶನಿವಾರ ರಾತ್ರಿ ನಡೆದಿದೆ.

ದುಷ್ಕರ್ಮಿಗಳು ಲೋಕೇಶ್ ಮನೆ ಬಳಿಯೇ ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಮತ್ತು ಡಿವೈಎಸ್ಪಿ ದಿನಕರ ಶೆಟ್ಟಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಲೋಕೇಶ್ ವಿರುದ್ಧ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕೊಲೆ, ಕೊಲೆ ಯತ್ನ ಸೇರಿದಂತೆ ಕೆಲವು ಪ್ರಕರಣಗಳು ದಾಖಲಾಗಿದ್ದವು. ಹಳೆ ದ್ವೇಷದ ಹಿನ್ನೆಲೆಯಲ್ಲಿ ಕೃತ್ಯ ನಡೆದಿರುವ ಶಂಕೆಯಿದೆ. ಮೃತದೇಹವನ್ನು ಮರಣೋ

ತ್ತರ ಪರೀಕ್ಷೆಗೆ ಕಳಿಸಲಾಗಿದ್ದು, ಆರೋಪಿ ಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಪೀಣ್ಯ ದಾಸರಹಳ್ಳಿ ಸಮೀಪದ ಶೆಟ್ಟಿಹಳ್ಳಿಯಲ್ಲಿ ನಡೆದ ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಅವರ ಜನ್ಮದಿನಾಚರಣೆಯಲ್ಲಿ ಶಾಸಕ ಎಸ್‌. ಮುನಿರಾಜು, ಮುಖಂಡರಾದ ಮುಬಾರಕ್, ಜಬ್ಬರ್, ರಮೇಶ್ ಯಾದವ್, ಗಂಗರಾಜು ಪಾಲ್ಗೊಂಡಿದ್ದರು

ರಾಮನಗರಕ್ಕೆ ಕಸ: ಎಚ್‌ಡಿಕೆ ವಿರೋಧ

ಪ್ರಜಾವಾಣಿ ವಾರ್ತೆ

ರಾಮನಗರ: 'ರಾಮನಗರ ಜಿಲ್ಲೆ ಸೇರಿದಂತೆ ರಾಜಧಾನಿ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಬೆಂಗಳೂರಿನ ಕಸ ಸುರಿಯುವ ನಿರ್ಧಾರವನ್ನು ಸರ್ಕಾರ ಕೂಡಲೇ ಕೈಬಿಡದಿದ್ದರೆ ಜನರು ಬೀದಿಗೆ ಇಳಿದಾರು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

'ಅಕ್ಕಪಕ್ಕದ ಜಿಲ್ಲೆಗಳ ಜನರ ಸಮಾಧಿ ಮೇಲೆ ಬ್ರ್ಯಾಂಡ್ ಬೆಂಗಳೂರು ಕಟ್ಟಿದರೆ ಅದಕ್ಕೆ ನಮ್ಮ ತೀವ್ರ ವಿರೋಧವಿದೆ. ಸಿಕ್ಕಸಿಕ್ಕ ಕಡೆ ಬಾಯಿ ಹಾಕುತ್ತಿರುವ 'ಪರ್ಸಂಟೇಜ್ ಪಟಾಲಂ' ಈಗ ಕಸಕ್ಕೂ ಬಾಯಿ ಹಾಕಿದೆ' ಎಂದು ಭಾನುವಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಬ್ರ್ಯಾಂಡ್ ಬೆಂಗಳೂರು ಕೆಲವರಿಗೆ ಬಿರಿಯಾನಿ. ಅದರ ಒಳಗುಟ್ಟು ರಟ್ಟಾಗಿದೆ. ಬ್ರ್ಯಾಂಡ್ ಹೆಸರಿನಲ್ಲಿ ಕೊಳ್ಳೆ ಹೊಡೆಯಲು, ಕಂಡ ಕಂಡ ಕಡೆ ಬೇಲಿ ಹಾಕಲು ಬೆಂಗಳೂರಿನ ನಾಲ್ಕೂ ದಿಕ್ಕುಗಳಲ್ಲಿಯೂ ಕಸದ ಡಂಪಿಂಗ್ ಯಾರ್ಡ್ ಸೃಷ್ಟಿ ಮಾಡುತ್ತಿರುವುದು ದಿಟ. ದಿನವೊಂದಕ್ಕೆ 1,630 ಟನ್ ಕಸ ಸುರಿದರೆ ಅಲ್ಲಿನ ಜನರ ಪಾಡೇನು' ಎಂದು ಪ್ರಶ್ನಿಸಿದ್ದಾರೆ.

'ಮಂಡೂರು ಜನ ಎದುರಿಸಿದ ಕಷ್ಟ ಅಷ್ಟಿಷ್ಟಲ್ಲ. ಯಶವಂತಪುರ ಕ್ಷೇತ್ರದ ಜನ ಈ ನರಕದಲ್ಲೇ ಬೇಯುತ್ತಿದ್ದಾರೆ. ದೊಡ್ಡಬಳ್ಳಾಪುರದ ಜನರೂ ಕಸದ ಕಷ್ಟಕ್ಕೆ ಸಿಲುಕಿದ್ದಾರೆ. ಈಗ ರಾಮನಗರದ ಸರದಿ. ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳನ್ನು ಕಸದ ತೊಟ್ಟಿಗಳನ್ನಾಗಿ ಮಾಡಿ ಸಾವಿನ ದಿಬ್ಬ ನಿರ್ಮಿಸಲು ಬ್ರ್ಯಾಂಡ್ ಬೆಂಗಳೂರು ಹೆಸರಿನಲ್ಲಿ ಹುನ್ನಾರ ಹೂಡಲಾಗಿದೆ. ಇದು ಘೋರ ಅಕ್ಷಮ್ಯ ಹಾಗೂ ರಾಜಧಾನಿಯ ಆಸುಪಾಸಿನಲ್ಲಿ ಈಗಾಗಲೇ ಕೆಟ್ಟಿರುವ ಪರಿಸರವನ್ನು ಮತ್ತಷ್ಟು ಹಾಳು ಮಾಡುವ ದುಷ್ಟ ತಂತ್ರವಷ್ಟೇ' ಎಂದು ಟೀಕಿಸಿದ್ದಾರೆ.

'ಬೆಂಗಳೂರು ಅಕ್ಕಪಕ್ಕದ ಜಿಲ್ಲೆಗಳು ಕೃಷಿ, ತೋಟಗಾರಿಕೆ, ಹೈನುಗಾರಿಕೆಯಲ್ಲಿ ಸಮೃದ್ಧವಾಗಿವೆ. ಅಲ್ಲಿನ ಪರಿಸರ, ಜೀವ ವೈವಿಧ್ಯಕ್ಕೆ ಹಾನಿ ಮಾಡಿ, ಜನಜೀವನವನ್ನು ಸರ್ವನಾಶ ಮಾಡುವುದು ಒಂದೆಡೆಯಾದರೆ, ಹೊಸ ಡಂಪಿಂಗ್ ಯಾರ್ಡ್‌ಗಳ ಮೂಲಕ ಕೋಟಿಗಟ್ಟಲೇ ಹಣವನ್ನು ಜೇಬಿಗೆ ಡಂಪ್ ಮಾಡಿಕೊಳ್ಳುವ ಖತರ್‌ನಾಕ್ ಯೋಜನೆ ಇನ್ನೊಂದೆಡೆ ಅಡಗಿದೆ' ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ.

'ಜಗತ್ತಿನಲ್ಲಿಯೇ ಉತ್ಕೃಷ್ಟ ಮಾವು, ರೇಷ್ಮೆ, ಹಣ್ಣು, ತರಕಾರಿ ಬೆಳೆಯುತ್ತಿರುವ ರಾಮನಗರ, ಬಿಡದಿ ಬಳಿ ನೂರು ಎಕರೆ ಪ್ರದೇಶದಲ್ಲಿ ಕಸ ಸುರಿಯಲು ಉಪ ಮುಖ್ಯಮಂತ್ರಿಗಳ ದೊಡ್ಡ ಹುನ್ನಾರದ ಒಳ ಉದ್ದೇಶ ಸ್ಪಷ್ಟ. ಈಗಾಗಲೇ ವೃಷಭಾವತಿ ಸೇರಿ ರಾಮನಗರ ಜಿಲ್ಲೆಯ ಜಲಮೂಲಗಳು ಪೂರ್ಣ ಹಾಳಾಗಿ ಅಂತರ್ಜಲವೂ ಕಲುಷಿತವಾಗಿದೆ' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ. 'ನೂರು ಎಕರೆ ಸರ್ಕಾರಿ ಭೂಮಿಯನ್ನು ಅನಾಮತ್ತಾಗಿ ಎಗರಿಸಿಬಿಡುವ ರಿಯಲ್ ಎಸ್ಟೇಟ್ ಬ್ರ್ಯಾಂಡೆಡ್ ಪರಿಕಲ್ಪನೆ ಇದಲ್ಲದೆ ಮತ್ತೇನು ಅಲ್ಲ. ಕಾಂಗ್ರೆಸ್ ಸರ್ಕಾರ ಈ ನಿರ್ಧಾರವನ್ನು ಕೈಬಿಡದಿದ್ದರೆ ಜನರು ಬೀದಿಗೆ ಇಳಿಯುವುದು ಖಚಿತ' ಎಂದು ಕುಮಾರಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ನಿಧನ ವಾರ್ತೆ

ಸಿದ್ಧಲಿಂಗೇಶ್ವರ ಸ್ವಾಮೀಜಿ



ಗೋಕಾಕ: ಸಮೀಪದ ಅರಭಾವಿಮಠ ಗ್ರಾಮದ ದುರದುಂಡೇಶ್ವರ ಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿ(75) ಭಾನುವಾರ ಲಿಂಗೈಕ್ಯರಾದರು.

ರಾತ್ರಿ ಪೂಜೆಗೆ ಸಿದ್ಧತೆ ನಡೆಸಿದ ವೇಳೆ ಕುಸಿದು ಬಿದ್ದರು. ತಕ್ಷಣವೇ ಅವರನ್ನು ಗೋಕಾಕದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಶ್ರೀಗಳು ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾಗಿ ವೈದ್ಯರು ತಿಳಿಸಿದರು ಎಂದು ಮಠದ ಮೂಲಗಳು ತಿಳಿಸಿವೆ.

ಡಿ.ಶಾಂತ್‌ರಾಜ್



ಬೆಂಗಳೂರು: ಬನಶಂಕರಿ ಮೂರನೇ ಹಂತದ ಕತ್ರಿಗುಪ್ಪೆ ನಿವಾಸಿ, ಬಿಇಎಲ್ (ಜಾಲಹಳ್ಳಿ) ನಿವೃತ್ತ ನೌಕರ ಡಿ.ಶಾಂತ್‌ರಾಜ್ (76) ಅವರು ಶನಿವಾರ ನಿಧನರಾದರು.

ಇವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ಸಂಜೆ ಹೊಸೂರು ರಸ್ತೆಯ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡ್ರೋನ್ ಪತ್ತೆ

ಫಿರೋಜಪುರ (ಪಿಟಿಐ): ಪಂಜಾಬ್‌ನ ಫಿರೋಜಪುರ ಜಿಲ್ಲೆಯ ಅಂತರರಾಷ್ಟ್ರೀಯ ಗಡಿ ಸಮೀಪದ ಭತ್ತದ ಗದ್ದೆಯಲ್ಲಿ ಡ್ರೋನ್‌ವೊಂದು ಪತ್ತೆಯಾಗಿದೆ ಎಂದು ಗಡಿ ಭದ್ರತಾ ಪಡೆ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಬಿಎಸ್‌ಎಫ್ ಯೋಧರು ಚಾಕ್ ಭಂಗೆವಾಲಾ ಗ್ರಾಮದ ಹೊರವಲಯದಲ್ಲಿ ಶನಿವಾರ ಸಂಜೆ ಶೋಧ ನಡೆಸಿದಾಗ ಡ್ರೋನ್ ಪತ್ತೆಯಾಗಿದೆ ಎಂದು ಹೇಳಿದ್ದಾರೆ.

ಕೊಲೆ: ಗುಂಡಿಯಲ್ಲಿ ಮೃತದೇಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಶಕೀಲ್ ಅಕ್ತರ್ ಸೈಫಿ (28) ಅವರನ್ನು ಕೊಲೆ ಮಾಡಲಾಗಿದ್ದು, ಕಟ್ಟಡವೊಂದರ ಗುಂಡಿಯಲ್ಲಿ ಅವರ ಮೃತದೇಹ ಪತ್ತೆಯಾಗಿದೆ.

'ಬಿಹಾರದ ಶಕೀಲ್ ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಕಾರ್ಯಕ್ರಮ ಸಂಘಟನಾ ಸಂಸ್ಥೆಯೊಂದರಲ್ಲಿ ಕಾರ್ಪೆಂಟರ್ ಆಗಿ ಕೆಲಸ ಮಾಡುತ್ತಿದ್ದರು. ಕೋಗಿಲು ಬಡಾವಣೆಯಲ್ಲಿರುವ ಕಟ್ಟಡವೊಂದರ ಗುಂಡಿ ಯಲ್ಲಿ ಇವರ ಮೃತದೇಹ ಪತ್ತೆಯಾಗಿದೆ' ಎಂದು ಪೊಲೀಸರು ಹೇಳಿದರು.

'ಬಿಹಾರದ ಯುವತಿಯನ್ನು ಶಕೀಲ್ ಮದುವೆಯಾಗಿದ್ದರು. ಆದರೆ, ಪತ್ನಿಯನ್ನೂ ಬಿಹಾರದಲ್ಲಿಯೇ ಬಿಟ್ಟಿದ್ದರು. ಬೆಂಗಳೂರಿಗೆ ಬಂದಿದ್ದ ಶಕೀಲ್, ಇಲ್ಲಿಯೇ ಎರಡನೇ ಮದುವೆಯಾಗಿದ್ದರು. ಎರಡನೇ ಪತ್ನಿ ಹಾಗೂ ಮಗು ಜೊತೆ ಕೋಗಿಲು ಬಡಾವಣೆಯ ಮನೆಯೊಂದರಲ್ಲಿ ವಾಸವಿದ್ದರು.'

'ಮೃತದೇಹ ನೋಡಿದ್ದ ಕಟ್ಟಡದ ಮಾಲೀಕರು ಠಾಣೆಗೆ ಮಾಹಿತಿ ನೀಡಿದ್ದರು. ಅವರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದರು.

ಮಾರಕಾಸ್ತ್ರಗಳಿಂದ ಹೊಡೆದು ಕೊಲೆ: 'ಮೃತದೇಹಗಳ ಮೇಲೆ ಗಾಯದ ಗುರುತುಗಳಿವೆ. ಶಕೀಲ್ ಅವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಿರುವ ಅನುಮಾನವಿದೆ' ಎಂದು ಪೊಲೀಸರು ತಿಳಿಸಿದರು.

'ಬೇರೆ ಜಾಗದಲ್ಲಿ ಶಕೀಲ್ ಅವರನ್ನು ಕೊಂದಿರುವ ದುಷ್ಕರ್ಮಿಗಳು, ಮೃತದೇಹವನ್ನು ಬೆಡ್‌ಶೀಟ್‌ನಲ್ಲಿ ಸುತ್ತಿ ಗುಂಡಿಗೆ ತಂದು ಎಸೆದಿದ್ದಾರೆ. ಪರಿಚಯಸ್ಥರೇ ಕೃತ್ಯ ಎಸಗಿರುವ ಸಂಶಯವಿದೆ' ಎಂದು ಹೇಳಿದರು.

ಪಾನ್ ಕಾರ್ಡ್ ಜೋಡಣೆ ನೆಪ: ವಂಚನೆ

ಬೆಂಗಳೂರು: ಬ್ಯಾಂಕ್ ಖಾತೆಗೆ ಪಾನ್ ಕಾರ್ಡ್ ಜೋಡಣೆ ಮಾಡಬೇಕೆಂದು ಹೇಳಿ ಪ್ರಾಂಶುಪಾಲರೊಬ್ಬರ ಖಾತೆಯಿಂದ ₹ 2.32 ಲಕ್ಷ ವರ್ಗಾಯಿಸಿಕೊಂಡು ವಂಚಿಸಲಾಗಿದ್ದು, ಈ ಸಂಬಂಧ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಗರದ ಕಾಲೇಜೊಂದರ ಪ್ರಾಂಶುಪಾಲರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಆಕ್ಸಿಸ್ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದಾರೆ. 'ನಿಮ್ಮ ಬ್ಯಾಂಕ್ ಖಾತೆಗೆ ಪಾನ್ ಕಾರ್ಡ್ ಜೋಡಣೆ ಮಾಡಿಸಬೇಕು. ಇಲ್ಲದಿದ್ದರೆ, ಖಾತೆ ನಿಷ್ಕ್ರಿಯವಾಗುತ್ತದೆ' ಎಂಬುದಾಗಿ ದೂರುದಾರರ ಮೊಬೈಲ್‌ಗೆ ಅ. 10ರಂದು ಸಂದೇಶ ಬಂದಿತ್ತು. 'ಸಂದೇಶ ನಿಜವೆಂದು ನಂಬಿದ್ದ ದೂರುದಾರ, ಅದರಲ್ಲಿದ್ದ ಲಿಂಕ್ ಒತ್ತಿದ್ದರು. ಅದರಲ್ಲಿರುವ ಮಾಹಿತಿ ಭರ್ತಿ ಮಾಡಿದ್ದರು. ಇದಾದ ಕೂಡಲೇ ದೂರುದಾರರ ಖಾತೆಯಲ್ಲಿದ್ದ ₹ 2.32 ಲಕ್ಷ ಕಡಿತವಾಗಿದೆ' ಎಂದಿವೆ.

ಅಪರಾಧ ಸುದ್ದಿ



ಪ್ರೀತಿಯ ಬಂಡಿ...

ಬೆಂಗಳೂರು ಜೆ.ಸಿ. ರಸ್ತೆಯಲ್ಲಿ ಕಡ್ಲೆಕಾಯಿ ವ್ಯಾಪಾರಿಯೊಬ್ಬರು ತನ್ನ ಮಕ್ಕಳೊಂದಿಗೆ ಲವಲವಿಕೆಯಿಂದ ಹೆಜ್ಜೆ ಹಾಕಿದರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಕ್ಯಾಂಟರ್ ಡಿಕ್ಕಿ: ಆಸ್ಪತ್ರೆಯಲ್ಲಿ ಪಾದಚಾರಿ ಸಾವು

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ನಗರದ ಚೇಳೂರು ವೃತ್ತದಲ್ಲಿ ಶನಿವಾರ ಟೊಮೆಟೊ ಸಾಗಾಣಿಕೆ ಮಾಡುವ ಕ್ಯಾಂಟರ್ ಡಿಕ್ಕಿ ಹೊಡೆದು ಗಾಯಗೊಂಡಿದ್ದ ಪಾದಚಾರಿ ಕೋಲಾರದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ನಗರದ ವಿನೋಬಾ ಕಾಲೋನಿಯ ಕೃಷ್ಣಪ್ಪ (46) ಮೃತಪಟ್ಟ ವ್ಯಕ್ತಿ. ಎಪಿಎಂಸಿ ಮಾರುಕಟ್ಟೆಯಲ್ಲಿ ಹಮಾಲಿ ಕೆಲಸ ಮಾಡುವ ಕೃಷ್ಣಪ್ಪ ಮಧ್ಯಾಹ್ನ ಮನೆಗೆ ನಡೆದು ಬರುತ್ತಿದ್ದಾಗ ಕ್ಯಾಂಟರ್ ವಾಹನದ ಚಾಲಕ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆ ಮಾಡಿ ಡಿಕ್ಕಿ ಹೊಡೆದಿದೆ. ಕೃಷ್ಣಪ್ಪನ ಕಾಲಿನ ಮೇಲೆ ಚಕ್ರ ಹರಿದು ತೀವ್ರವಾಗಿ ಗಾಯಗೊಂಡಿದ್ದರು.

ಮನೆ ಬೀಗ ಮುರಿದು ಕಳವು

ಚಿಂತಾಮಣಿ: ತಾಲ್ಲೂಕಿನ ಪೆರಮಾಚನಹಳ್ಳಿ ಗ್ರಾಮದಲ್ಲಿ ಮನೆಯವರು ಬೀಗ ಹಾಕಿಕೊಂಡು ಊರಿಗೆ ಹೋಗಿದ್ದ ಸಂದರ್ಭವನ್ನು ಬಳಸಿಕೊಂಡಿರುವ ಕಳ್ಳರು ಬೀಗಮುರಿದು ಒಳನುಗ್ಗಿ ₹2.81 ಲಕ್ಷ ಮೌಲ್ಯದ ಆಭರಣಗಳನ್ನು ಕಳ್ಳತನ ಮಾಡಿದ್ದಾರೆ ಎಂದು ಗ್ರಾಮಾಂತರ ಠಾಣೆಗೆ ಶನಿವಾರ ದೂರು ನೀಡಲಾಗಿದೆ.

ಗ್ರಾಮದ ನಾರಾಯಣಮ್ಮ ಅಕ್ಟೋಬರ್ 3 ರಂದು ಮನೆಗೆ ಬೀಗ ಹಾಕಿ ಚೆನ್ನೈಗೆ ಹೋಗಿದ್ದರು. ಶನಿವಾರ ವಾಪಸ್ ಬಂದು ನೋಡಿದಾಗ ಕಳ್ಳತನವಾಗಿರುವುದು ಗೊತ್ತಾಗಿದೆ. ಒಂದು ಲಕ್ಷ ನಗದು, 32 ಗ್ರಾಂ ತೂಕದ ಮಾಂಗಲ್ಯ ಸರ, 20 ಗ್ರಾಂ ತೂಕದ 4 ಬೆಳ್ಳಿಯ ಕುಂಕುಮ ಬಟ್ಟಲು, 20 ಗ್ರಾಂ ನ 4 ಬೆಳ್ಳಿಯ ಬಳೆ, 10 ಗ್ರಾಂ ಬಂಗಾರದ ಸರ, 5 ಗ್ರಾಂ ಚಿನ್ನದ ಉಂಗುರ, 5 ಗ್ರಾಂ ಚಿನ್ನದ ಸರ ಕಳ್ಳತನವಾಗಿದೆ.

ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಿದ ಶಾಸಕ ಎಸ್‌.ಆರ್‌.ವಿಶ್ವನಾಥ್

'ಇಟಗಲ್‌ಪುರ ಕೆರೆ ಕಾಮಗಾರಿ ಶೀಘ್ರ ಪೂರ್ಣ'

ಪ್ರಜಾವಾಣಿ ವಾರ್ತೆ

ಯಲಹಂಕ: ಇಟಗಲ್ ಪುರ ಕೆರೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್‌.ಆರ್‌.ವಿಶ್ವನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕೆರೆಗಳು ಗ್ರಾಮಗಳ ಜೀವಾಳವಾಗಿದ್ದು, ಅವುಗಳನ್ನು ಪುನಶ್ಚೇತನಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

'ಸುಮಾರು 10 ಎಕರೆ ವಿಸ್ತೀರ್ಣದ ಪುರಾತನ ಇಟಗಲ್ ಪುರ ಕೆರೆಯು ಅಭಿವೃದ್ಧಿಯಾಗದೆ ಅಂತರ್ಜಲಮಟ್ಟ ಕುಸಿದು, ಕೃಷಿ ಮತ್ತು ಕುಡಿಯುವ ನೀರಿಗೂ ಸಮಸ್ಯೆಯಾಗಿತ್ತು. ಈ ದಿಸೆಯಲ್ಲಿ ವೈಜ್ಞಾನಿಕ ಮತ್ತು ಸಮಗ್ರವಾಗಿ ಕೆರೆಯನ್ನು ಅಭಿವೃದ್ಧಿಗೊಳಿಸಿ, ಅಂತರ್ಜಲ ಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಆರ್‌ಸಿಬಿ, ಇಂಡಿಯಾ ಕೇರ್ಸ್ ಫೌಂಡೇಶನ್ ಸೇರಿದಂತೆ ಖಾಸಗಿ ಸಂಸ್ಥೆಗಳು ಹಾಗೂ ಗ್ರಾಮಸ್ಥರ ಸಹಭಾಗಿತ್ವದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ನಾಲ್ಕು ತಿಂಗಳೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದು ತಿಳಿಸಿದರು.

ಈಗಾಗಲೇ ಕೆರೆ ಒತ್ತುವರಿ ತೆರವುಗೊಳಿಸಿ, ಗಡಿರೇಖೆ ಗುರುತಿಸಲಾಗಿದೆ. ಹೂಳುತೆಗೆದು, ಗಿಡಗಂಟಿಗಳು ಹಾಗೂ ರಾಜಕಾಲುವೆಯಲ್ಲಿ ತುಂಬಿರುವ ತ್ಯಾಜ್ಯವನ್ನು ತೆರವುಗೊಳಿಸಿ, ಕೆರೆಗೆ ಸುಗಮವಾಗಿ ನೀರು ಹರಿದುಬರಲು ಅವಕಾಶ ಮಾಡಲಾಗುವುದು. ನಂತರ, ಕರೆ ಏರಿ ಜಾಗವನ್ನು ದುರಸ್ತಿಗೊಳಿಸಿ, ಸುತ್ತಲೂ ಹೂವು, ಹಣ್ಣು, ಔಷಧಿಸಸ್ಯ ಸೇರಿದಂತೆ ವೈವಿಧ್ಯಮಯ ಗಿಡಗಳನ್ನು ನೆಡುವ ಮೂಲಕ ಕೆರೆಯನ್ನು ಸುಂದರವಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಸ್ಥಳೀಯ ಮುಖಂಡ ಎಂ.ಮೋಹನ್ ಕುಮಾರ್ ಮಾತನಾಡಿ, ಮುಂದಿನ ಪೀಳಿಗೆಗೆ ನೆಲ-ಜಲ ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು ಎಂದು ತಿಳಿಸಿದರು.

ಆರ್‌ಸಿಬಿ ಕ್ರಿಕೆಟ್ ಸಂಸ್ಥೆಯ ಮುಖ್ಯಸ್ಥ ರಾಜೇಶ್ ಮೆನನ್, ಇಂಡಿಯಾ ಕೇರ್ಸ್ ಫೌಂಡೇಶನ್ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಮೀನಾದಾವೆ, ರಾಜಾನುಕುಂಟೆ ಗ್ರಾ.ಪಂ ಅಧ್ಯಕ್ಷೆ ಅಂಬಿಕಾ ರಾಜೇಂದ್ರಕುಮಾರ್, ಮಾಜಿ ಅಧ್ಯಕ್ಷ ಎಸ್‌.ಜಿ. ನರಸಿಂಹಮೂರ್ತಿ, ಬಿಜೆಪಿ ಮುಖಂಡರಾದ ಚೊಕ್ಕನಹಳ್ಳಿ ವೆಂಕಟೇಶ್, ಕಡತನಮಲೆ ಸತೀಶ್, ಇಟಗಲ್‌ಪುರ ರಾಜಣ್ಣ, ಕೃಷ್ಣಪ್ಪ ಉಪಸ್ಥಿತರಿದ್ದರು.



ಯಲಹಂಕ ಕ್ಷೇತ್ರದ ಇಟಗಲ್ ಪುರ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಎಸ್‌.ಆರ್‌.ವಿಶ್ವನಾಥ್, ಸ್ಥಳೀಯರೊಂದಿಗೆ ಕೆರೆಯನ್ನು ವೀಕ್ಷಿಸಿದರು

ನವರಾತ್ರಿ ಉತ್ಸವ



ದಸರಾ ಹಬ್ಬದ ಅಂಗವಾಗಿ ನಗರದ ಭಾರತೀಯ ವಿದ್ಯಾಭವನದಲ್ಲಿ ಭಾನುವಾರದಿಂದ ಆರಂಭವಾದ ಬೊಂಬೆಗಳ ಮೂಲಕ ಪ್ರಸ್ತುತಪಡಿಸಿದ ರಾಮಾಯಣ ಕಥೆಯನ್ನು ಮಕ್ಕಳು ವೀಕ್ಷಿಸಿದರು ಪ್ರಜಾವಾಣಿ ಚಿತ್ರ



ಬಸವನಗುಡಿಯ ಗಾಂಧಿ ಬಜಾರ್‌ನ ಅಂಗಡಿಯೊಂದರಲ್ಲಿ ದಸರಾ ಬೊಂಬೆಗಳ ಜತೆಯಲ್ಲಿ ಇಡಲಾಗಿದ್ದ ಪುನೀತ್ ರಾಜ್‌ಕುಮಾರ್ ಅವರ ಬೊಂಬೆಯನ್ನು ಕುತೂಹಲದಿಂದ ವೀಕ್ಷಿಸಿದ ಬಾಲಕ ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ನವರಾತ್ರಿ ವಿಶೇಷ

ಸಾಯಿ ಚಂಡಿಕಾಂಬ ಸಪ್ತಾಹ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಬೆಳಿಗ್ಗೆ ಮತ್ತು ಸಂಜೆ 5ರಿಂದ

'ನಿಮಿಷಾಂಬಾದೇವಿಗೆ ಕುಂಕುಮ ಅಲಂಕಾರ': ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾ ದೇವಿ ದೇವಸ್ಥಾನ, ಅಕ್ಕಿಪೇಟೆ ಹತ್ತಿರ, ಓ.ಟಿ.ಸಿ. ರಸ್ತೆ

ದೇವಿಗೆ ದಾಳಿಂಬೆ, ಕಾಬೂಲ್ ಕಡ್ಲೆ ಅಲಂಕಾರ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್,ಮಲ್ಲೇಶ್ವರ ಬ್ರಹ್ಮಚಾರಿಣಿ ದೇವಿಯ ಆವಾಹನೆ, ಬ್ರಹ್ಮಚಾರಿಣಿ ಹೋಮ, ಕುಂಕುಮಾರ್ಚನೆ, ಪುಷ್ಪಾರ್ಚನೆ, 108 ಜಪ ಪಾರಾಯಣ, ಚಂಡಿ ಪಾರಾಯಣ, ಮಹಾ ಮಂಗಳಾರತಿ, ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ಸಾತನೂರು, ಯಲಹಂಕ, ಬೆಳಿಗ್ಗೆ 9ರಿಂದ

ದೇವಿಗೆ ಮಹಾಭಿಷೇಕ, ಮೊಗ್ಗಿನ ಅಲಂಕಾರ: ಸಾಮೂಹಿಕ ಲಲಿತ ಸಹಸ್ರ ಪಾರಾಯಣ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಮಧ್ಯಾಹ್ನ 1.30ರಿಂದ

ವಚನ ನವರಾತ್ರಿ: ಆಶಯ ನುಡಿ: ಪ್ರಭು ಇಸುವನಹಳ್ಳಿ, 'ಆಚಾರ ಪತ್ನಿ ಗಂಗಾಂಬಿಕೆ' ಕುರಿತು ಉಪನ್ಯಾಸ: ತೇಜಸ್ವಿನಿ ಮಲ್ಲಿಕಾರ್ಜುನ, ಅತಿಥಿಗಳು: ಅನುಪಮ ಪಂಚಾಕ್ಷರಿ, ಜಯಾ ಹಣ್ಣೆ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ದೇವಿ ಸ್ತೋತ್ರ ಪಠಣ, ಚಲನಚಿತ್ರ ಉತ್ಸವ: 'ಕನ್ನಡಿ' ಚಲನಚಿತ್ರ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 5ರಿಂದ

ದೇವಿಗೆ ಅಭಿಷೇಕ, ಬೆಣ್ಣೆ ಅಲಂಕಾರ: ಲಲಿತಾ ಸಹಸ್ರನಾಮ ಪಾರಾಯಣ: ಆಯೋಜನೆ ಮತ್ತು ಸ್ಥಳ: ಬಂಡೆ ಮಹಾಂಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಗುಟ್ಟಹಳ್ಳಿ, ಸಂಜೆ 6

ದುರ್ಗಾ ಮಹೇಶ್ವರಮ್ಮ ದೇವಿಗೆ 'ಬ್ರಹ್ಮಚಾರಿಣಿ ದೇವಿ ಅಲಂಕಾರ': ನೃತ್ಯ: ಶ್ವೇತಬಾಬು ಮತ್ತು ತಂಡ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣಾ ರಾಜಪುರ, ಸಂಜೆ 6

ದೇವಿಗೆ ಪೂಜೆ: ಮಹಾ ನೀರಾಜನ, ತೀರ್ಥಪ್ರಸಾದ ವಿನಿಯೋಗ, ಲಲಿತ ಸಹಸ್ರನಾಮ ಪಾರಾಯಣ, ಭಕ್ತಿ ಗೀತೆಗಳು: ಸಂಧ್ಯಾ, ವಾಸವಿ ಮಹಿಳಾ ಮಂಡಳಿ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡ ರಾಮ ದೇವಸ್ಥಾನ, ವಿಜಯನಗರ, ಸಂಜೆ 6

ನವರಾತ್ರಿ ಸಾಂಸ್ಕೃತಿಕ ಸಿಂಚನ: ದೇವರನಾಮ ದಾಸರಪದಗಳು: ವೀಣಾ ನಾಗರಾಜ್ ಹಾಗೂ ಶಿಷ್ಯರು, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ



ಯಲ್ಲಮ್ಮ ದೇವಿಗೆ ವೀಳ್ಯದೆಲೆ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದ ಪೇಟೆ ರಸ್ತೆ, ಯಲಹಂಕ, ಸಂಜೆ 6.30

ನವಗ್ರಹ ಹೋಮ, ಗಾಯನ: ಜ್ಞಾನೋದಯ ವಿದ್ಯಾಸಂಸ್ಥೆಯ ವಿದ್ಯಾರ್ಥಿ ಗಳು, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

ದೊಡ್ಡಮ್ಮ ದೇವಿಗೆ ದ್ರಾಕ್ಷಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್. ಪುರ, ಸಂಜೆ 7.30

ಇತರ ಕಾರ್ಯಕ್ರಮಗಳು

ವಿಶ್ವ ಬೆನ್ನುಮೂಳೆಯ ದಿನಾಚರಣೆ: ಅತಿಥಿಗಳು: ದಿನೇಶ್ ಗುಂಡೂರಾವ್, ರಿಜ್ವಾನ್ ಅರ್ಷದ್, ರವೀಂದ್ರನಾಥ್ ಮೇಟಿ, ಆಯೋಜನೆ ಮತ್ತು ಸ್ಥಳ: ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ, ವಸಂತನಗರ, ಬೆಳಿಗ್ಗೆ 10

'ಭಾರತರತ್ನ ಎಂ. ವಿಶ್ವೇಶ್ವರಯ್ಯ' ಅವರ ಕುರಿತು ಉಪನ್ಯಾಸ: ಆರ್. ಲಕ್ಷ್ಮೀನಾರಾಯಣ, ಅತಿಥಿಗಳು: ಬಾ.ಹ. ಉಪೇಂದ್ರ, ರಾ.ನಂ. ಚಂದ್ರಶೇಖರ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ಬಸವನಗುಡಿ, ಬೆಳಿಗ್ಗೆ 11

'ಎಂ.ಎ. ರಾಮಾನುಜ ಅಯ್ಯಂಗಾರ್ ದತ್ತಿ': 'ಮಹಾಭಾರತದ ದ್ರೋಣಾಚಾರ್ಯ–ಪ್ರಸ್ತುತತೆ' ಕುರಿತು ಉಪನ್ಯಾಸ: ಎಸ್. ಅನಿಲ್ ಕುಮಾರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಮೌಲ್ಯಾಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡಿ: ಯದುವೀರ್

ಪ್ರಜಾವಾಣಿ ವಾರ್ತೆ

ಕೆಂಗೇರಿ: ಶಿಕ್ಷಣದ ಜೊತೆಗೆ ಶಿಸ್ತು, ದೇಶಪ್ರೇಮ ಮತ್ತು ಸೇವಾ ಮನೋಭಾವದಂತಹ ಉದಾತ್ತ ಗುಣಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು. ವೈಜ್ಞಾನಿಕ ಮನೋಭಾವ, ವೈಚಾರಿಕತೆ ಇಲ್ಲದ ಶಿಕ್ಷಣ ಅಪೂರ್ಣ ಎಂದು ಮೈಸೂರು ರಾಜಮನೆತನದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಕೆಂಗೇರಿ ಸಮೀಪದ ರಾಜರಾಜೇಶ್ವರಿ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ 27ನೇ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮಾತನಾಡಿದರು.

'ಹಣ ಸಂಪಾದನೆಯೇ ನಮಗೆ ಗುರಿಯಾಗಬಾರದು. ಮೌಲ್ಯಧಾರಿತ ಶಿಕ್ಷಣ ನಿಮ್ಮದಾಗಬೇಕು' ಎಂದು ಸಲಹೆ ನೀಡಿದರು.

ರಾಜರಾಜೇಶ್ವರಿ ದಂತ ಮಹಾವಿದ್ಯಾಲಯದ ಸಂಸ್ಥಾಪನಾ ಕುಲಪತಿ ಎ.ಸಿ. ಷಣ್ಮುಗಂ ಅವರು ಮಾತನಾಡಿ, 'ಎಸಿಎಸ್ ವಿದ್ಯಾಸಂಸ್ಥೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಯಶಸ್ಸು ಗಳಿಸುತ್ತಿದೆ. ಇಲ್ಲಿ ವಿದ್ಯೆ ಕಲಿತ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಮಹತ್ತರ ಸಾಧನೆ ಮಾಡುತ್ತಿದ್ದಾರೆ' ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ 100 ಪದವಿ ವಿದ್ಯಾರ್ಥಿಗಳು ಮತ್ತು 38 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ರಾಜರಾಜೇಶ್ವರಿ ಸಮೂಹ ಸಂಸ್ಥೆಯ ಕುಲಪತಿ ಎ.ಸಿ.ಷಣ್ಮುಗಮ್ , ಅಧ್ಯಕ್ಷ ಎಸಿಎಸ್ ಅರುಣ್ ಕುಮಾರ್, ಮ್ಯಾನೇಜಿಂಗ್ ಟ್ರಸ್ಟಿ ಎಸ್. ಲಲಿತಾ ಲಕ್ಷ್ಮೀ, ಕಾರ್ಯನಿರ್ವಾಹಕ ನಿರ್ದೇಶಕ ವಿಜಯಾನಂದ, ಡೀನ್ ಎಲ್ವಿನ್ ದೇವದಾಸ್, ಪ್ರಾಂಶುಪಾಲ ಗಿರೀಶ್ ಸೇರಿದಂತೆ ಹಲವು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನವೀಕೃತ ಸಂಗೀತ ನೃತ್ಯ ಕಾರಂಜಿಗೆ ಚಾಲನೆ: ಪುಳಕಿತರಾದ ಪ್ರವಾಸಿಗರು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ತಾಲ್ಲೂಕಿನ ವಿಶ್ವ ಪ್ರಸಿದ್ಧ ಕೆಆರ್‌ಎಸ್ ಬೃಂದಾವನದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ನವೀಕರಿಸಿರುವ ಸಂಗೀತ ನೃತ್ಯ ಕಾರಂಜಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಭಾನುವಾರ ಸಂಜೆ ಚಾಲನೆ ನೀಡಿದರು.

ಬೃಂದಾವನದ ಉತ್ತರ ಭಾಗದಲ್ಲಿ, ₹ 1.80 ಕೋಟಿ ವೆಚ್ಚದಲ್ಲಿ ಪುನರುಜ್ಜೀವನಗೊಳಿಸಿರುವ ಸಂಗೀತ ನೃತ್ಯ ಕಾರಂಜಿಯನ್ನು ಅವರು ಉದ್ಘಾಟಿಸಿದರು.


ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ಕಲ್ಪನೆಯ ಮೂಸೆಯಲ್ಲಿ ರೂಪುಗೊಂಡ ಬೃಂದಾವನ ಕಾಲ ಕಾಲಕ್ಕೆ ಅಭಿವೃದ್ಧಿಯಾಗಿದೆ. ಇದೀಗ ಬೃಂದಾವನದ ಸಂಗೀತ ನೃತ್ಯ ಕಾರಂಜಿಗೆ ಆಧುನಿಕತೆಯ ಸ್ಪರ್ಶ ನೀಡಲಾಗಿದೆ. ಪ್ರವಾಸಿಗರ ಅಭಿರುಚಿಗೆ ತಕ್ಕಂತೆ ಕಾವೇರಿ ನೀರಾವರಿ ನಿಗಮ ಈ ಕಾರಂಜಿಯನ್ನು ರೂಪಿಸಿದ್ದು, ಹೆಚ್ಚು ಹೆಚ್ಚು ಪ್ರವಾಸಿಗರನ್ನು ಸೆಳೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ರಮೇಶ ಬಂಡಿಸಿದ್ದೇಗೌಡ ಮಾತನಾಡಿ, ಕೆಆರ್‌ಎಸ್ ಬೃಂದಾವನ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದು, ಆಧುನಿಕ ಸಂಗೀತ ಕಾರಂಜಿಯಿಂದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೊಸ ಛಾಪು ಮೂಡಿಸಲಿದೆ ಎಂದರು. ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಒ ಶೇಕ್ ತನ್ವೀರ್ ಆಸಿಫ್, ಎಸ್ಪಿ ಎನ್. ಯತೀಶ್, ಧನಲಕ್ಷ್ಮಿ ಚಲುವರಾಯಸ್ವಾಮಿ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.



ಕೆಆರ್‌ಎಸ್ ಬೃಂದಾವನದಲ್ಲಿ ನಾಲ್ಕು ತಿಂಗಳ ಬಳಿಕ ಚಾಲನೆಗೊಂಡ ಸಂಗೀತ ನೃತ್ಯ ಕಾರಂಜಿಯನ್ನು ಪ್ರವಾಸಿಗರು ಕಣ್ತುಂಬಿಕೊಂಡರು

ಶಾಲಾ ಪಠ್ಯಗಳೇ ಮಕ್ಕಳ ಪತ್ರಿಕೆಯಾದರೆ?



'ಬಹುಮುಖಿ' ಪಠ್ಯಪತ್ರಿಕೆಯ ಮಾದರಿ



ಕೊಪ್ಪಳದಲ್ಲಿ ನಡೆದ ಪಠ್ಯಪತ್ರಿಕೆ ಕಾರ್ಯಾಗಾರದಲ್ಲಿ ಪತ್ರಿಕೆ ತಯಾರಿಸುತ್ತಿರುವ ಸರ್ಕಾರಿ ಶಾಲಾ ಶಿಕ್ಷಕರು

ಪ್ರಶ್ನೆ ಪತ್ರಿಕೆ, ಉತ್ತರ ಪತ್ರಿಕೆ, ವೃತ್ತ ಪತ್ರಿಕೆಗಳೆಲ್ಲ ಗೊತ್ತು ಅದರೆ ಪಠ್ಯಪತ್ರಿಕೆ ಗೊತ್ತಿದೆಯೇ? ಭಾಷಾ ಕೌಶಲ ಬೆಳೆಸಲು, ಮಕ್ಕಳಲ್ಲಿ ಗ್ರಹಿಕೆಯ ಶಕ್ತಿ ಹೆಚ್ಚಿಸಲು ಪಠ್ಯಕ್ರಮವನ್ನೇ ಸುದ್ದಿ ರೂಪದಲ್ಲಿ ಪ್ರಕಟಿಸುವಂಥ ಶಾಲಾ ಸಂಚಿಕೆ ರೂಪಿಸಲಾಗುತ್ತಿದೆ. ಎಲ್ಲಿ? ಮತ್ತು ಈ ಚಟುವಟಿಕೆಯ ಪರಿಣಾಮವನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.



ಮಕ್ಕಳಿಂದ ತಯಾರಾದ ಪಠ್ಯಪತ್ರಿಕೆ

ಕಿಶನರಾವ್ ಕುಲಕರ್ಣಿ

ಭತ್ತಕ್ಕೆ ತಿರುಗೇಟು ನೀಡಿದ ರಾಗಿ, ರಾಗಿಯನ್ನು ಕೀಳಾಗಿ ಟೀಕಿಸಿದ್ದ ಭತ್ತ(ರಾಮಧ್ಯಾನ ಚರಿತೆ), ಇಲಿಯೂರಿನಲ್ಲಿ ಇಲಿಗಳ ಕಾಟಕ್ಕೆ ಹೈರಾಣಾದ ಜನ ಜೋಗಿಯಿಂದ ಪರಿಹಾರ(ಕಿಂದರ ಜೋಗಿ)... ಇವು ದಿನ ಪತ್ರಿಕೆಯಲ್ಲಿ ಬಂದ ಸುದ್ದಿಗಳ ತಲೆ ಬರೆಹಗಳಲ್ಲ! ಶಾಲಾ ಪಠ್ಯಗಳಲ್ಲಿನ ವಿಷಯವನ್ನೇ ಆಯ್ದುಕೊಂಡು ಸುದ್ದಿ ರೀತಿಯಲ್ಲಿ ಪಠ್ಯವನ್ನು ರೂಪಾಂತರಗೊಳಿಸಿ ಬರೆದು ಶಾಲಾ ಪಠ್ಯಪತ್ರಿಕೆಯ ಸುದ್ದಿಗಳಿವು.

ಸಾಮಾನ್ಯವಾಗಿ ಶಾಲೆಯಲ್ಲಿ ಪತ್ರಿಕೆಗಳನ್ನು ಮಾಡುವುದನ್ನು ಕೇಳಿದ್ದೇವೆ, ಆದರೆ ಪಠ್ಯ ವಿಷಯವನ್ನೇ ಆಧರಿಸಿ ಬಿಡುವಿನ ಸಮಯದಲ್ಲಿ ವಿದ್ಯಾರ್ಥಿಗಳೇ ಪತ್ರಿಕೆಗಳನ್ನು ಮಾಡುವ ಹೊಸ ಕಲ್ಪನೆಯನ್ನು ಮೂಡಿಸಿದವರು ಬೆಂಗಳೂರಿನ ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್(ಐ.ಎಫ್.ಎ-ಕಲಿಕಲಿಸು) ಯೋಜನೆಯ ಕಾರ್ಯಕ್ರಮ ನಿರ್ವಾಹಕರಾದ ಟಿ.ಎನ್. ಕೃಷ್ಣಮೂರ್ತಿಯವರು.

ವಿದ್ಯಾರ್ಥಿಗಳಿಗೆ ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸುವುದರ ಜೊತೆಗೆ ಪಠ್ಯ ವಿಷಯಗಳನ್ನೇ ವಿವಿಧ ವಿನ್ಯಾಸಗಳ ಮೂಲಕ ದಿನ ಪತ್ರಿಕೆಗಳನ್ನಾಗಿ ವಿದ್ಯಾರ್ಥಿಗಳಿಂದಲೇ ಮಾಡಿಸಿದರೆ ಅವರಿಗೆ ಅರಿವಿಲ್ಲದಂತೆ ಪಠ್ಯಾಭ್ಯಾಸವಾಗುತ್ತದೆ, ಯೋಚನಾಶಕ್ತಿ ಬೆಳೆದು ವಿಷಯ ಬಹು ದಿನಗಳವರೆಗೆ ನೆನಪಿನಲ್ಲಿ ಉಳಿಯುತ್ತದೆ ಎಂಬುದು ಅವರ ವಿಚಾರ.

ಆಯ್ದ ಅಧ್ಯಾಯಗಳ ಪಠ್ಯ ವಿಷಯಕ್ಕೆ ಪತ್ರಿಕೆಯ ವಿನ್ಯಾಸ ನೀಡಿ ಕಥೆ, ಹಾಡು, ನಾಟಕ, ಚಿತ್ರಕಲೆಗೆ ವರ್ಗಾಯಿಸಬಹುದು. ಇದೊಂದು ವಿದ್ಯಾರ್ಥಿಗಳಿಗೆ ಸೃಜನಶೀಲ ಗುಂಪು ಚಟುವಟಿಕೆಯಾಗಿ ಪಠ್ಯ ಅಭ್ಯಾಸದ ಜೊತೆಗೆ ಮೌಲ್ಯಮಾಪನವೂ ಆಗುತ್ತದೆ.

ಮೋಜಿನ ಪಠ್ಯ ಅಭ್ಯಾಸ

ವಾರಕ್ಕೊಮ್ಮೆ ದಿನಪತ್ರಿಕೆಗಳಲ್ಲಿ ಬರುವಂತೆ ಸುಡೊಕು, ಕ್ರಾಸ್‌ವರ್ಡ್, ರಸಪ್ರಶ್ನೆಗಳು, ಒಗಟುಗಳು, ಪದಬಂಧ, ವಾಕ್ಯ ಜೋಡಣೆ, ಮಿಸ್ಸಿಂಗ್ ಲೆಟರ್ಸ್, ಚಿತ್ರ ಮಾಹಿತಿ, ಸಣ್ಣ ಕಥೆಗಳು, ಕವನಗಳು, ರೇಖಾಚಿತ್ರಗಳು, ಕರಕುಶಲ ಚಿತ್ರಗಳು, ಛಾಯಾಗ್ರಹಣ, ವರದಿ ಬರವಣಿಗೆ... ಹೀಗೆ ಏನೇ ಇರಲಿ ಅವುಗಳಿಗೆ ಪಠ್ಯ ಲೇಪನ ಇರಲೇಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಓದುವ, ಬರೆಯುವ, ಕ್ರಿಯಾಶೀಲತೆ ಹೆಚ್ಚುತ್ತದೆ, ಶಾಲೆಯಲ್ಲಿ ಲವಲವಿಕೆಯ ಕಲಿಕಾ ವಾತಾವರಣ ನಿರ್ಮಾಣವಾಗುತ್ತದೆ. ಪತ್ರಿಕೆ ಓದುವ ಆಸಕ್ತಿದಾಯಕ ಮಾರ್ಗ ಇಲ್ಲಿ ಮಕ್ಕಳಿಗೆ ಅರಿವಿಲ್ಲದಂತೆಯೇ ಪಠ್ಯ ಅಭ್ಯಾಸದ ಮೂಲಕ ಶೈಕ್ಷಣಿಕ ಮೌಲ್ಯ ತುಂಬುತ್ತದೆ. ವಿಶೇಷವಾಗಿ ಸೃಜನಶೀಲ ಚಿಂತನೆಗಳನ್ನು ಹೊರಹಾಕಲು ಸಹಾಯ ಮಾಡುತ್ತದೆ.

ಪಠ್ಯ ವಿಷಯವನ್ನು ಕಥೆಗೆ ರೂಪಾಂತರಿಸಲು ಉದಾಹರಣೆ ಕೊಡುವುದಾದರೆ, 'ಗಂಗೆಯ ಮಗಳು ಯಮುನಾ ಘಗ್ರಿ ತೊಟ್ಟುಕೊಂಡು ತನ್ನ ಗಂಡನ ಜೊತೆಗೆ ಗೋವುಗಳನ್ನು ಕಾಯಲು ಹೋಗುತ್ತಿರುತ್ತಾಳೆ. ಯಮುನೆಯ ತಾಯಿ ರಾಮನನ್ನು ಪೂಜಿಸುವುದನ್ನು ನೆನಪಿಸಿಕೊಂಡು ತಾನೂ ರಾಮನ ಜೊತೆಗೆ ಗಂಗೆಯನ್ನೂ ಸೇರಿಸಿ ರಾಮಗಂಗಾಳನ್ನು ಪೂಜಿಸುತ್ತಾಳೆ. ಪೂಜೆಗೆ ಅವಳ ಸಹೋದರಿಯರಾದ ಶಾರದ, ಸೋನೆ, ಕೋಸಿ ಬಂದಿರುತ್ತಾರೆ. ಇದರಿಂದ ಯಮುನೆ ತನ್ನ ಜೀವನವನ್ನು ಸುಖವಾಗಿ ನಡೆಸುತ್ತಾಳೆ' ಈ ಕಥೆ ಗಂಗಾ ನದಿಯ ಉಪನದಿಗಳ ಮಾಹಿತಿ ನೀಡುತ್ತದೆ. ಮತ್ತೊಂದು ಕಥೆ ನೋಡೋಣ, ರಾಜು ಮತ್ತು ರಾಧಾ ಅಣ್ಣತಂಗಿಯರು. ಅದೊಂದು ದಿನ ರಾಧಾ ಅಣ್ಣನಿಗೆ ಹೇಳುತ್ತಾಳೆ 'ಅಣ್ಣ ನಮ್ಮೂರಿನ ಆಚೆ ಇರುವ ಜಾಕೀರಗಿರಿ ಪರ್ವತ ಏರುವ ಆಸೆ ಇದೆ ಕರೆದುಕೊಂಡು ಹೋಗಣ್ಣ' ಎನ್ನುತ್ತಾಳೆ. ತಂಗಿಯ ಆಸೆಯಂತೆ ಅಣ್ಣ ಪರ್ವತ ಏರಲು ಹೋಗುತ್ತಿರುವಾಗ ರಾಜು ಮಿತ್ರರಾದ ಫಕ್ರುದ್ದಿನ್ ರೆಡ್ಡಿ ಜೈಲಸಿಂಗ್ ಎದುರಾಗುತ್ತಾರೆ. ವಿಷಯ ತಿಳಿದು ಅವರು ಪರ್ವತ ಏರುಲು ಬರುತ್ತಾರೆ. ಬೆಟ್ಟ ಏರಿದ ರಾಧಾಳಿಗೆ ಬಾಯಾರಿಕೆಯಾಗುತ್ತದೆ. ಆಚೀಚೆ ಎಲ್ಲೂ ನೀರಿನ ಮೂಲಗಳು ಇದ್ದಿಲ್ಲ. ದೂರದಲ್ಲಿ ಒಂದು ದೇವಸ್ಥಾನ ಕಾಣುತ್ತಿತ್ತು. ಅಲ್ಲಿ ನೀರು ಸಿಗಬಹುದೆಂದು ಸಮೀಪ ಹೋದಾಗ ಅದು ರಮಾಶಂಕರ ನಾರಾಯಣ ದೇವಾಲಯವಾಗಿತ್ತು... ಹೀಗೆ ಕಥೆ ಮುಂದುವರೆಯುತ್ತದೆ. ಈ ಕಥೆಯಲ್ಲಿ ಕ್ರಮಾನುಗತವಾಗಿ ರಾಷ್ಟ್ರಪತಿಗಳ ಹೆಸರು ಬರುತ್ತವೆ. ಹೀಗೆನೇ ಹಾಡು, ಚುಟುಕು, ನಾಟಕ ಬರೆಯಲು ಮಾರ್ಗದರ್ಶನ ಮಾಡಿದರೆ ವಿದ್ಯಾರ್ಥಿಗಳು ಪಠ್ಯವನ್ನೇ ತಡಕಾಡಿ ರೂಪಾಂತರಗೊಳಿಸುತ್ತಾರೆ.

ಮಕ್ಕಳೇ ಮಾಲೀಕರು

ಇಲ್ಲಿ ವಿದ್ಯಾರ್ಥಿಗಳೇ ಸಂಪಾದಕೀಯ ಮಂಡಳಿಯ ಸದಸ್ಯರಾಗಿರುತ್ತಾರೆ. ಮೊದಲು ಇವರಿಗೆ ಆಸಕ್ತಿ ತುಂಬಿದರೆ ಉಳಿದ ವಿದ್ಯಾರ್ಥಿಗಳ ಆಸಕ್ತಿಗೆ ಇವರೇ ಕಾರಣರಾಗುತ್ತಾರೆ. ತಿಂಗಳಿಗೊಮ್ಮೆ ಸಂಪಾದಕೀಯ ಮಂಡಳಿಯ ಸಭೆ ನಡೆಸಿ ಆ ತಿಂಗಳ ಬಂದಿರುವ ಬರೆಹಗಳನ್ನು ಪರಿಶೀಲಿಸಿ ಪ್ರಕಟಣೆಗೆ ಸ್ವೀಕರಿಸುತ್ತಾರೆ. ಶಿಕ್ಷಕರು ಮೈಕ್ರೋಸಾಫ್ಟ್ ಪಬ್ಲಿಷ್‌ನಲ್ಲಿರುವ ಉಚಿತ ಫೈಲ್‌ನಲ್ಲಿರುವ ಟೆಂಪ್ಲೆಟ್ಸ್ ಆಯ್ಕೆ ಮಾಡಿಕೊಂಡು ಸರಳವಾಗಿ ಎ-3 ಸೈಜಿನಲ್ಲಿ ಪುಟ ವಿನ್ಯಾಸಗೊಳಿಸಬಹುದು. ಬರಹಗಾರರ ಭಾವಚಿತ್ರವೂ ಪ್ರಕಟವಾಗುವುದರಿಂದ ಸಮುದಾಯದಲ್ಲಿ ಪ್ರೋತ್ಸಾಹ ದೊರಕುತ್ತದೆ. ಈ ಚಿಂತನೆಯಂತೆ ಪ್ರಾಯೋಗಿಕವಾಗಿ ಈಚೆಗೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಹಾಗೂ ಐ.ಎಫ್.ಎ ಸಹಯೋಗದಲ್ಲಿ ಶಿವಮೊಗ್ಗ, ಕೊಪ್ಪಳ, ಬಾಗಲಕೋಟೆ ಜಿಲ್ಲೆಗಳ ಆಯ್ದ 75 ಜನ ಶಿಕ್ಷಕರಿಗೆ ಈ ಪತ್ರಿಕೆ ರಚಿಸುವ ಕಾರ್ಯಾಗಾರ ನಡೆಸಿದ ಬಳಿಕ ಹಲವಾರು ಪತ್ರಿಕೆಗಳು ಹೊರ ಬಂದು ಪ್ರಯೋಗದ ಯಶಸ್ವಿ ಸೂಚಿಸಿವೆ.

ಅಂತರ್ಗತ ಕಲೆಗಳ ಮುಖಾಂತರ ಪಠ್ಯಕ್ರಮಗಳನ್ನು ಪರಿಚಯಿಸುವುದು ಈಗಿರುವ ಬೋಧನಾ ಕ್ರಮದ ಜೊತೆಗೆ ಬೋಧನಾ ಕ್ರಮಗಳಲ್ಲಿ ಸಮಾನಾಂತರ ಚಿಂತನೆಗಳು ಬೆಳೆಯುತ್ತಿರುವ ಈ ದಿನಗಳಲ್ಲಿ ನಮ್ಮ ಸಾಂಪ್ರದಾಯಿಕ ಬೋಧನಾ ಯೋಚನೆಗಳು ಬದಲಾಗುವ ವಾತಾವರಣ ಕಟ್ಟುವ ತರಬೇತಿಗಳು ಹೆಚ್ಚಾಗುವ ಅವಶ್ಯಕತೆ ಇದೆ. ಇದು ಹೊಸತನದ ಪ್ರಯೋಗ ಮತ್ತು ವಿಭಿನ್ನ ಆಲೋಚನೆ ಎನಿಸಿಕೊಳ್ಳುತ್ತದೆ. ನಾವು ಭಾಷೆ ಬೇರೆ, ವಿಜ್ಞಾನ ಬೇರೆ, ಇತಿಹಾಸ ಬೇರೆ ಎಂದೆಲ್ಲ ಗೋಡೆ ಕಟ್ಟಿಕೊಂಡು ಕೂಡುವ ಬದಲು ವಿಷಯದಲ್ಲಿ ಆಸಕ್ತಿಯ ಹೂರಣ ತುಂಬಬೇಕಷ್ಟೆ.

ವಿದ್ಯಾರ್ಥಿ ವೇತನ ಕೈಪಿಡಿ

ದ ಟಾಟಾ ಕ್ಯಾಪಿಟಲ್ ಪಂಖ್

ಟಾಟಾ ಕ್ಯಾಪಿಟಲ್ ಲಿಮಿಟೆಡ್ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ನೆರವು ನೀಡುತ್ತದೆ.

ಅರ್ಹತೆ: ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಪ್ರಸ್ತುತ 11, 12ನೇ ತರಗತಿಗಳಲ್ಲಿ, ಸಾಮಾನ್ಯ ಪದವಿ (ಬಿ.ಕಾಂ, ಬಿ.ಎಸ್‌ಸಿ, ಬಿ.ಎ, ಇತ್ಯಾದಿ), ಡಿಪ್ಲೊಮಾ ಮತ್ತು ಪಾಲಿಟೆಕ್ನಿಕ್ ಕೋರ್ಸ್‌ಗಳಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳು ಅರ್ಹರು. ಅರ್ಜಿದಾರರು ತಮ್ಮ ಹಿಂದಿನ ತರಗತಿಯಲ್ಲಿ ಕನಿಷ್ಠ ಶೇ 60 ಅಂಕ ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 2.5 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆರ್ಥಿಕ ಸಹಾಯ: ಬೋಧನಾ ಶುಲ್ಕದ ಶೇ 80 ವರೆಗೆ ಅಥವಾ ₹ 10,000 ದಿಂದ ₹ 12,000ದ ವರೆಗಿನ ಮೊತ್ತ

ಅರ್ಜಿ ಸಲ್ಲಿಸಲು ಕೊನೆ ದಿನ: 15-11-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/TCPS23



ಸ್ವಾಮಿ ದಯಾನಂದ್ ಎಜುಕೇಶನ್ ಫೌಂಡೇಶನ್

ವಿವರ: ಸ್ವಾಮಿ ದಯಾನಂದ್ ಶಿಕ್ಷಣ ಪ್ರತಿಷ್ಠಾನ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿಂದ ಎಂಜಿನಿಯರಿಂಗ್, ಮೆಡಿಕಲ್, ಆರ್ಕಿಟೆಕ್ಚರ್ ಇತ್ಯಾದಿ ಸೇರಿದಂತೆ ವೃತ್ತಿಪರ ಕೋರ್ಸ್‌ಗಳನ್ನು ಮತ್ತು ಇತರ ಪದವಿಪೂರ್ವ ಕೋರ್ಸ್‌ಗಳನ್ನು ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲು ಉದ್ದೇಶಿಸಿದೆ.

ಅರ್ಹತೆ: ಅರ್ಜಿದಾರರು 12ನೇ ತರಗತಿಯಲ್ಲಿ ಕನಿಷ್ಠ ಸಿಜಿಪಿಎ 7.5/ ಶೇ 75 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರು ₹ 6 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ಆದಾಯವನ್ನು ಹೊಂದಿರಬೇಕು.

ಆರ್ಥಿಕ ಸಹಾಯ: ವಾರ್ಷಿಕ ₹ 50 ಸಾವಿರ

ಅರ್ಜಿ ಸಲ್ಲಿಸಲು ಕೊನೆ ದಿನ: 31-10-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/SDM9

ಎಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನ್

ವಿವರ: ಸಮಾಜದ ಹಿಂದುಳಿದ ವರ್ಗಗಳಿಗೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುತ್ತದೆ.

ಅರ್ಹತೆ: ವಿದ್ಯಾರ್ಥಿಗಳು 1 ರಿಂದ 12ನೇ ತರಗತಿ, ಡಿಪ್ಲೊಮಾ, ಐಟಿಐ, ಪಾಲಿಟೆಕ್ನಿಕ್, ಪದವಿಪೂರ್ವ ಅಥವಾ ಸ್ನಾತಕೋತ್ತರ (ಸಾಮಾನ್ಯ ಮತ್ತು ವೃತ್ತಿಪರ ಸೇರಿದಂತೆ) ಕೋರ್ಸ್‌ಗಳಲ್ಲಿ ಓದುತ್ತಿರಬೇಕು. ಅರ್ಜಿದಾರರು ತಮ್ಮ ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 55 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ವಾರ್ಷಿಕ ಆದಾಯ ₹ 2.5 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆರ್ಥಿಕ ಸಹಾಯ: ₹ 75,000ದ ವರೆಗೆ

ಅರ್ಜಿ ಸಲ್ಲಿಸಲು ಕೊನೆ ದಿನ: 31-12-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/HDFC44

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ 1.2

3. ಕೆಳಗಿನ ಸಮಾಂತರ ಶ್ರೇಢಿಯ ಬಾಕ್ಸ್‌ಗಳಲ್ಲಿ ಖಾಲಿ ಬಿಟ್ಟಿರುವ ಪದಗಳನ್ನು ತುಂಬಿಸಿ.

(iii) 5, $\square$, $\square$, 91/2

ಪರಿಹಾರ:–ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ

$a = 5$ 4th term $9\frac{1}{2}$

$\Rightarrow 5 + (4-1)d = \frac{19}{2}$ $(\because an = a + (n-1)d)$

$\Rightarrow 3d = \frac{19}{2} - 5$

$\Rightarrow 3d = \frac{9}{2}$ $\Rightarrow$ $d = \frac{3}{2}$

$\therefore$ 2ನೇ ಪದ $= 5 + \frac{3}{2} = \frac{13}{2} = 6\frac{1}{2}$

3ನೇ ಪದ $= \frac{13}{2} + \frac{3}{2} = 8$

ಹೀಗಾಗಿ ಬಿಟ್ಟುಹೋದ ಪದಗಳು $6\frac{1}{2}$ ಮತ್ತು 8

(iv) – 4, $\square$, $\square$, $\square$, $\square$, 6

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ

$a = -4$ 6th term $= 6$

$\Rightarrow -4 + (6-1)d = 6 (\because a_n = a + (n-1)d)$

$\Rightarrow -4 + 5d = 6$

$\Rightarrow 5d = 6 + 4$

$\Rightarrow 5d = 10$

$\Rightarrow d = \frac{10}{5}$ $\Rightarrow = 2$

$\therefore$ 2ನೇ ಪದ $= -4 + 2 = -2$

3ನೇ ಪದ $= -2 + 2 = -0$

4ನೇ ಪದ $= 0 + 2 = 2$

5ನೇ ಪದ $= 2 + 2 = 4$

ಹೀಗಾಗಿ ಬಿಟ್ಟುಹೋದ ಪದಗಳು –2, 0, 2, 4

(v) $\square$, 38, $\square$, $\square$, $\square$, - 22

ನೀಡಿರುವ ಸಮಾಂತರ ಶ್ರೇಢಿಯ ಮೊದಲ ಪದ a ಸಾಮಾನ್ಯ ವ್ಯತ್ಯಾಸ d ಆಗಿರಲಿ

(v) $\square$, 38, $\square$, $\square$, $\square$, –22

ನೀಡಿರುವ ಸಮಾಂತರ ಶ್ರೇಢಿಯ ಮೊದಲ ಪದ a ಸಾಮಾನ್ಯ ವ್ಯತ್ಯಾಸ d ಆಗಿರಲಿ

ಎರಡನೇ ಪದ = 38

$a + (2-1)d = 38 (\because a_n = a + (n-1)d)$

$a + d = 38$.................... (1)

ಆರನೇ ಪದ= – 22

$a + (6-1)d = -22$

$a + 5d = -22$................(2)

(1) ಮತ್ತು (2)ನ್ನು ಬಿಡಿಸಿದಾಗ

$-22 = 38 - d + 5d$

$\Rightarrow -22 - 38 = 4d$

$\Rightarrow -60 = 4d \Rightarrow d = -15$

ಸಮೀಕರಣ (1)ರಲ್ಲಿ d ಬೆಲೆಯಾದ –15ನ್ನು ಹಾಕಿದಾಗ

$a = 38 - (-15)$

$\Rightarrow 38 + 15 = 53$

$\therefore a = 53$ $d = -15$

$\therefore$ 3rd term $= 53 + (3-1)(-15) (\because a_n = a + (n-1)d)$

$= 53 - 30 = 23$

4th term $= 53 + (4-1)(-15) (\because a_n = a + (n-1)d)$

$= 8$

5th term $= 53 + (5-1)(-15) (\because a_n = a + (n-1)d)$

$= -7$

ಹೀಗಾಗಿ ಬಿಟ್ಟುಹೋದ ಪದಗಳು 53, 23, 8, –7

4)3, 8, 13, 18... ಈ ಸಮಾಂತರ ಶ್ರೇಢಿಯ ಎಷ್ಟನೇ ಪದ 78?

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿ 3, 8, 13, 18......

ಇಲ್ಲಿ $a = 3$ $d = 8 - 3 = 5$ n^{th} ಪದ = 78

Then $a_n = a + (n-1)d$

$78 = 3 + (n-1)(5)$

$5(n-1) = 78 - 3 \Rightarrow 5(n-1) = 75$

$n - 1 = \frac{75}{5}$

$n - 1 = 15 \Rightarrow n = 15 + 1 \Rightarrow n = 16$

ಹೀಗಾಗಿ 78 ಸಮಾಂತರ ಶ್ರೇಢಿಯ 16ನೇ ಪದವಾಗಿದೆ

5) ಈ ಕೆಳಗಿನ ಸಮಾಂತರ ಶ್ರೇಢಿಯಲ್ಲಿರುವ ಪದಗಳ ಸಂಖ್ಯೆ ಕಂಡುಹಿಡಿಯಿರಿ

(i) 7, 13, 19 .... 205 **(ii)** 18, 1512, 13 47

ಪರಿಹಾರ:– (i) 7, 13, 19 205

ನೀಡಿರುವ ಸಮಾಂತರ ಶ್ರೇಢಿ 7, 13, 19 205

ಇಲ್ಲಿ $a = 7$ $d = 13 - 7 = 6$ $a_n = 205$

$a + (n-1)d = 205$

$7 + (n-1)6 = 205$

$6(n-1) = 205 - 7$

$6(n-1) = 198$

$n - 1 = \frac{198}{6}$

$n - 1 = 33$

$n = 33 + 1 = 34$

ಸಮಾಂತರ ಶ್ರೇಢಿಯಲ್ಲಿರುವ ಪದಗಳ ಸಂಖ್ಯೆ = 34

(ii) 18, $15\frac{1}{2}$, 13............... –47

ನೀಡಿರುವ ಸಮಾಂತರ ಶ್ರೇಢಿ 18, $15\frac{1}{2}$, 13.............. –47

ಇಲ್ಲಿ $a = 18$,

$d = 15\frac{1}{2} - 18 = \frac{31}{2} - 18 = -\frac{5}{2}$

$a_n = -47$, $n = ?$

$a + (n-1)d = 47$

$18 + (n-1)\left(-\frac{5}{2}\right) = -47$

$-\left(\frac{5}{2}\right)(n-1) = -65$

$n - 1 = \frac{65x2}{5}$

$n - 1 = 26 \Rightarrow n = 26 + 1 = 27 \Rightarrow n = 27$

II PUC CHEMISTRY

ELECTROCHEMISTRY

1. What is electrochemistry?
Ans:- Electrochemistry is the branch of chemistry which deals with the interconversions of chemical and electrical energies and study of the behaviour of electrolytes.

2. What are electrolytes?
Ans:- A compound which conducts electricity in the molten state and in the aqueous solution is called an electrolyte. Eg:- NaCl, $CuSO_4$, HCl, H_2SO_4, NaOH, CH_3COOH etc.,

3. What are non- electrolytes?
Ans:- A compound which does not conduct electricity in the molten state and in the aqueous solution is called an electrolyte. Eg:- Urea, glucose, benzene, ethyl alcohol etc.,

4. What are electrolytic cells?
Ans:- The electrolytic cells are the cells that convert electrical energy into the chemical energy.

5. State Faraday's I law of electrolysis.
Ans:- Faraday's I law of electrolysis states that - The amount of chemical reaction which occurs at any electrode during electrolysis by a current is proportional to the quantity of electricity passed through the electrolyte (solution or melt).

6. State Faraday's II law of electrolysis.
Ans:-Faraday's II law of electrolysis states that - The amounts of different substances liberated by the same quantity of electricity passing through the electrolytic solution are proportional to their chemical equivalent weights.

7. What is a Galvanic cell?
Ans:- A device in which electricity is produced using a spontaneous chemical reaction involving oxidation and reduction is called an electrochemical or Galvanic cell.
Eg:- Daniel cell, Leclanche cell etc.,

8. What are conductors?
Ans:- The substances which conducts electrical charges is called a conductor.
Eg:- Metals like copper, silver and the solutions of common salt, hydrochloric acid etc.,

9. What are insulators?
Ans:- The substances that do not allow electricity to pass through them are called the insulators.
Eg:- Glass, rubber, alcohol etc.,

10. Mention the types of conductors.
Ans:- The two types of conductors are –
(a) metallic conductors
(b) electrolytic conductors

11. What are metallic conductors?
Ans:- Metallic conductors are the metals that conduct electricity by allowing the flow of electrons through them. They are also called as the electronic conductors.
Eg:- Copper, aluminium.

12. Name a non-metallic conductor.
Ans:- Graphite.

13. What is corrosion?
Ans:- The loss of the metal in the form of its compounds due to chemical attack by the constituents of the environment on a metal is called corrosion.

14. Give some examples for corrosion.
Ans:- Rusting of iron, tarnishing of silver, tailing of mercury are some examples for corrosion.

15. What is rusting?
Ans:- The phenomenon wherein the iron exposed to moist air for a long time develops a brown coating of hydrated ferric oxide (Fe_2O_3. $3H_2O$) on its surface is called as rusting.


16. Mention some of the methods of preventing corrosion.
Ans:- The different methods of prevention of corrosion are –
(1) Barrier protection
(2) Sacrificial protection
(3) Cathode protection

17. Give the chemical formula of rust.
Ans:- The chemical formula of rust is $Fe_2O_3 . xH_2O$

18. How does the salt water accelerate corrosion?
Ans:- The salt water increases the electrical conduction of the electrolyte solution formed on the metal surface, hence it accelerates corrosion.


19. Write a brief note on the Barrier protection method of preventing corrosion.
Ans:- Barrier protection method – A thin barrier is developed between the metal like iron to be protected and the environment by painting the surface or by coating the surface with a thin film of oil or grease or by developing a thin layer of some non – corrosive metals like nickel, chromium, copper etc., by electroplating.

20. Write a brief note on the Sacrificial protection method of preventing corrosion.
Ans:- Sacrificial protection method is the method in which the metal to be protected say iron is coated with more electropositive metal like zinc which loses electrons easily than iron and hence protects it from corroding. The process of coating zinc to iron is called galvanisation. (The zinc gradually gets lost as basic zinc carbonate $Zn(OH)_2$. $ZnCO_3$).



21. Mention the factors, which affect corrosion.
Ans:- Some factors which affect corrosion are –
(a) Position of metals in the emf series
(b) Presence of impurities in the metals
(c) Presence of the electrolytes
(d) Presence of CO_2 in water and
(e) Presence of protective coatings.

22. How can we prevent corrosion using the anti- rust solutions? *(Contd……)*



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

ಬಿಬಿಎ ಗೊಂದಲ: ಎಷ್ಟು ವರ್ಷ ಓದಲಿ ?

1. ನಾನು ದ್ವಿತೀಯ ಪಿಯುಸಿ ಓದುತ್ತಿರುವೆ, ಮೂರು ಅಥವಾ ನಾಲ್ಕು ವರ್ಷಗಳ ಬಿಬಿಎ ಮಾಡುವುದೋ ಎಂಬ ಗೊಂದಲದಲ್ಲಿದ್ದೇನೆ.

ಹೆಸರು, ಊರು ತಿಳಿಸಿಲ್ಲ.

ಬಿಸಿನೆಸ್ ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ ನಿಮಗೆ ಪಿಎಚ್‌ಡಿ ಮಾಡುವ ಹಂಬಲವಿದ್ದರೆ, ನಾಲ್ಕು ವರ್ಷದ ಬಿಬಿಎ ಮಾಡಿ ನೇರವಾಗಿ ಪಿಎಚ್‌ಡಿ ಮಾಡಬಹುದು. ಉದ್ಯಮ ಕ್ಷೇತ್ರದಲ್ಲಿ ವೃತ್ತಿ ರೂಪಿಸಿಕೊಳ್ಳುವ ಯೋಜನೆಯಿದ್ದರೆ, ಮೂರು ವರ್ಷದ ಬಿಬಿಎ ಮಾಡಿ ನಂತರ ಒಂದು ವರ್ಷದ ವಾರಾಂತ್ಯದ ಎಂಬಿಎ (ಎಕ್ಸಿಕ್ಯೂಟಿವ್) ಮಾಡಬಹುದು. ಅನುಕೂಲವಿದ್ದಲ್ಲಿ ಎರಡು ವರ್ಷದ ಎಂಬಿಎ (ರೆಗ್ಯುಲರ್) ಮಾಡಿ. ಬಿಬಿಎ/ಎಂಬಿಎ ಪದವೀಧರರಿಗೆ ಖಾಸಗಿ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆಯಿದ್ದು, ಉಜ್ವಲವಾದ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು





1. ನವರಾತ್ರಿ ಉತ್ಸವದ ಅಂಗವಾಗಿ ಕಲಬುರಗಿಯ ಯಶ್ ಕೊಠಾರಿ ಭವನದಲ್ಲಿ ಯುವತಿಯರು ಭಾನುವಾರ ದಾಂಡಿಯಾ ನೃತ್ಯ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್ 2.ಮಂಗಳೂರಿನ ಕುದ್ರೋಳಿ ಶ್ರೀ ಗೋಕರ್ಣನಾಥೇಶ್ವರ ದೇವಸ್ಥಾನದಲ್ಲಿ ದಸರಾದ ಮೊದಲ ದಿನದಂದು ಶಾರದಾದೇವಿಯ ಮೆರವಣಿಗೆ ನಡೆಯಿತು ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಮಡಿಕೇರಿ: ನಾಡಹಬ್ಬಕ್ಕೆ ವಿಜೃಂಭಣೆಯ ಆರಂಭ ● ವಿವಿಧ ಶಕ್ತಿ ದೇವತೆಗಳಿಗೆ ಪೂಜೆ

ಬೆಳಕಿನ ದಸರೆಗೆ ಕರಗೋತ್ಸವದ ಮುನ್ನುಡಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಮಂಜಿನ ನಗರಿ'ಯ 'ಬೆಳಕಿನ ದಸರೆ'ಗೆ ಭಾನುವಾರ ಇಲ್ಲಿ ಆರಂಭವಾದ ವಿಜೃಂಭಣೆಯ ಕರಗೋತ್ಸವ ಮುನ್ನುಡಿ ಬರೆಯಿತು.

ಸಂಜೆಯಾಗುತ್ತಿದ್ದಂತೆಯೇ ಇಲ್ಲಿನ ಪಂಪಿನಕೆರೆಯಲ್ಲಿ ನಗರದ ಶಕ್ತಿ ದೇವತೆಗಳಾದ ಕೋಟೆ ಮಾರಿಯಮ್ಮ, ಕುಂದೂರುಮೊಟ್ಟೆ ಚೌಟಿ ಮಾರಿಯಮ್ಮ, ದಂಡಿನ ಮಾರಿಯಮ್ಮ ಹಾಗೂ ಕಂಚಿ-ಕಾಮಾಕ್ಷಮ್ಮ ಅವರ ಕರಗಗಳಿಗೆ ಪೂಜೆ ಸಲ್ಲಿಸಿದ ನಂತರ ಕರಗಧಾರಿಗಳು ನಗರ ಪ್ರದಕ್ಷಿಣೆಗೆ ಹೊರಟರು. ವಾದ್ಯಮೇಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಗಮನಸೆಳೆದರು.

ವಿದ್ಯುತ್ ದೀಪಗಳಿಂದ ಅಲಂಕೃತ-ವಾಗಿದ್ದ ರಸ್ತೆಗಳ ಇಕ್ಕೆಲಗಳಲ್ಲಿ ನಿಂತಿದ್ದ ನೂರಾರು ಭಕ್ತರು ಶ್ರದ್ಧೆಯಿಂದ ಕೈ ಮುಗಿದರು. ಕೆಲವರು ಫಲ, ಕಾಣಿಕೆ ಅರ್ಪಿಸಿ, ಕರಗಧಾರಿಗಳಿಗೆ ನಮಸ್ಕರಿ-ಸಿದರು. ಜಯಘೋಷಗಳು ಮುಗಿಲು ಮುಟ್ಟಿದವು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅವರು ಭಾಗಿಯಾದರು.

ಈ ಮೂಲಕ ಮಡಿಕೇರಿಯಲ್ಲಿ ಅದ್ದೂರಿ ದಸರಾ ಉತ್ಸವಕ್ಕೆ ಚಾಲನೆ ದೊರೆಯಿತು. 16ರಿಂದ 24ರವರೆಗೂ ನಿತ್ಯವೂ ಇಲ್ಲಿನ ಗಾಂಧಿ ಮೈದಾನದಲ್ಲಿ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಈ ಅವಧಿಯಲ್ಲಿ ಮಹಿಳಾ ದಸರಾ, ಮಕ್ಕಳ ದಸರಾ, ಜನಪದ ದಸರಾ ಹೀಗೆ ಹಲವು ಉತ್ಸವಗಳು ನಡೆಯಲಿವೆ. ವಿಜಯದಶಮಿಯಂದು ರಾತ್ರಿ ಇಲ್ಲಿನ 10 ಮಂಟಪಗಳ ಸಮಿತಿಗಳು ಪ್ರತ್ಯೇಕವಾಗಿ ಮಂಟಪಗಳ ಮೆರವಣಿಗೆ ಮೂಲಕ ದಶಮಂಟಪೋತ್ಸವ ನಡೆಸಲಿವೆ.

ಗೋಣಿಕೊಪ್ಪಲಿನಲ್ಲೂ ದಸರಾ ಉತ್ಸವಕ್ಕೆ ಚಾಲನೆ ದೊರೆತಿದೆ.



ನಾಡಹಬ್ಬ ದಸರಾ ಮಹೋತ್ಸವ ಅಂಗವಾಗಿ ಭಾನುವಾರ ಮೈಸೂರು ಅರಮನೆ ದೀಪಾಲಂಕಾರದಿಂದ ಕಂಗೊಳಿಸಿದ ಪರಿ ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮಹಿಷೋತ್ಸವ ಆಚರಣೆ

ಉಡುಪಿ: ಅಂಬೇಡ್ಕರ್ ಯುವಸೇನೆ ಜಿಲ್ಲಾ ಘಟಕದ ವತಿಯಿಂದ ಆದಿ ಉಡುಪಿಯ ಅಂಬೇಡ್ಕರ್ ಭವನದಲ್ಲಿ ಭಾನುವಾರ ಮಹಿಷೋತ್ಸವ ಆಚರಿಸಲಾಯಿತು.

ಮಹಿಷ ದಸರಾ ಸಾರ್ವಜನಿಕ ಆಚರಣೆ, ಮೆರವಣಿಗೆಗೆ ಜಿಲ್ಲಾಡಳಿತವು ಅವಕಾಶ ನೀಡದಿರುವ ಕಾರಣಕ್ಕೆ ಮಹಿಷೋತ್ಸವವು ಸಭಾಭವನದೊಳಗಿನ ಕಾರ್ಯಕ್ರಮಕ್ಕೆ ಸೀಮಿತವಾಗಿತ್ತು. ಸಂಶೋಧಕ ವಿಠಲ್ ವಗ್ಗನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಹಿಷನ ಭಾವಚಿತ್ರಕ್ಕೆ ಹೂವಿನ ಅಲಂಕಾರ ಮಾಡಲಾಗಿತ್ತು.

ಮಹಿಷ ದಸರಾ ಆಚರಣೆಗೆ ವಿರೋಧ ವ್ಯಕ್ತವಾಗಿದ್ದ ಕಾರಣ ಕಾರ್ಯಕ್ರಮಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ನಾರಾಯಣ ಮಣೂರು, ಶ್ರೀರಾಮ ದಿವಾಣ, ಜಯನ್ ಮಲ್ಪೆ, ಅಂಬೇಡ್ಕರ್ ಯುವ ಸೇನೆ ಅಧ್ಯಕ್ಷ ಹರೀಶ್ ಸಾಲ್ಯಾನ್, ಲೋಕೇಶ್ ಪಡುಬಿದ್ರಿ, ಶೇಖರ ಹೆಜ್ಮಾಡಿ, ದಯಾನಂದ ಕಪ್ಪೆಟ್ಟು ಭಾಗವಹಿಸಿದ್ದರು.



ಜಿಲ್ಲಾ ಅಂಬೇಡ್ಕರ್ ಯುವಸೇನೆಯ ವತಿಯಿಂದ ಆದಿ ಉಡುಪಿಯ ಅಂಬೇಡ್ಕರ್ ಭವನದಲ್ಲಿ ಭಾನುವಾರ ಮಹಿಷೋತ್ಸವ ಆಚರಿಸಿ ಮಹಿಷನ ಭಾವಚಿತ್ರ ಮೆರವಣಿಗೆ ಮಾಡಲಾಯಿತು

ಕನ್ನಡ ಶ್ರುತಿಯಾಗಲಿ, ಅಭಿವೃದ್ಧಿ ಕೃತಿಯಾಗಲಿ: ಹಂಸಲೇಖ

ಒಂದನೇ ಪುಟದಿಂದ...

ವೇದಿಕೆಯಲ್ಲಿ ಬೆಳ್ಳಿರಥದಲ್ಲಿ ಪ್ರತಿ-ಷ್ಠಾಪಿಸಿದ ಚಾಮುಂಡೇಶ್ವರಿ ಮೂರ್ತಿಗೆ ಗಣ್ಯರೊಂದಿಗೆ ಅವರು ಪುಷ್ಪಾರ್ಚನೆ ಮಾಡುತ್ತಿದ್ದಂತೆ ಸಭಿಕರು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

'ಕರ್ನಾಟಕವೆಂದು ಹೆಸರಾಗಿ ಐದಶ (ಐದು ದಶಕ), ನನ್ನ ಕಲಾ ಕಾಯಕಕ್ಕೂ ಐದಶ. ಸಾಮಾನ್ಯ ವ್ಯಕ್ತಿಯಾಗಿ ನಾನು ಕನ್ನಡ ದೀಪವನ್ನು ಹಚ್ಚಿದ್ದರೂ, ನನ್ನ ಕೈಯಲ್ಲಿದ್ದ ಚೈತನ್ಯ ಈ ನಾಡಿನದ್ದು, ಎಲ್ಲ ಹಿರಿಯರದ್ದು' ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿಯ ಮಂತ್ರವನ್ನು ಜಪಿಸಿದರು.

'ಬರಗಾಲವಿದ್ದರೂ ಈ ಬಾರಿ ದಸರಾ ನಿಲ್ಲಿಸಬಾರದು. ಸಾಂಪ್ರದಾಯಿಕವಾಗಿ ಮಾಡಲೇಬೇಕು. ಮಹತ್ವವೂ ಕಡಿಮೆ ಯಾಗಬಾರದು ಎಂಬ ಆಶಯದಲ್ಲಿ ಉತ್ಸವವನ್ನು ಸರ್ಕಾರ ಹಮ್ಮಿಕೊಂಡಿದೆ' ಎಂದು ಪ್ರತಿಪಾದಿಸಿದರು.

ಸಂವಿಧಾನ ಪ್ರಸ್ತಾವನೆ ಗಾಯನ: ದಸರಾ ಉದ್ಘಾಟನೆ ಕಾರ್ಯಕ್ರಮಕ್ಕೆ ಹೊಸ ಸೇರ್ಪಡೆಯಾಗಿ, ಸಂವಿಧಾನ ಪ್ರಸ್ತಾವನೆಯ ಗಾಯನವೂ ವಿಶೇಷವಾಗಿ ಗಮನ ಸೆಳೆಯಿತು. ಹಂಸಲೇಖ ಸಂಗೀತ ನಿರ್ದೇಶನದಲ್ಲೇ ಈ ಗಾಯನ ಮೂಡಿ ಬಂದಿದ್ದು ಮತ್ತೊಂದು ವಿಶೇಷ. ಗಾಯನ ನಡೆಯುತ್ತಿದ್ದಾಗ, ಹಂಸಲೇಖ ದನಿ ಗೂಡಿಸಿ, ಭಾವಾಭಿನಯ ಮಾಡಿದರು.

'ಸಂವಿಧಾನವೇ ಇಲ್ಲದ ಸಮಯದಲ್ಲಿ ಮೀಸಲಾತಿ ಕೊಟ್ಟ ನಾಲ್ವಡಿ ಕೃಷ್ಣರಾಜ ಒಡೆಯರ್ ಸದಾ ಸ್ಮರಣೀಯ' ಎಂದು ಸಚಿವ ಡಾ.ಮಹದೇವಪ್ಪ ಸ್ಮರಿಸಿದರು.

ಪೇಟ ನಿರಾಕರಣೆ: ಕಾರ್ಯಕ್ರಮದ ನಡುವೆ, ಸನ್ಮಾನದ ಅಂಗವಾಗಿ ಮೈಸೂರು ಪೇಟವನ್ನು ತೊಡಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಯವಾಗಿ ತಿರಸ್ಕರಿಸಿದರು. ಶಾಲು, ಸ್ಮರಣಿಕೆಯನ್ನಷ್ಟೇ ಪಡೆದರು. ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಿದ್ದರು.

ಹಂಸಲೇಖ ಸಲಹೆಗಳು

- ಕನ್ನಡವನ್ನು ಪ್ರಪಂಚದ ವೇದಿಕೆಯಲ್ಲಿ ಪ್ರತಿಷ್ಠಾಪಿಸಬೇಕು. ಆಗ ಮಾತ್ರ ನಮ್ಮ ದೇಶ ಮತ್ತು ಕನ್ನಡ ಒಟ್ಟಿಗೇ ಮೆರೆಯಲು ಸಾಧ್ಯ
- ಕರ್ನಾಟಕದಲ್ಲಿದ್ದು ಕನ್ನಡ ಬಾರದವರಿಗೆ 30 ದಿನದಲ್ಲಿ ಕನ್ನಡ ಕಲಿಸಬೇಕು. ಕಲಿತವರಿಗೆ ಬಿಪಿಎಲ್, ಎಪಿಎಲ್ ಕಾರ್ಡ್ ಇಲ್ಲದಿದ್ದರೂ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಿಗುವಂತಿರಬೇಕು
- ಹುಬ್ಬಳ್ಳಿ- ಬೆಳಗಾವಿ, ಮೈಸೂರು–ಮಂಗಳೂರು.. ಹೀಗೆ ಎಲ್ಲ ಜಿಲ್ಲೆಗಳನ್ನೂ ಜೋಡಿಸಿ ಪ್ರತಿಭೆ–ಉದ್ಯಮ–ವ್ಯವಹಾರವನ್ನು ಒಂದುಗೂಡಿಸಬೇಕು. ಕನ್ನಡದ ಭಾಷಿಕ ಅಗತ್ಯಗಳನ್ನು ಪೂರೈಸಬೇಕು
- ಕೃಷಿಕ- ಕಾರ್ಪೊರೇಟ್ ಕನ್ನಡಿಗರ ಜೋಡಿಯಾಗಬೇಕು. ಇಬ್ಬರಿಗೂ ಪರಸ್ಪರರ ಸ್ಥಿತಿ–ಗತಿ ಗೊತ್ತಾಗಬೇಕು.
- ಪ್ರತಿ ತಾಯಿಯೂ ಮಕ್ಕಳಿಗೆ ಕನ್ನಡ ಪದ, ಜನಪದ, ಸಿನಿಮಾಪದ ಕಲಿಸಬೇಕು. ಕನ್ನಡ ಸಮಾಜದಲ್ಲಿ ತಲೆ ಎತ್ತಿ ಬದುಕಲು ಅದೇ ನೈತಿಕ ಅರ್ಹತೆಯಾಗಬೇಕು.

₹4,500 ಕೋಟಿ ನೆರವಿನ ನಿರೀಕ್ಷೆ

'ಈ ಬಾರಿ ರಾಜ್ಯವನ್ನು ಹಸಿರು ಬರ ಆವರಿಸಿದೆ. 42 ಲಕ್ಷ ಹೆಕ್ಟೇರ್‌ನಲ್ಲಿ ಸುಮಾರು ₹30 ಸಾವಿರ ಕೋಟಿಯಷ್ಟು ಮೌಲ್ಯದ ಬೆಳೆ ಹಾನಿಯಾಗಿದೆ. ಬರ ವೀಕ್ಷಿಸಿರುವ ಕೇಂದ್ರದಿಂದ ₹4,500 ಕೋಟಿ ನೆರವು ದೊರಕುವ ನಿರೀಕ್ಷೆ ಇದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಕೇಂದ್ರವೊಂದೇ ಎಲ್ಲ ಪರಿಹಾರವನ್ನು ನೀಡಲು ಆಗುವುದಿಲ್ಲ. ನೀರು, ಉದ್ಯೋಗ, ಮೇವನ್ನು ರಾಜ್ಯ ಸರ್ಕಾರ ಪೂರೈಸುತ್ತದೆ' ಎಂದರು.



ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಶರನ್ನವರಾತ್ರಿ ಪ್ರಯುಕ್ತ ಭಾನುವಾರ ಮೈಸೂರಿನ ಅರಮನೆಯಲ್ಲಿ 9ನೇ ಬಾರಿ ಖಾಸಗಿ ದರ್ಬಾರ್ ನಡೆಸಿದರು

ವೈಯಕ್ತಿಕ ವಾಹನದ ಬದಲು ಸಾರ್ವಜನಿಕ ವಾಹನ ಬಳಸಲು ತಜ್ಞರು, ಸಾರ್ವಜನಿಕರ ಸಲಹೆ

ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಸರಳ ಸೂತ್ರ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಗೆ ಕಡಿವಾಣ ಹಾಕಲು ಸಾಧ್ಯವೇ? ಹೀಗೊಂದು ಪ್ರಶ್ನೆಯನ್ನು ತಜ್ಞರು, ಸಾರ್ವಜನಿಕರ ಎದುರು ಇಟ್ಟಾಗ, 'ಒಮ್ಮೆಲೆ ಕಡಿಮೆ ಮಾಡುವುದು ಕಷ್ಟವಾದರೂ, ವೈಜ್ಞಾನಿಕ ಕ್ರಮಗಳನ್ನು ಹಂತ ಹಂತವಾಗಿ ಕೈಗೊಳ್ಳುವ ಮೂಲಕ ದಟ್ಟಣೆ ನಿಯಂತ್ರಿಸಬಹುದು' ಎಂದು ಅಭಿಪ್ರಾಯಪಟ್ಟರು. ಮತ್ತಷ್ಟು, ದಟ್ಟಣೆ ಶುಲ್ಕ, ವೈಯಕ್ತಿಕ ವಾಹನ ಬಿಟ್ಟು ಸಾರ್ವಜನಿಕ ವಾಹನಗಳನ್ನು ಬಳಸುವುದೂ ಸೇರಿದಂತೆ ಅನೇಕ ಸಲಹೆಗಳನ್ನು ನೀಡಿದ್ದಾರೆ.

ದಟ್ಟಣೆ ಶುಲ್ಕ: ದಟ್ಟಣೆ ಇರುವ ರಸ್ತೆಗಳಿಗೆ ಹೊಂದಿಕೊಂಡು ದಟ್ಟಣೆ ಮುಕ್ತ ರಸ್ತೆಗಳಿರಬೇಕು. ದಟ್ಟಣೆ ರಹಿತವಾಗಿ ಸಂಚರಿಸಲು ಬಯಸುವವರು ಶುಲ್ಕ ಪಾವತಿಸಿ ದಟ್ಟಣೆ ಮುಕ್ತ ರಸ್ತೆಯಲ್ಲಿ ಸಂಚರಿಸಬಹುದು. ಈ ರೀತಿ ಮಾಡಿದಾಗ ವೈಯಕ್ತಿಕ ವಾಹನ ಬಳಸುವವರ ಸಂಖ್ಯೆ ಕಡಿಮೆಯಾಗುತ್ತದೆ. ಸಾರ್ವಜನಿಕ ವಾಹನದಲ್ಲಿ ಸಂಚರಿಸುವವರ ಸಂಖ್ಯೆ ಹೆಚ್ಚುತ್ತದೆ. ಲಂಡನ್‌ನಲ್ಲಿ ಈ ಪ್ರಯೋಗ ಮಾಡಿದ ಬಳಿಕ ಅಲ್ಲಿ ಶೇ 33ರಷ್ಟು ದಟ್ಟಣೆ ಕಡಿಮೆಯಾಗಿದೆ. ಬಸ್ ಪ್ರಯಾಣಿಕರ ಪ್ರಮಾಣ ಶೇ 38ರಷ್ಟು ಹೆಚ್ಚಾಗಿದೆ ಎಂದು 'ಬ್ರ್ಯಾಂಡ್ ಬೆಂಗಳೂರು' ಅಭಿಯಾನದ 'ಮೊಬಿಲಿಟಿ ವರ್ಕ್‌ಶಾಪ್' ಅಡಿಯಲ್ಲಿ 'ಎಬಿಲ್ ಆಂಡ್ ಸಸ್ಟೈನಬಲ್ ಮೊಬಿಲಿಟಿ ಫಾರ್ ಆಲ್' ಸಲ್ಲಿಸಿದ ವರದಿಯಲ್ಲಿ ತಿಳಿಸಲಾಗಿದೆ.

'ಸ್ವಂತ 2 ಸಾರ್ವಜನಿಕ ಸಾರಿಗೆ': ಕನಿಷ್ಠ ವಾರಕ್ಕೆ ಎರಡು ದಿನ ಸ್ವಂತ ವಾಹನವನ್ನು ಬಿಟ್ಟು ಸಾರ್ವಜನಿಕ ವಾಹನಗಳಲ್ಲಿ ಸಂಚರಿಸುವಂತೆ ಮಾಡಲು 'ಬಿ' ಪ್ಯಾಕ್ 'ಸ್ವಂತ 2 ಸಾರ್ವಜನಿಕ ಸಾರಿಗೆ' ಅಭಿಯಾನ ನಡೆಸುತ್ತಿದೆ. ವೈಟ್‌ಫೀಲ್ಡ್, ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತಲಿನಲ್ಲಿ ಈ ಬಗ್ಗೆ 27 ಸಂಘಟನೆಗಳು ಸೇರಿ ಸಮೀಕ್ಷೆಗಳನ್ನು ಮಾಡಿದಾಗ, ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಳ್ಳದ ಉತ್ತಮ ಸಾರ್ವಜನಿಕ ಸಾರಿಗೆ ಬಳಸಲು ತಯಾರಿರುವುದಾಗಿ ಶೇ 95ಷ್ಟು ಉದ್ಯೋಗಿಗಳು, ಸಾರ್ವಜನಿಕರು ಹೇಳಿಕೊಂಡಿದ್ದರು. ಈ ಸಮೀಕ್ಷೆ ಮೆಟ್ರೊ ನೇರಳೆ ಮಾರ್ಗದ ವಿಸ್ತರಿತ ಪ್ರದೇಶದಲ್ಲಿ ಮೆಟ್ರೊ ರೈಲು ಆರಂಭವಾಗುವುದಕ್ಕಿಂತ ಮುಂಚೆ ನಡೆದಿತ್ತು.

ಒಆರ್‌ಆರ್‌ಸಿಎ ಸಲಹೆಗಳು: ಹೊರವರ್ತುಲ ರಸ್ತೆಗಳಲ್ಲಿ ದಟ್ಟಣೆ ಪ್ರಮಾಣ ಕಡಿಮೆ ಮಾಡಲು ಹೊರವರ್ತುಲ ರಸ್ತೆ ಕಂಪನಿ ಅಸೋಸಿಯೇಶನ್ (ಒಆರ್‌ಆರ್‌ಸಿಎ) ಕೆಲವು ಸಲಹೆಗಳನ್ನು ನೀಡಿದೆ. ಅವುಗಳು ಹೀಗಿವೆ; ಸುಸಜ್ಜಿತ ಪಾದಚಾರಿ ಮಾರ್ಗ ನಿರ್ಮಿಸಬೇಕು. ಸೈಕಲ್ ಬಳಕೆ ಪ್ರೋತ್ಸಾಹಿಸಬೇಕು. ವೈಯಕ್ತಿಕ ವಾಹನ ಬಿಟ್ಟು ಸಾರ್ವಜನಿಕ ವಾಹನ ಬಳಸಬೇಕು. ಪರ್ಯಾಯ ರಸ್ತೆ ಸಂಪರ್ಕ ಹೆಚ್ಚಿಸಬೇಕು. ರಸ್ತೆಗಳ ಒತ್ತುವರಿಗಳನ್ನು ತೆರವುಗೊಳಿಸಬೇಕು. ಒಳ ರಸ್ತೆಗಳನ್ನು ವಿಸ್ತರಿಸಬೇಕು. ಶಾಲಾ, ಕಾಲೇಜು, ಕಚೇರಿ ಆರಂಭವಾಗುವ ಸಮಯದಲ್ಲಿ ಕಾಮಗಾರಿಗಳನ್ನು ನಡೆಸಬಾರದು. ಬ್ಯಾರಿಕೇಡ್ ಮತ್ತು ಸಿಗ್ನಲ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಜನರಲ್ಲಿ ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸಬೇಕು.

ಇನ್ನಷ್ಟು ಪರಿಹಾರೋಪಾಯಗಳು

- ಎಲ್ಲ ಕಂಪನಿಗಳ ಉದ್ಯೋಗಿಗಳು ಸ್ವಂತ ವಾಹನಗಳಲ್ಲಿ ಒಬ್ಬೊಬ್ಬರೇ ಬರುವುದನ್ನು ನಿಲ್ಲಿಸಬೇಕು. ಬಿಎಂಟಿಸಿ ಅಥವಾ ತಮ್ಮ ಕಂಪನಿಯ ಬಸ್‌ಗಳಲ್ಲಿ ಬರಬೇಕು. ಒಂದು ಸಾವಿರ ಜನರು ಒಂದೊಂದು ಕಾರುಗಳಲ್ಲಿ ಹೋಗುವ ಬದಲು 20 ಬಸ್‌ಗಳಲ್ಲಿ ಅಷ್ಟು ಮಂದಿ ಪ್ರಯಾಣಿಸಲು ಸಾಧ್ಯ.
- ಕಂಪನಿಗಳಲ್ಲಿ ಒಂದೇ ಸಮಯಕ್ಕೆ ಕೆಲಸದ ಅವಧಿ ಶುರುವಾಗುವುದನ್ನು ತಪ್ಪಿಸಬೇಕು. ಬೆಳಿಗ್ಗೆ 9ಕ್ಕೆ, 10ಕ್ಕೆ, 11ಕ್ಕೆ ಹೀಗೆ ಬೇರೆ ಬೇರೆ ಸಮಯದಲ್ಲಿ ಕೆಲಸ ಆರಂಭಿಸಬೇಕು. ಆಗ ಕೆಲಸ ಮುಗಿಯುವ ಸಮಯವೂ ಬೇರೆ ಬೇರೆ ಆಗುವುದರಿಂದ ಸಂಚಾರ ದಟ್ಟಣೆ ತಪ್ಪಲಿದೆ.
- ವಾರಕ್ಕೆ ಎರಡು ದಿನ ಕಚೇರಿಗೆ ಬರಬೇಕು ಎಂದು ಕೆಲವು ಕಂಪನಿಗಳು ಮಾಡಿರುವ ನಿಯಮವನ್ನು ಕೂಡ ಬೇರೆ ಬೇರೆ ದಿನಗಳಿಗೆ ಅನ್ವಯಿಸಬೇಕು.
- ಬಿಎಂಟಿಸಿ ಬಸ್‌ಗಳ ಸಂಚಾರಕ್ಕೆ ಪ್ರತ್ಯೇಕ ರಸ್ತೆ ಮಾಡಲಾಗಿತ್ತು, ಮೆಟ್ರೊ ಕಾಮಗಾರಿಯಿಂದಾಗಿ ಆ ವ್ಯವಸ್ಥೆ ನಿಂತಿತು. ಈಗ ಮತ್ತೆ ಪ್ರತ್ಯೇಕ ಮಾರ್ಗ ಮಾಡಬೇಕು.
- ರಸ್ತೆಯ ಬದಿಯಲ್ಲಿ ವಾಹನಗಳ ಪಾರ್ಕಿಂಗ್ ತಡೆ ಹಿಡಿಯಬೇಕು. ರಸ್ತೆಯಿಂದ ಹೊರಗೆ ಅಲ್ಲಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು.
- ಅವೈಜ್ಞಾನಿಕ ಹಂಪ್‌ಗಳನ್ನು ತೆಗೆಯಬೇಕು. ಗುಂಡಿಗಳನ್ನು ಮುಚ್ಚಬೇಕು.
- ಹೊರವರ್ತುಲ ರಸ್ತೆಯಲ್ಲಿ ಭಾರಿ ವಾಹನಗಳಿಗೆ ಬೆಳಿಗ್ಗೆ 7 ರಿಂದ ರಾತ್ರಿ 10ವರೆಗೆ ನಿರ್ಬಂಧಿಸಬೇಕು.
- ವರ್ತೂರು, ಪಣತ್ತೂರು ಸುತ್ತಮುತ್ತಲ ಪ್ರದೇಶಗಳ ನಿವಾಸಿಗಳಿಗೆ ಮೂಲಸೌಕರ್ಯ ಒದಗಿಸಲು ಕಾರ್ಯಪಡೆ ರಚಿಸಬೇಕು.
- ಮೆಟ್ರೊ ಹಳದಿ ಮತ್ತು ನೇರಳೆ ಮಾರ್ಗಗಳನ್ನು ಶೀಘ್ರ ಕಾರ್ಯಾರಂಭಗೊಳಿಸಬೇಕು. ಮೆಟ್ರೊ ನೀಲಿ, ಗುಲಾಬಿ, ಹಳದಿ ಜಾಲವನ್ನು ಶೀಘ್ರ ಕಲ್ಪಿಸಬೇಕು. ಮೆಟ್ರೊ ಫೀಡರ್ ಸೇವೆ ಒದಗಿಸಬೇಕು.

ಸಂಚಾರ ತ್ರಾಸ ಜನರ ಪ್ರಯಾಸ

ಅಂಕಿ-ಅಂಶಗಳು

₹1.12 ಕೋಟಿ
ಬೆಂಗಳೂರಿನಲ್ಲಿ ನಿತ್ಯ ಸಂಚರಿಸುವ ವಾಹನಗಳ ಪ್ರಮಾಣ

9
ದಟ್ಟಣೆ ಶುಲ್ಕ ವಿಧಿಸಲು ಪ್ರಸ್ತಾಪಿಸಲಾಗಿರುವ ಬೆಂಗಳೂರು ಪ್ರವೇಶಿಸುವ ರಸ್ತೆಗಳ ಸಂಖ್ಯೆ



ಬೆಂಗಳೂರಿನ ಸಿಲ್ಕ್ ಬೋರ್ಡ್ ಬಿಟಿಎಂ ಹೊರವರ್ತುಲ ರಸ್ತೆಯಲ್ಲಿ ವಾಹನ ದಟ್ಟಣೆ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

'ಸಂಚಾರ ಸಮಸ್ಯೆ ಪರಿಹಾರಕ್ಕೆ ಕ್ರಮ'



ಹೆಚ್ಚು ಸಂಚಾರ ದಟ್ಟಣೆ ಉಂಟಾಗುವ ಸ್ಥಳಗಳನ್ನು ಈಗಾಗಲೇ ಗುರುತಿಸಲಾಗಿದೆ. ಸಂಚಾರಕ್ಕೆ ಇರುವ ಸಮಸ್ಯೆಗಳನ್ನು ಮೊದಲು ನಿವಾರಿಸಲಾಗುವುದು. ದಟ್ಟಣೆಗೆ ಕಾರಣವಾಗುವ ಅನಧಿಕೃತ ಅಂಗಡಿಗಳನ್ನು ಗುರುತಿಸಿ ಮೂರು ತಿಂಗಳಲ್ಲಿ ತೆರವುಗೊಳಿಸಲಾಗುವುದು.


ಮಹದೇವಪುರ ವಲಯ ಹೊರ ವರ್ತುಲ ರಸ್ತೆಯಿಂದ ಹೊಸ ಪಿ.ಆರ್.ಆರ್. ರಸ್ತೆಗೆ ಸಂಪರ್ಕ ಕಲ್ಪಿಸಲು 5.6 ಕಿ.ಮೀ. ಉದ್ದದ 45 ಮೀಟರ್ ಅಗಲದ ರಸ್ತೆಯನ್ನು ನಿರ್ಮಾಣ ಮಾಡಲಾಗುತ್ತಿದೆ. ಅದರಲ್ಲಿ 4 ಕಿ.ಮೀ. ರಸ್ತೆ ಕಾಮಗಾರಿ ಪೂರ್ಣಗೊಂಡಿದೆ. ಉಳಿದಿರುವ 1.6 ಕಿ.ಮೀ.ಯಲ್ಲಿ ರೈಲ್ವೆ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಳಿಸಲಾಗುವುದು. ನಗರದ ಎಲ್ಲ ರಸ್ತೆಗಳಲ್ಲಿ ಉಂಟಾಗುವ ದಟ್ಟಣೆ ತಪ್ಪಿಸಲು 100 ದಿನಗಳಲ್ಲಿ ಪರಿಹಾರೋಪಾಯಗಳ ನೀಲನಕ್ಷೆ ತಯಾರಿಸಲಾಗುವುದು.

ಡಿ.ಕೆ. ಶಿವಕುಮಾರ್, ಬೆಂಗಳೂರು ನಗರಾಭಿವೃದ್ಧಿ ಸಚಿವ

ಜನರ ಪ್ರತಿಕ್ರಿಯೆಗಳು

ಬೆಂಗಳೂರು ನಗರವನ್ನು ವಾಹನ ದಟ್ಟಣೆ ಸಮಸ್ಯೆ ಬೆಂಬಿಡದೆ ಕಾಡುತ್ತಿದೆ. ಎಲ್ಲೆಲ್ಲಿ ಸಮಸ್ಯೆ ಅಧಿಕವಾಗಿದೆ ಎಂಬುದನ್ನು 'ಪ್ರಜಾವಾಣಿ' 'ಸಂಚಾರ ತ್ರಾಸ–ಜನರ ಪ್ರಯಾಸ' ಶೀರ್ಷಿಕೆಯಡಿ ಸರಣಿ ವರದಿಗಳನ್ನು ಪ್ರಕಟಿಸಿತ್ತು. ಇದಕ್ಕೆ ಓದುಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಆಯ್ದ ಕೆಲವನ್ನು ಇಲ್ಲಿ ಪ್ರಕಟಿಸಲಾಗಿದೆ

ಮನವಿಗೆ ಸ್ಪಂದಿಸದ ಅಧಿಕಾರಿಗಳು



ಬೆಂಗಳೂರಿನ ಹೃದಯ ಭಾಗದಲ್ಲಿರುವ ಕಾರ್ಪೊರೇಷನ್ ವೃತ್ತಕ್ಕೆ ಅಂಟಿಕೊಂಡಿರುವ ಸಂಪಂಗಿರಾಮನಗರ ರಸ್ತೆಗಳಲ್ಲಿ ಭಾರಿ ಗಾತ್ರದ ಗೂಡ್ಸ್ ವಾಹನಗಳು ಸಂಚರಿಸುತ್ತವೆ. ಸರಿಯಾದ ಫುಟ್‌ಪಾತ್ ಇಲ್ಲ. ಇರುವ ಫುಟ್‌ಪಾತ್ ಅನ್ನು ಹೋಟೆಲ್, ಅಂಗಡಿಗಳವರು ಒತ್ತುವರಿ ಮಾಡಿಕೊಂಡಿದ್ದಾರೆ. ಪಾದಚಾರಿಗಳು ರಸ್ತೆಯಲ್ಲೇ ಓಡಾಡುವ ದುಸ್ಥಿತಿ ಬಂದಿದೆ. ಈ ಬಡಾವಣೆಯಲ್ಲಿ ಸರ್ಕಾರಿ, ಖಾಸಗಿ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಶಾಲಾ ಮಕ್ಕಳು ಅಪಾಯದಲ್ಲೇ ರಸ್ತೆ ಮೂಲಕ ನಡೆದುಹೋಗಬೇಕು. ಹಿರಿಯ ನಾಗರಿಕರ ಪಾಡು ಹೇಳತೀರದು. ಸಂಬಂಧಪಟ್ಟ ಇಲಾಖೆಯವರಿಗೆ ಹಲವು ವರ್ಷಗಳಿಂದ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಸಿ.ಗಣೇಶ್ ಬಾಬು, ಸಂಪಂಗಿರಾಮನಗರ, ಬೆಂಗಳೂರು

ರಸ್ತೆಯಲ್ಲೇ ಹರಿವ ಮಳೆ ನೀರು



ಮೊದಲೇ ದಟ್ಟಣೆಯಿಂದ ಕೂಡಿರುವ ಬೆಂಗಳೂರಿನ ರಸ್ತೆಗಳು ಮಳೆ ಬಂದಾಗ ಇನ್ನಷ್ಟು ಅಧ್ವಾನಕ್ಕೆ ಒಳಗಾಗುತ್ತಿವೆ. ರಸ್ತೆಯ ಇಕ್ಕೆಲಗಳಲ್ಲಿ ಇರಬೇಕಿದ್ದ ಚರಂಡಿ ಒತ್ತುವರಿಯಾಗಿವೆ. ಇರುವುದೂ ವೈಜ್ಞಾನಿಕವಾಗಿಲ್ಲ. ಮಳೆ ಬಂದರೆ ರಸ್ತೆಗಳೇ ಚರಂಡಿಯಂತಾಗುತ್ತವೆ. ಇದರ ಜೊತೆಗೆ ರಸ್ತೆ ಬದಿಯಲ್ಲೇ ನಿಲ್ಲುವ ವಾಹನಗಳು, ರಸ್ತೆವರೆಗೆ ಮುಂಚಾಚಿಕೊಂಡಿರುವ ತಾತ್ಕಾಲಿಕ ವ್ಯಾಪಾರ ಮಾಡುವ ಅಂಗಡಿಗಳು ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸಿವೆ. ಬಿಬಿಎಂಪಿ, ಸಂಚಾರ ಪೊಲೀಸರು ದಿಟ್ಟ ಕ್ರಮ ಕೈಗೊಂಡರೆ ಸಮಸ್ಯೆ ಸರಿಯಾಗಲಿದೆ.

ಸು. ಜಗದೀಶ್, ಎಚ್‌ಎಎಲ್ ನಿವಾಸಿ

ಸಾರಕ್ಕಿ ಸಿಗ್ನಲ್‌ನಲ್ಲಿ ಬೇಕು ಅಪಾರ ತಾಳ್ಮೆ



ಬೆಂಗಳೂರು ದಕ್ಷಿಣ ಭಾಗದ ಸಾರಕ್ಕಿ ವೃತ್ತದ ಸಿಗ್ನಲ್ ಅಪಾರ ತಾಳ್ಮೆಯನ್ನು ಬೇಡುತ್ತದೆ. ದಟ್ಟಣೆಯ ಅವಧಿಯಲ್ಲಂತೂ ಬುದ್ಧನಂತಹವನೂ ವಿಶ್ವಾಮಿತ್ರನಂತೆ ಆಗುತ್ತಾನೆ. ಜೆ.ಪಿ. ನಗರದಿಂದ ಮತ್ತು ಬನಶಂಕರಿಯಿಂದ ಬರುವ ವಾಹನಗಳಿಗೆ ಬಲ ತಿರುವು ನಿಷೇಧಿಸಿರುವುದು ದಟ್ಟಣೆಗೆ ಮುಖ್ಯ ಕಾರಣ. ನಾಲ್ಕೂ ರಸ್ತೆಗಳಿಂದ ನಾಲ್ಕು ಸುತ್ತುಗಳಲ್ಲಿ ಸಂಚಾರ ವ್ಯವಸ್ಥೆ ಮಾಡಿದರೆ ಅನುಕೂಲ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಚಾಲಕರಿಗೆ ಜಾಗೃತಿ ಮೂಡಿಸಿ



ಬಿಟಿಎಂ ಬಡಾವಣೆಯ 2ನೇ ಹಂತದ ಉಡುಪಿ ಗಾರ್ಡನ್ ವೃತ ದಲ್ಲಿ ಬೆಳಿಗ್ಗೆ ಮತ್ತು ಸಂಜೆ ಹೊಸೂರು ರಸ್ತೆ ಕಡೆ ಮತ್ತು ಮೆಜೆಸ್ಟಿಕ್ ಕಡೆಯಿಂದ ವಾಹನಗಳ ಸಂಚಾರ ಅಧಿಕವಾಗಿರುತ್ತದೆ. ರೆಡ್ ಸಿಗ್ನಲ್ ಬಂದರೂ ವಾಹನ ಚಾಲನೆ ನಿಲ್ಲುವುದಿಲ್ಲ. ಇದರಿಂದ ಪಾದಚಾರಿಗಳು ರಸ್ತೆ ದಾಟಲು ಪರದಾಡುವಂತಾಗಿದೆ. ವಾಹನದಟ್ಟಣೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದರ ಜೊತೆಗೆ ವಾಹನ ಚಾಲಕರು ಚಾಲನಾ ನಿಯಮ ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಬೇಕು. 16ನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಗೂಡಂಗಡಿ, ದ್ವಿಚಕ್ರವಾಹನ ನಿಲುಗಡೆ ತೆರವುಗೊಳಿಸಬೇಕು.

ಎಚ್. ದೊಡ್ಡ ಮಾರಯ್ಯ, ಬಿಟಿಎಂ ಬಡಾವಣೆ ನಿವಾಸಿ

ವೇಗವಾಗಿ ನಡೆಯಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿ



ಪ್ರತಿದಿನ ಸಂಜೆ 5 ರಿಂದ ರಾತ್ರಿ 9 ಗಂಟೆವರೆಗೆ ನಾಯಂಡಹಳ್ಳಿ ಜಂಕ್ಷನ್‌ನಿಂದ ಪಿಇಎಸ್ ಎಂಜಿನಿಯರಿಂಗ್ ಕಾಲೇಜುವರೆಗಿನ ರಿಂಗ್ ರಸ್ತೆಯಲ್ಲಿ ಭಾರಿ ದಟ್ಟಣೆ ಉಂಟಾಗುತ್ತಿದೆ. ದಟ್ಟಣೆಯೊಳಗೆ ದ್ವಿಚಕ್ರ ವಾಹನ ಸವಾರರು ಎಡ ಬಲ ಎಲ್ಲೆಂದರಲ್ಲಿ ನುಗ್ಗುವುದು ಸುಗಮ ಚಾಲನೆಗೆ ಅಡ್ಡಿಯಾಗುತ್ತಿದೆ. ಸಂಚಾರ ಪೊಲೀಸರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ವೀರಭದ್ರನಗರ ವೃತ್ತದಲ್ಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವುದೂ ದಟ್ಟಣೆ ಸಮಸ್ಯೆ ಉಲ್ಬಣಗೊಳ್ಳಲು ಕಾರಣವಾಗಿದೆ.

ಬೈರಮಂಗಲ ರಾಮೇಗೌಡ, ಪುಷ್ಪಗಿರಿನಗರ, ಹೊಸಕೆರೆಹಳ್ಳಿ

ಸಮಯಕ್ಕೆ ಸರಿಯಾಗಿ ತಲುಪುವಂತೆ ಮಾಡಿ



ತುಮಕೂರು ರಸ್ತೆ, ಮೈಸೂರು ರಸ್ತೆ, ಮಾಗಡಿ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಅಧಿಕ ವಾಹನಗಳಿಂದಾಗಿ 10 ಕಿಲೋಮೀಟರ್ ಸಾಗಲು 2 ರಿಂದ 3 ತಾಸು ಬೇಕಾಗುತ್ತದೆ. ಇದರಿಂದ ಕಚೇರಿ, ಶಾಲಾ–ಕಾಲೇಜುಗಳಿಗೆ, ಆಸ್ಪತ್ರೆಗಳಿಗೆ ಹೋಗುವ ಜನರು ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಈ ಸಮಸ್ಯೆ ಸರಿಪಡಿಸಬೇಕು.

ಕೆ.ಎಸ್. ಕುಮಾರಸ್ವಾಮಿ, ವಿಜಯನಗರ

ಮೇಲ್ಸೇತುವೆ ಯೋಜನೆ ಬದಲಾಯಿಸಿ

ಜನದಟ್ಟಣೆ ನಿಯಂತ್ರಣಕ್ಕಾಗಿ ಹಡ್ಸನ್ ಸರ್ಕಲ್ ಬಳಿ ಮೇಲ್ಸೇತುವೆ ನಿರ್ಮಿಸಲು ಸರ್ಕಾರ ಯೋಜನೆ ರೂಪಿಸುತ್ತಿದೆ. ಇದು ಪರಿಹಾರ ನೀಡುವ ಬದಲು ಇನ್ನಷ್ಟು ದಟ್ಟಣೆ ಹೆಚ್ಚಿಸಲು ಕಾರಣವಾಗುತ್ತಿದೆ. ಈ ಸೇತುವೆಯ ಮೇಲೆ ಬರುವ ವಾಹನಗಳು ಹಡ್ಸನ್ ಸರ್ಕಲ್ ಡೌನ್ ರ್‍ಯಾಂಪ್‌ನಲ್ಲಿ ಇಳಿದು ಡಿಸ್ಟ್ರಿಕ್ಟ್ ಆಫೀಸ್ ರಸ್ತೆಯತ್ತ ಸಾಗುವಾಗ ಕಂಠೀರವ ಕ್ರೀಡಾಂಗಣ ಕಡೆಯಿಂದ ಬರುವ ವಾಹನಗಳೂ ಸೇರಿಕೊಳ್ಳುತ್ತವೆ. ಮುಂದೆ ಸೇಂಟ್ ಮಾರ್ಥಾಸ್ ಆಸ್ಪತ್ರೆಯಿಂದಲೇ ದಟ್ಟಣೆ ಉಂಟಾಗಿ ಮೆಜೆಸ್ಟಿಕ್‌ವರೆಗೂ ಸಮಸ್ಯೆಯಾಗಬಹುದು. ಅದರ ಬದಲು ಡಿಸ್ಟ್ರಿಕ್ಟ್ ಆಫೀಸ್ ರಸ್ತೆ ಮತ್ತು ಕೆಂಪೇಗೌಡ ರಸ್ತೆಯ ಮೂಲಕ ಮೇಲ್ಸೇತುವೆ ಮುಂದುವರಿಸಬೇಕು. ಕೆಂಪೇಗೌಡ ಸರ್ಕಲ್ ಬಳಿ ಒಂದು ಡೌನ್ ರ್‍ಯಾಂಪ್ ನಿರ್ಮಿಸಿ, ವಾಹನಗಳು ಉಪ್ಪಾರಪೇಟೆ ಪೊಲೀಸ್ ಠಾಣೆ ಕಡೆಗೆ ತಿರುವು ಪಡೆದು ಮುಂದೆ ಸಾಗಬಹುದು. ಮೇಲ್ಸೇತುವೆಯ ಮತ್ತೊಂದು ಕಡೆಯಿಂದ ಸೇತುವೆಯನ್ನು ಮುಂದುವರಿಸಿ ಕೆಂಪೇಗೌಡ ಬಸ್ ನಿಲ್ದಾಣದವರೆಗೂ ನಿರ್ಮಿಸಬೇಕು. ಆಗ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳು ಈ ಸೇತುವೆ ಮೂಲಕ ಸಾಗುವುದರಿಂದ ದಟ್ಟಣೆ ಕಡಿಮೆಯಾಗಬಹುದು.


ಸಿ. ರಮೇಶ, ಮಹಾಗಣಪತಿ ನಗರ, ಪಶ್ಚಿಮ ಕಾರ್ಡ್ ರಸ್ತೆ

ಅತ್ತ ದರಿ ಇತ್ತ ಪುಲಿ

ಮೈಸೂರು ರಸ್ತೆಯಿಂದ ಮೆಜೆಸ್ಟಿಕ್ ಹೋಗುವ ಗೂಡ್ಸ್ ಶೆಡ್ ರಸ್ತೆಯು ಸದಾ ವಾಹನ ದಟ್ಟಣೆಯಿಂದ ಕೂಡಿದೆ. ವೃದ್ಧರು, ಶಾಲಾ ಮಕ್ಕಳು, ಮಹಿಳೆಯರು ರಸ್ತೆ ದಾಟಲು ಕನಿಷ್ಠ 30 ನಿಮಿಷ ಕಾಯಬೇಕಿದೆ. ಪಾದಚಾರಿ ರಸ್ತೆಯನ್ನು ವರ್ಕ್ ಶಾಪ್, ಗ್ಯಾರೇಜ್‌ನವರು ಸಂಪೂರ್ಣವಾಗಿ ಅತಿಕ್ರಮಿಸಿಕೊಂಡಿದ್ದಾರೆ. ಅತ್ತ ರಸ್ತೆಯಲ್ಲಿ ವಾಹನಗಳು ಡಿಕ್ಕಿ ಹೊಡೆಯುವ ಭೀತಿ. ಇತ್ತ ಪಾದಚಾರಿ ರಸ್ತೆಯಮೇಲೆ ಕಬ್ಬಿಣದ ರಾಡ್‌ಗಳು, ತಗಡಿನ ತುಂಡುಗಳು ರಾಶಿ ರಾಶಿ ಬಿದ್ದಿರುವುದರಿಂದ ಕಾಲಿಗೆ ತಗಡುಗಳು ಕಾಲಿಗೆ ಗೀಚಿ ಗಾಯವಾಗುವ ಭೀತಿ. ಪಕ್ಕದ ಬಿನ್ನಿಮಿಲ್ ರಸ್ತೆಯ ಬಾಳೆಕಾಯಿ ಮಂಡಿ ಸಮೀಪ ರಾಜಕಾಲುವೆ ದುರಸ್ತಿ ಕಾಮಗಾರಿ ನಡೆಯುತ್ತಿರುವುದರಿಂದ ಮಾರ್ಗ ಬದಲಾಯಿಸಿ ಇತ್ತ ವಾಹನಗಳನ್ನು ಬಿಡಲಾಗುತ್ತಿದೆ. ಅಲ್ಲಿಯ ಕಾಮಗಾರಿ ನಿಧಾನ ಗತಿಯಲ್ಲಿ ನಡೆಯುತ್ತಿರುವುದರಿಂದ ಸಾರ್ವಜನಿಕರು ಪರದಾಡುವಂತಾಗಿದೆ.

ಪ್ರಭಾಕರ್, ಚಾಮರಾಜಪೇಟೆ

ರಸ್ತೆ ಗುಂಡಿ ಮುಚ್ಚಿ



ನಾನೊಬ್ಬ ಎಂಜಿನಿಯರ್ ಉದ್ಯೋಗಿಯಾಗಿ ಹತ್ತು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದೇನೆ. ನಾನು ಕಂಡ ಹಾಗೆ ಮುಕ್ಕಾಲು ಭಾಗ ಮೆಟ್ರೊ ರೈಲಿನ ಕಾಮಗಾರಿಗಳು ಪೂರ್ಣಗೊಂಡಿವೆಯಾದರೂ ಸುಮಾರು ಎಂಟು ವರ್ಷಗಳಿಂದ ರಸ್ತೆ ಅಗೆದ ಗುಂಡಿಗಳನ್ನೇ ಕಾಣುತ್ತಿದ್ದೇನೆ. ರಸ್ತೆಯಲ್ಲಿ ವಾಹನ ಸವಾರರು ಸರ್ಕಸ್ ಮಾಡುತ್ತಲೇ ಸಾಗಬೇಕಾದ ಅನಿವಾರ್ಯತೆ ಇದೆ, ಹೊರ ವರ್ತುಲ ರಸ್ತೆಯಲ್ಲಿ ಮೇಲ್ಸೇತುವೆ ಇದೆಯಾದರೂ ವಾಹನ ದಟ್ಟಣೆ ಮಾತ್ರ ಹಾಗೆಯೇ ಮುಂದುವರಿದಿದೆ. ಸಂಚಾರ ಪೊಲೀಸರು ಪರಿಣಾಮಕಾರಿಯಾಗಿ ಕಾರ್ಯನಿರ್ಹಿಸಬೇಕು. ರಸ್ತೆ ಗುಂಡಿಗಳನ್ನು ಮುಚ್ಚಲು ಬಿಬಿಎಂಪಿ ಕ್ರಮ ಕೈಗೊಳ್ಳಬೇಕು.

ಎಂ .ಜೆ. ಅಭಿಷೇಕ್, ಬಿಟಿಎಂ ಲೇಔಟ್ 38ನೇ ಮುಖ್ಯರಸ್ತೆ, ಬೆಂಗಳೂರು



ಮೆರವಣಿಗೆ

ಪ್ರಣವಾನಂದ ಸ್ವಾಮೀಜಿ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುತ್ತಿರುವುದನ್ನು ಖಂಡಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ರಾಷ್ಟ್ರೀಯ ಈಡಿಗ ಮಹಾಮಂಡಳಿ ಸದಸ್ಯರು ಪಂಜಿನ ಮೆರವಣಿಗೆ ನಡೆಸಿದರು – ಪ್ರಜಾವಾಣಿ ಚಿತ್ರ

'ಭಾವನೆ ವಿಕಾಸಗೊಳ್ಳದಿರುವುದು ನೋವಿನ ಸಂಗತಿ'

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು): 'ಆಧುನಿಕ ಭರಾಟೆ, ವೈಜ್ಞಾನಿಕ ನಾಗಾಲೋಟದಲ್ಲಿ ಜನಸಾಮಾನ್ಯರ ಬೌದ್ಧಿಕ ಮಟ್ಟ ವಿಕಾಸಗೊಂಡಿವೆ. ಆದರೆ, ಭಾವನೆಗಳು ವಿಕಾಸಗೊಳ್ಳದಿರುವುದು ನೋವಿನ ಸಂಗತಿ' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಭಾನುವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, 'ಮನುಷ್ಯ ಎಷ್ಟೇ ಸಂಪತ್ತು ಗಳಿಸಿದ್ದರೂ ಶಾಂತಿ ನೆಮ್ಮದಿ ಕಳೆದುಕೊಂಡಿದ್ದಾನೆ. ನಾಡ ಹಬ್ಬ ಆಚರಣೆ ಮೂಲಕ ಮನಸ್ಸುಗಳಲ್ಲಿ ಕೊಳೆ ನಿರ್ಮೂಲನೆಗೊಳಿಸುವ ಪ್ರಯತ್ನ ನಡೆಸುತ್ತ ಬಂದಿದ್ದೇವೆ. ಧಾರ್ಮಿಕ ಸಂಸ್ಕೃತಿಕ ಕಾರ್ಯಕ್ರಮಗಳು ಸ್ವಸ್ಥ ಸಮಾಜ ನಿರ್ಮಾಣಕ್ಕೆ ಸಹಕಾರಿ ಆಗಲಿವೆ' ಎಂದರು.

'ಮೈಸೂರು ಮಹಾರಾಜರು ಆಚರಿಸಿಕೊಂಡು ಬಂದಿರುವ ದಸರಾ ಸಂಸ್ಕೃತಿಕ ವೈಭವ ಹೊಂದಿದೆ. ಆದರೆ, ರಂಭಾಪುರಿ ಪೀಠದ ಗುರುಮನೆಯ ದಸರಾ ಹಬ್ಬ ಕಲೆ, ಸಂಸ್ಕೃತಿ, ಅಧ್ಯಾತ್ಮಿಕ ಪುನರೋತ್ಥಾನಕ್ಕಗಿ ಆಚರಿಸುತ್ತ ಬಂದಿದೆ' ಎಂದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ ಯಡಿಯೂರಪ್ಪ, ಅರಣ್ಯ ಸಚಿವ ಈಶ್ವರ ಖಂಡ್ರೆ, ಸಂಸದರಾದ ಸಂಗಣ್ಣ ಕರಡಿ, ರಾಜಾ ಅಮರೇಶ್ವರ ನಾಯಕ, ಶಾಸಕರಾದ ಡಾ. ಶಿವರಾಜ ಪಾಟೀಲ, ಹಂಪನಗೌಡ ಬಾದರ್ಲಿ, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಮಾತನಾಡಿದರು.

ಕಸ್ಟಮ್ಸ್ ಅಧಿಕಾರಿಗಳ ಕಣ್ತಪ್ಪಿಸಿ ಕೃತ್ಯ • ಮದ್ಯದ ಬಾಟಲಿ, ಮೊಬೈಲ್, ಚಿನ್ನದ ಉಂಗುರ ಜಪ್ತಿ

ಅಕ್ರಮ ಸಾಗಣೆ: ಜಾಲ ಭೇದಿಸಿದ ಸಿಸಿಬಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳ ಕಣ್ತಪ್ಪಿಸಿ ಹಲವು ವಸ್ತುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಉಲ್ಲಾಳದ ಆರ್. ವರದರಾಜ್ (52), ಶ್ರೀನಿವಾಸ್ ನಗರದ ಶ್ರೀನಿವಾಸ್ (61) ಹಾಗೂ ಬಸವನಗುಡಿಯ ಬಿ. ನಾಗೇಶ್ (44) ಬಂಧಿತರು. ವಿದೇಶಿ ಕಂಪನಿಗಳ 21 ಮದ್ಯದ ಬಾಟಲಿಗಳು, 17 ಐ–ಫೋನ್‌ಗಳು ಹಾಗೂ 8 ಚಿನ್ನದ ಉಂಗುರಗಳನ್ನು ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ಬಟ್ಟೆ ಬ್ಯಾಗ್‌ಗಳಲ್ಲಿ ಸಾಗಣೆ: 'ಥಾಯ್ಲೆಂಡ್‌ಗೆ ಹೋಗಿದ್ದ ಮೂವರು ಆರೋಪಿಗಳು, ಬಟ್ಟೆಗಳ ಬ್ಯಾಗ್‌ಗಳಲ್ಲಿ ವಸ್ತುಗಳನ್ನು ಬಚ್ಚಿಟ್ಟುಕೊಂಡು ವಿಮಾನದಲ್ಲಿ ಬೆಂಗಳೂರಿಗೆ ಬಂದಿಳಿದಿದ್ದರು. ಕಸ್ಟಮ್ಸ್ ಅಧಿಕಾರಿಗಳ ಕಣ್ತಪ್ಪಿಸಿ ವಿಮಾನ ನಿಲ್ದಾಣದಿಂದ ಹೊರಗೆ ಬಂದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಟರ್ಮಿನಲ್ -2ರ ಬಳಿಯ ವಾಹನ ಪಾರ್ಕಿಂಗ್ ಜಾಗದಲ್ಲಿ ನಿಂತಿದ್ದ ಆರೋಪಿಗಳು, ವಸ್ತುಗಳ ಮಾರಾಟ ಬಗ್ಗೆ ಮಾತನಾಡುತ್ತಿದ್ದರು. ಈ ಕುರಿತು ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಮೂವರನ್ನೂ ವಶಕ್ಕೆ ಪಡೆಯಲಾಗಿತ್ತು. ವಿಚಾರಣೆ ನಡೆಸಿದಾಗ, ವಸ್ತುಗಳ ಅಕ್ರಮ ಸಾಗಣೆ ವಿಷಯ ಬಾಯ್ಬಿಟ್ಟರು' ಎಂದು ಹೇಳಿವೆ.

ಕಡಿಮೆ ಬೆಲೆಗೆ ಖರೀದಿ: 'ಥಾಯ್ಲೆಂಡ್‌ನಲ್ಲಿ ಕಡಿಮೆ ಬೆಲೆಗೆ ಮದ್ಯ, ಐ–ಫೋನ್, ಚಿನ್ನಾಭರಣ ಖರೀದಿಸುತ್ತಿದ್ದ ಆರೋಪಿಗಳು, ಅವುಗಳನ್ನೇ ಅಕ್ರಮವಾಗಿ ಬೆಂಗಳೂರಿಗೆ ತಂದು ಹೆಚ್ಚಿನ ಬೆಲೆಗೆ ಮಾರಿ, ಹಣ ಸಂಪಾದಿಸುತ್ತಿದ್ದರು. 'ಆರೋಪಿಗಳು ಹಲವು ವರ್ಷಗಳಿಂದ ಅಕ್ರಮ ಸಾಗಣೆಯಲ್ಲಿ ತೊಡಗಿರುವ ಮಾಹಿತಿ ಇದೆ. ಮೂವರ ಪ್ರವಾಸದ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ' ಎಂದಿವೆ.

ಪ್ರತ್ಯೇಕ ಅಪಘಾತ: 3 ಸಾವು

ಬೆಂಗಳೂರು: ನಗರದಲ್ಲಿ ಶನಿವಾರ ಮೂರು ಕಡೆ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಮೂವರು ದ್ವಿಚಕ್ರ ವಾಹನಗಳ ಸವಾರರು ಮೃತಪಟ್ಟಿದ್ದಾರೆ.

ಆನೇಕಲ್‌ನ ಮಂಜುನಾಥ್ (40), ಬಿಹಾರದ ಪೇಂಟರ್ ರಾಜು (35) ಹಾಗೂ ಬೆಂಗಳೂರು ರಾಯಲ್ ರಸ್ತೆಯ ಜಯಸೂರ್ಯ (16) ಮೃತರು. ಮೂರು ಅಪಘಾತಗಳಿಗೆ ಸಂಬಂಧಪಟ್ಟಂತೆ ಜಾಲಹಳ್ಳಿ, ಎಲೆಕ್ಟ್ರಾನಿಕ್ ಸಿಟಿ ಹಾಗೂ ಚಿಕ್ಕಪೇಟೆ ಸಂಚಾರ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

ಪತ್ನಿ ಕರೆತರಲು ಹೊರಟಿದ್ದರು: 'ಮಂಜುನಾಥ್ ಅವರು ಮಹಾಲಯ ಅಮಾವಾಸ್ಯೆ ನಿಮಿತ್ತ ಹೆಸರಘಟ್ಟ ರಸ್ತೆಯಲ್ಲಿರುವ ಸಂಬಂಧಿಕರ ಮನೆಗೆ ಬಂದಿದ್ದರು. ತುಮಕೂರಿನಲ್ಲಿದ್ದ ಪತ್ನಿ ಕೂಡ ಇದೇ ಸಂಬಂಧಿಕರ ಮನೆಗೆ ಬರಲು, ರೈಲಿನಲ್ಲಿ ನಗರಕ್ಕೆ ಬಂದಿದ್ದರು. ಮಂಜುನಾಥ್, ರೈಲು ನಿಲ್ದಾಣದಿಂದ ಪತ್ನಿ ಕರೆತರಲು ಹೋಗುತ್ತಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಜಾಲಹಳ್ಳಿ ಸಂಚಾರ ಪೊಲೀಸರು ಹೇಳಿದರು.

'ಶನಿವಾರ ಸಂಜೆ 5 ಗಂಟೆ ಸುಮಾರಿಗೆ ಸೋಲದೇವನಹಳ್ಳಿ ಪೊಲೀಸ್ ಠಾಣೆ ಸಮೀಪದಲ್ಲಿ ಮಂಜುನಾಥ್ ಹೊರಟಿದ್ದರು. ನಿಯಂತ್ರಣ ತಪ್ಪಿದ್ದ ದ್ವಿಚಕ್ರ ವಾಹನ, ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿತ್ತು. ವಿಷಯ ತಿಳಿದ ಪತ್ನಿ ಹಾಗೂ ಸಂಬಂಧಿಕರು, ಆಸ್ಪತ್ರೆಗೆ ಕರೆದೊಯ್ದಿದ್ದರು. ಆಸ್ಪತ್ರೆಯಲ್ಲಿ ಮಂಜುನಾಥ್ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

ಬೈಕ್‌ಗೆ ಕಾರು ಡಿಕ್ಕಿ: 'ಬಿಹಾರದ ರಾಜು, ಪೇಂಟರ್ ಕೆಲಸ ಮಾಡುತ್ತಿದ್ದರು. ಬೊಮ್ಮನಹಳ್ಳಿಯಲ್ಲಿ ವಾಸವಿದ್ದರು. ಶನಿವಾರ ಸಂಜೆ ಕೆಲಸ ಮುಗಿಸಿ ಸ್ನೇಹಿತನ ಜೊತೆ ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದಾಗ ಅಪಘಾತ ಸಂಭವಿಸಿದೆ' ಎಂದು ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸರು ಹೇಳಿದರು.

'ಹೊಸೂರು ರಸ್ತೆಯ ಸಿಂಗಸಂದ್ರ ಬಳಿಯ ಸರ್ವೀಸ್ ರಸ್ತೆಯಲ್ಲಿ ಬೈಕ್‌ಗೆ ಕಾರು ಡಿಕ್ಕಿ ಹೊಡೆದಿತ್ತು. ಬೈಕ್ ರಸ್ತೆಯಲ್ಲಿ ಉರುಳಿಬಿದ್ದಿತ್ತು. ತೀವ್ರ ಗಾಯಗೊಂಡ ರಾಜು ಮೃತಪಟ್ಟಿದ್ದಾರೆ. ಹಿಂಬದಿ ಕುಳಿತಿದ್ದ ಸ್ನೇಹಿತ ಗಾಯಗೊಂಡಿದ್ದಾರೆ' ಎಂದರು.

ಪಿಯು ವಿದ್ಯಾರ್ಥಿ ಸಾವು: 'ಪಿಯು ಪ್ರಥಮ ವರ್ಷದ ವಿದ್ಯಾರ್ಥಿ ಜಯಸೂರ್ಯ ಶನಿವಾರ ರಾತ್ರಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ. ಚಾಮರಾಜಪೇಟೆಯ ಸಿಸಿಬಿ ಕಚೇರಿ ಹಿಂಭಾಗದ ರಸ್ತೆಯಲ್ಲಿ ನಿಂತಿದ್ದ ಗೂಡ್ಸ್ ವಾಹನಕ್ಕೆ, ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ಜಯಸೂರ್ಯ ಮೃತಪಟ್ಟಿದ್ದಾನೆ' ಎಂದು ಪೊಲೀಸರು ಹೇಳಿದರು.

'ಜಯಸೂರ್ಯ ಅಪ್ರಾಪ್ತ. ಈತನಿಗೆ ವಾಹನ ಚಲನಾ ಪರವಾನಗಿ ಇರಲಿಲ್ಲ. ಅಷ್ಟಾದರೂ ದ್ವಿಚಕ್ರ ವಾಹನ ಚಲಾಯಿಸಿಕೊಂಡು ಹೊರಟಿದ್ದ. ಅಪಘಾತ ಸಂಬಂಧ ಎರಡೂ ಕಡೆಯಿಂದಲೂ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಜಯಸೂರ್ಯ ಪೋಷಕರ ವಿರುದ್ಧವೂ ಕ್ರಮ ಜರುಗಿಸಲು ಚಿಂತನೆ ನಡೆದಿದೆ' ಎಂದು ತಿಳಿಸಿದರು.

ಪ್ಯಾಲೆಸ್ಟೀನ್ ಜನರ ಪರ ನಿಲ್ಲಿ: ಮೋದಿಗೆ ಒವೈಸಿ ಆಗ್ರಹ

ಹೈದರಾಬಾದ್ (ಪಿಟಿಐ): ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಸಂಘರ್ಷದಿಂದ ತತ್ತರಿಸಿರುವ ಪ್ಯಾಲೆಸ್ಟೀನಿಯನ್ನರ ಪರ ನಿಲ್ಲಬೇಕು ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದ್ದಾರೆ.

ಶನಿವಾರ ಇಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ಯಾಲೆಸ್ಟೀನ್ ವಿಚಾರವು ಮುಸ್ಲಿಮರಿಗೆ ಮಾತ್ರ ಸಂಬಂಧಿಸಿದ್ದಲ್ಲ ಮನುಷ್ಯತ್ವಕ್ಕೆ ಸಂಬಂಧಿಸಿದ್ದು ಎಂದು ಅವರು ಹೇಳಿದ್ದಾರೆ. ನ್ಯಾಯ ಬಯಸುವ ಪ್ರತಿಯೊಬ್ಬರಿಗೂ ಸಂಬಂಧಿಸಿದ ವಿಚಾರ ಕೂಡ ಹೌದು ಎಂದಿದ್ದಾರೆ.

ಗಾಜಾದಲ್ಲಿ ನಡೆಯುತ್ತಿರುವುದು 'ಜನಾಂಗೀಯ ಶುದ್ಧೀಕರಣ' ಎಂದಿರುವ ಅವರು, ಇಸ್ರೇಲ್ ನಡೆಸುತ್ತಿರುವ ಯುದ್ಧಾಪರಾಧಗಳನ್ನು ಭಾರತ ಸರ್ಕಾರ ಖಂಡಿಸಬೇಕು ಎಂದು ಹೇಳಿದ್ದಾರೆ.

ಕೃಷಿ ವಿಜ್ಞಾನಿ ಆಗಬೇಕೆಂಬ ಅಪ್ಪನ ಆಸೆ ಈಡೇರಿಸಿದ ಮಗ

ರೈತನ ಮಗನಿಗೆ 16 ಚಿನ್ನದ ಪದಕ

• ಶಶಿಕಾಂತ ಎಸ್. ಶೆಂಬೆಳ್ಳಿ

ಪ್ರಜಾವಾಣಿ ವಿಶೇಷ



ರಾಘವೇಶ ಎ.ಎನ್.

ಬೀದರ್: ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಅವಸರದಹಳ್ಳಿಯ ರೈತ ಕುಟುಂಬದ ಯುವಕ ರಾಘವೇಶ ಎ.ಎನ್., 'ಬ್ಯಾಚುಲರ್ ಆಫ್ ವೆಟರ್ನರಿ ಸೈನ್ಸ್ ಅಂಡ್ ಅನಿಮಲ್ ಹಸ್ಬಂಡರಿ ಕೋರ್ಸ್'ನಲ್ಲಿ (ಬಿವಿಎಸ್ಸಿ ಅಂಡ್ ಎಎಚ್) ಒಟ್ಟು 16 ಚಿನ್ನದ ಪದಕಗಳ ಸಾಧನೆ ಮಾಡಿದ್ದಾರೆ.

ಇಷ್ಟೇ ಅಲ್ಲ, ಕೃಷಿ ವಿಜ್ಞಾನಿಯಾಗಿ ಕೃಷಿಗೆ ಹೊಸತನ ಕೊಟ್ಟು ರೈತರ ಆದಾಯ ದುಪ್ಪಟ್ಟು ಮಾಡಿ ಅವರ ಬದುಕು ಹಸನುಗೊಳಿಸಬೇಕೆಂಬ ತಂದೆಯ ಆಸೆಯನ್ನು ಈ ಮೂಲಕ ಈಡೇರಿಸಿದ ಸಂತೃಪ್ತಿ ರಾಘವೇಶ ಅವರದು.

ರಾಘವೇಶ ಅವರು ಬೀದರ್‌ನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಗದಗ ಪಶು ವೈದ್ಯಕೀಯ ಕಾಲೇಜಿನಲ್ಲಿ 2021–22ನೇ ಸಾಲಿನಲ್ಲಿ ಬಿವಿಎಸ್ಸಿ ಮತ್ತು ಎ.ಎಚ್. ಕೋರ್ಸ್ ಮುಗಿಸಿದ್ದಾರೆ. 16 ವಿವಿಧ ವಿಷಯಗಳಲ್ಲಿ ತಲಾ ಒಂದೊಂದು ಚಿನ್ನದ ಪದಕಗಳನ್ನು ಗಳಿಸಿದ್ದಾರೆ. ಇವರಿಗೆ ಸೋಮವಾರ (ಅ.16) ವಿಶ್ವವಿದ್ಯಾಲಯದಲ್ಲಿ ನಡೆಯಲಿರುವ 13ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಚಿನ್ನದ ಪದಕಗಳನ್ನು ಪ್ರದಾನ ಮಾಡುವರು.

ರಾಘವೇಶ ಮಂಡ್ಯ ತಾಲ್ಲೂಕಿನ ಮದ್ದೂರಿನವರು. ಇವರ ಕುಟುಂಬದ ಮುಖ್ಯ ಕಸುಬು ಕೃಷಿ. ತಂದೆ–ತಾಯಿ ಇಬ್ಬರೂ ಕೃಷಿಕಾರರು. ರಾಘವೇಶ ಅವರಿಗೆ ಆರಂಭದಿಂದಲೂ ಎಂಬಿಬಿಎಸ್ ಮಾಡಿ, ವೈದ್ಯನಾಗಬೇಕೆಂಬ ಆಸೆ ಇತ್ತು. ಆದರೆ, ತಂದೆಗೆ ಮಗ ಕೃಷಿ ವಿಜ್ಞಾನಿ ಆಗಿ ನೋಡಬೇಕೆಂಬ ಹಂಬಲ ಇತ್ತು. ರಾಘವೇಶಗೆ ಎಂಬಿಬಿಎಸ್ ಸೀಟು ಸಿಗದ ಕಾರಣ ಅವರು ಬಿವಿಎಸ್ಸಿ ಮತ್ತು ಎಎಚ್ ಆಯ್ಕೆ ಮಾಡಿಕೊಂಡು, ಅದರಲ್ಲಿ ಹಿರಿದಾದ ಸಾಧನೆ ಮಾಡಿದ್ದಾರೆ.

ಮದ್ದೂರಿನಲ್ಲಿ ಎಸ್ಸೆಸ್ಸೆಲ್ಸಿ, ಕೆ.ಎಂ. ದೊಡ್ಡಿಯ ಭಾರತಿ ಕಾಲೇಜಿನಲ್ಲಿ ಪಿಯು ಪೂರ್ಣಗೊಳಿಸಿದ ನಂತರ ಗದಗ ಪಶು ವೈದ್ಯಕೀಯ ಕಾಲೇಜು ಸೇರಿದರು. ಐದುವರೆ ವರ್ಷಗಳ ಕೋರ್ಸ್ ಪೂರ್ಣಗೊಳಿಸಿದ ನಂತರ, ಉತ್ತರ ಪ್ರದೇಶದ ಬರೇಲಿಯ 'ಇಂಡಿಯನ್ ವೆಟರ್ನರಿ ರಿಸರ್ಚ್ ಇನ್‌ಸ್ಟಿಟ್ಯೂಟ್'ನಲ್ಲಿ ಸ್ನಾತಕೋತ್ತರ ವೈರಾಣುಶಾಸ್ತ್ರ ಕೋರ್ಸ್ ವ್ಯಾಸಂಗ ಮಾಡುತ್ತಿದ್ದಾರೆ.

'ನಾನು ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರ ಸ್ವೀಕರಿಸಲು ಬರುತ್ತಿದ್ದೆ. ಮಾರ್ಗ ಮಧ್ಯದಲ್ಲಿ ಇರುವಾಗ ವಿ.ವಿ. ಕಡೆಯಿಂದ ಕರೆ ಬಂತು. ನಿಮಗೆ 16 ಚಿನ್ನದ ಪದಕಗಳು ನೀಡಲಾಗುವುದು ಎಂದು ಹೇಳಿದರು. ವಿಷಯ ಕೇಳಿ ನನಗೆ ಬಹಳ ಖುಷಿಯಾಯಿತು' ಎಂದು ರಾಘವೇಶ 'ಪ್ರಜಾವಾಣಿ'ಗೆ ತಿಳಿಸಿದರು.

'ಗದಗ ಕಾಲೇಜಿನಲ್ಲಿ ಪ್ರಾಧ್ಯಾಪಕರು ಉತ್ತಮ ರೀತಿಯಿಂದ ಪಾಠ ಮಾಡಿದ್ದಾರೆ. ಅಲ್ಲಿ ಓದುವುದು, ಆಟವಾಡುವುದು ಬಿಟ್ಟರೆ ಬೇರೆ ಕೆಲಸ ಇರಲಿಲ್ಲ. ಕಾಲೇಜು ಕೂಡ ಉತ್ತಮ ವಾತಾವರಣದಲ್ಲಿ ಇತ್ತು. ಅಂದಿನ ಪಾಠ ಅಂದೇ ಓದು ಮುಗಿಸುತ್ತಿದ್ದೆ. ಹೀಗಾಗಿ ಪರೀಕ್ಷೆ ಸುಲಭವಾಗಿ ಎದುರಿಸಲು ಸಾಧ್ಯವಾಯಿತು' ಎಂದು ಹೇಳಿದರು.

ಎಲೆಕ್ಟ್ರಿಕ್ ಬೈಕ್ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಎಲೆಕ್ಟ್ರಿಕ್ ಬೈಕ್ ಹೆಸರಿನಲ್ಲಿ ತಾಲ್ಲೂಕಿನ ವರದಹಳ್ಳಿ ಕಿರಣ್ ಕುಮಾರ್ ಎಂಬುವವರಿಗೆ ಆನ್‌ಲೈನ್ ವಂಚಕರು ₹ 51,947 ವಂಚಿಸಿದ್ದಾರೆ. ಈ ಬಗ್ಗೆ ಅವರು ನಗರದ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮಂಚೇನಹಳ್ಳಿಯಲ್ಲಿ ಎಲೆಕ್ಟ್ರಿಕಲ್ ಅಂಗಡಿ ಇಟ್ಟುಕೊಂಡಿದ್ದೇನೆ. ನನಗೆ ಕರೆ ಮಾಡಿದ ವ್ಯಕ್ತಿಯೊಬ್ಬರು ನಿಮಗೆ ಎಲೆಕ್ಟ್ರಿಕ್ ಬೈಕ್ ಇಷ್ಟ ಆದರೆ ನೀವು ಪ್ರೀ ಬುಕಿಂಗ್ ಮಾಡಿಸಿಕೊಳ್ಳಲು ₹ 1947 ಕಟ್ಟಬೇಕೆಂದು ತಿಳಿಸಿದರು. ನಾನು ಅವರಿಗೆ ಹಣ ಪಾವತಿಸಿದೆ. ನಂತರ ಕರೆ ಮಾಡಿ ಅರ್ಧ ಹಣ ₹ 50,000 ಪಾವತಿಸಿ. ಉಳಿದ ಹಣವನ್ನು ಗಾಡಿ ನೀಡಿದ ನಂತರ ಪಾವತಿಸಿ ಎಂದರು. ಅವರು ತಿಳಿಸಿದ ಖಾತೆಗೆ ಹಣ ಜಮೆ ಮಾಡಿದೆ. ನಂತರ ಮತ್ತೆ ಕರೆ ಮಾಡಿ ಸಬ್ಸಿಡಿ ಹಣ ₹ 29,125 ಕಟ್ಟಬೇಕು ಎಂದರು. ನನಗೆ ಅನುಮಾನ ಬಂದಿತು. ಹಣ ಪಾವತಿಸಲಿಲ್ಲ. ಎಲೆಕ್ಟ್ರಿಕ್ ಬೈಕ್ ಮಾರಾಟ ಮಾಡುವುದಾಗಿ ಹೇಳಿ ನಂಬಿಸಿ ನನ್ನಿಂದ ಒಟ್ಟು ₹ 51,947 ಪಡೆದು ವಂಚಿಸಿರುವವರ ವಿರುದ್ಧ ಕಾನೂನು ರೀತಿ ಕ್ರಮಕೈಗೊಳ್ಳಬೇಕು ಎಂದು ದೂರಿನಲ್ಲಿ ವಿವರಿಸಿದ್ದಾರೆ.

₹ 1.6 ಲಕ್ಷ ವಂಚನೆ

ಚಿಕ್ಕಬಳ್ಳಾಪುರ: ಹೂಡಿಕೆ ಮಾಡಿದರೆ ಹೆಚ್ಚು ಲಾಭ ನೀಡುವುದಾಗಿ ನಂಬಿಸಿ ಚಿಕ್ಕಬಳ್ಳಾಪುರ ತಾಲ್ಲೂಕಿನ ಚದಲಪುರ ಗ್ರಾಮದ ಉಪನ್ಯಾಸಕಿಯೊಬ್ಬರಿಗೆ ಆನ್‌ಲೈನ್ ವಂಚಕರು ₹ 1.6 ಲಕ್ಷ ವಂಚಿಸಿದ್ದಾರೆ. ಈ ಬಗ್ಗೆ ಅವರು ನಗರ ಸಿಇಎನ್ ಠಾಣೆಗೆ ದೂರು ನೀಡಿದ್ದಾರೆ.

Coinonline ಎಂಬ ವೆಬ್‌ಸೈಟ್‌ನಲ್ಲಿ ಹೂಡಿಕೆ ಮಾಡಿದರೆ ಹಣ ದ್ವಿಗುಣ ಮಾಡುವುದಾಗಿ ಸಂದೇಶ ಬಂದಿತ್ತು. ಇದನ್ನು ನಂಬಿ ಅವರು ಹಂತ ಹಂತವಾಗಿ ₹ 1,06,950 ಪಾವತಿಸಿದ್ದಾರೆ. ಆದರೆ ಅವರಿಗೆ ಅಸಲು ಮತ್ತು ಲಾಭವನ್ನು ನೀಡಿಲ್ಲ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮಟ್ಕಾ: ಬಂಧನ

ಚಿಕ್ಕಬಳ್ಳಾಪುರ: ಗೌರಿಬಿದನೂರು ನಗರದ ಬೈಪಾಸ್‌ನ ನಾಗಪ್ಪ ಬ್ಲಾಕ್ ರಸ್ತೆಯಲ್ಲಿ ಮಟ್ಕಾ ಬರೆಯುತ್ತಿದ್ದ ಆರೋಪದ ಮೇಲೆ ಗೌರಿಬಿದನೂರು ತಾಲ್ಲೂಕಿನ ರಾಯರೇಕಲಹಳ್ಳಿ ಗ್ರಾಮದ ಹರೀಶ ಕುಮಾರ್ (45) ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಟ್ಕಾ ಜೂಜಾಡುತ್ತಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ದೊರೆತಿತ್ತು. ಆರೋಪಿ ಬನ್ನಿ ಮಟ್ಕಾ ಅಂಕಿಗಳನ್ನು ಬರೆಸಿ ₹ 1ಕ್ಕೆ ₹ 70 ಕೊಡುತ್ತೇನೆ ಎಂದು ಕೂಗುತ್ತ ಸಾರ್ವಜನಿಕರಿಂದ ಹಣ ಪಡೆದು ಮಟ್ಕಾ ಚೀಟಿಗಳನ್ನು ಬರೆದುಕೊಡುತ್ತಿದ್ದ. ಆರೋಪಿಯಿಂದ ಪೊಲೀಸರು ₹ 1,600 ಮತ್ತು ಒಂದು ಬಾಲ್ ಪಾಯಿಂಟ್ ಪೆನ್ನು ಮಟ್ಕಾ ಅಂಕಿಗಳನ್ನು ಬರೆದಿರುವ ಚೀಟಿ ವಶಕ್ಕೆ ಪಡೆದಿದ್ದಾರೆ.

ನವವರ್ಣ

ನಮ್ಮ ಪರಂಪರೆಯಲ್ಲಿ ಶಕ್ತಿಯನ್ನು ಹೆಣ್ಣಿನ ರೂಪದಲ್ಲಿಯೇ ಕಂಡಿರುವುದು ವಿಶೇಷ. ನವರಾತ್ರಿಯ ಒಂಬತ್ತು ದಿನಗಳಲ್ಲೂ ಈ ಶಕ್ತಿಯ ಬೇರೆ ಬೇರೆ ರೂಪಗಳನ್ನು ಪೂಜಿಸಲಾಗುತ್ತದೆ. ಮೊದಲನೆಯ ದಿನ ಶೈಲಪುತ್ರಿಯ ಸ್ವರೂಪದಲ್ಲಿ ದೇವಿ ಕಾಣಿಸಿಕೊಳ್ಳುತ್ತಾಳೆ. ಹಳದಿಯ ಬಣ್ಣ ಅವಳಿಗೆ ಪ್ರಿಯವಾದ ಬಣ್ಣ; ಅದು ಪಾವಿತ್ರ್ಯಕ್ಕೆ ಸಂಕೇತ.
ನವರಾತ್ರಿಯಲ್ಲಿ ದಿನಕ್ಕೊಂದು ಬಣ್ಣದ ಸೀರೆಯನ್ನುಟ್ಟು ದೇವಿಯ ಆರಾಧನೆಯಲ್ಲಿ ಮಹಿಳೆಯರು ಭಾಗವಹಿಸುವುದು ರೂಢಿ. ಹೀಗೆ ಮೊದಲ ದಿನದ ಸಂಭ್ರಮವನ್ನು ಹಂಚಿಕೊಂಡಿರುವವರ ಆಯ್ದ ಕೆಲವು ಚಿತ್ರಗಳು ಇಲ್ಲಿವೆ.

ಬಿಳಿಯ ಬಣ್ಣದ ಧಿರಿಸನ್ನು ಧರಿಸಿ ತೆಗೆಸಿಕೊಂಡ ಚಿತ್ರಗಳನ್ನು ಸೋಮವಾರ ಸಂಜೆ 4 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಅರ್ಚನಾ ಮತ್ತು ಗೆಳತಿಯರು, ಉತ್ತರಹಳ್ಳಿ, ಬೆಂಗಳೂರು


ವರ್ಷಾ ಮತ್ತು ತಂಡ, ಬಿಜಿಎಸ್ ವರ್ಲ್ಡ್ ಶಾಲೆ, ರಾಮನಗರ



ರೂಪಾ ಶಿವಮಲ್ಲಪ್ಪ, ಬೆಂಗಳೂರು


ಸೃಜನಾ ರಾಜೇಶ್ ಮತ್ತು ಗೆಳತಿಯರು, ರಾಜಾಜಿನಗರ, ಬೆಂಗಳೂರು ನಗರ


ಹೇಮಾ ತನ್ನ ಗೆಳತಿಯರೊಂದಿಗೆ, ಐಟಿಐ ಲೇಔಟ್, ಮಲ್ಲತ್ತಹಳ್ಳಿ


ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು, ಸರ್ಕಾರಿ ಪ್ರೌಢಶಾಲೆ, ಸೋಮನಹಳ್ಳಿ, ಬೆಂಗಳೂರು


ಯಶೋಧ ಗೋವಿಂದರಾಜು, ವಿದ್ಯಾರಣ್ಯಪುರ, ಬೆಂಗಳೂರು


ಭುವನಾ ನಿತಿನ್, ಗೃಹಲಕ್ಷ್ಮಿ ಲೇಔಟ್


ಪ್ರಮೀಳಾ ಮತ್ತು ಸಂಗಡಿಗರು, ಬೆಂಗಳೂರು


ಸುಚಿತ್ರಾ ಮತ್ತು ಗೆಳತಿಯರು, ಕೆಂಗೇರಿ, ಬೆಂಗಳೂರು


ಅನಿತಾ ಮತ್ತು ಗೆಳತಿಯರು, ಚೌಡೇಶ್ವರಿ ಮಹಿಳಾ ಸಂಘ ಮತ್ತಿಕೆರೆ, ಬೆಂಗಳೂರು


ಸುನೀತಾ ಮತ್ತು ಗೀತಾ ಸಂಗಡಿಗರು, ಬೆಂಗಳೂರು


ಶ್ರೀಮಾತಾ ಮಹಿಳೆಯರ ಗುಂಪು, ದೊಡ್ಡಬಿದರಕಲ್ಲು, ಬೆಂಗಳೂರು


ಸುದರ್ಶನಾ ಮತ್ತು ಗೆಳತಿಯರು, ಕೋಣನಕುಂಟೆ


ಐಶ್ವರ್ಯಾ ರಾಮಚಂದ್ರ, ಚನ್ನಪಟ್ಟಣ

ಸೋಮವಾರ • ಅಕ್ಟೋಬರ್ 16, 2023 ಪ್ರಜಾವಾಣಿ





ಮೈಸೂರಿನ ಅರಮನೆ ವೇದಿಕೆಯಲ್ಲಿ ಭಾನುವಾರ ನಡೆದ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಸಮಾರಂಭದಲ್ಲಿ ಕಲಾವಿದೆ ಪದ್ಮಾ ಮೂರ್ತಿ ಅವರಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು (ಎಡ ಚಿತ್ರ). ಚಲನಚಿತ್ರ ನಟಿ ಭಾವನಾ ರಾಮಣ್ಣ ಹಾಗೂ ತಂಡದವರು ನೃತ್ಯರೂಪಕ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರಗಳು

ಮೈಸೂರು ದಸರಾ: ಅರಮನೆ ವೇದಿಕೆಯಲ್ಲಿ ಪದ್ಮಾ ಮೂರ್ತಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ

ದೀಪಾಲಂಕಾರದ ಬೆಳಕಲ್ಲಿ ಸಾಂಸ್ಕೃತಿಕ ರಂಗು

• ಎಂ.ಮಹೇಶ

ಮುಖ್ಯಾಂಶಗಳು
- ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ
- ನೂರಾರು ಮಂದಿ ಭಾಗಿ
- ವಿವಿಧ ವೇದಿಕೆಗಳಲ್ಲಿ ಆಯೋಜನೆ

ಮೈಸೂರು: ಇಲ್ಲಿನ ಅಂಬಾವಿಲಾಸ ಅರಮನೆಯ ವಿದ್ಯುತ್ ದೀಪಾಲಂಕಾರ ಬೆಳಗುತ್ತಿದ್ದಂತೆಯೇ, ದಸರಾ ಅಂಗವಾಗಿ ವಿವಿಧ 12 ವೇದಿಕೆಗಳಲ್ಲಿ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಭಾನುವಾರ ಸಂಜೆ ವರ್ಣರಂಜಿತ ಚಾಲನೆ ದೊರೆಯಿತು.

ಅರಮನೆ, ಕಲಾಮಂದಿರ, ಜಗನ್ಮೋಹನ ಅರಮನೆ ಸಭಾಂಗಣ, ನಾದಬ್ರಹ್ಮ ಸಂಗೀತಸಭಾ, ಗಾನಭಾರತಿ, ಪುರಭವನ, ಕಿರುರಂಗಮಂದಿರ, ಚಿಕ್ಕಗಡಿಯಾರ, ನಟನ ರಂಗಮಂದಿರ, ರಮಾಗೋವಿಂದ ರಂಗಮಂದಿರ ಹಾಗೂ ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದ ಆವರಣದ ವೇದಿಕೆಗಳಲ್ಲಿ ಸಾಂಸ್ಕೃತಿಕ ಸೌರಭ ಉದ್ಘಾಟನೆಗೊಂಡಿತು.

ಅರಮನೆಯ ದೀಪಗಳ ಬೆಳಕಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಕಂಗೊಳಿಸಿದವು.

ಕಲಾವಿದೆ, 91 ವರ್ಷ ವಯಸ್ಸಿನ ಪದ್ಮಾ ಮೂರ್ತಿ ಅವರಿಗೆ ಪ್ರಸಕ್ತ ಸಾಲಿನ 'ರಾಜ್ಯ ಸಂಗೀತ ವಿದ್ವಾನ್' ಪ್ರಶಸ್ತಿ ಪ್ರದಾನ ಮಾಡಲಾಯಿತು. ₹ 5 ಲಕ್ಷ ನಗದು, ಸರಸ್ವತಿ ವಿಗ್ರಹದ ಸ್ಮರಣಿಕೆಯನ್ನು ನೀಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗೌರವಿಸಿದರು.

'ನಾನು ಮೈಸೂರಿನವಳು. ವಿದ್ಯಾಭ್ಯಾಸ ಪಡೆದದ್ದು, ಸಂಗೀತ ಕಲಿತದ್ದೆಲ್ಲವೂ ಇಲ್ಲೇ. ಕರ್ನಾಟಕ ಸಂಗೀತಕ್ಕೆ ನಾನು ಸಲ್ಲಿಸಿರುವ ಅಳಿಲು ಸೇವೆಯನ್ನು ಗುರುತಿಸಿ ಸರ್ಕಾರವು ಅತ್ಯಂತ ದೊಡ್ಡ ಪ್ರಶಸ್ತಿ ನೀಡಿದ್ದರಿಂದ ಬಹಳ ಖುಷಿಯಾಗಿದೆ. ಇದು ನನ್ನ ಜೀವನದ ಪರ್ವ ದಿನ. ಮನಸ್ಸು ತುಂಬಿ ಬಂದಿದ್ದು' ಎಂದು ಪದ್ಮಾ ಮೂರ್ತಿ ಸಂತಸ ಹಂಚಿಕೊಂಡರು.

ಮುಖ್ಯಮಂತ್ರಿ ಸಿದ್ದರಾಮಯ್ಯ, 'ಮೈಸೂರು ಮಹಾರಾಜರು ಕಲೆ, ಸಂಸ್ಕೃತಿ, ಸಂಗೀತ, ಸಾಹಿತ್ಯ ಹಾಗೂ ನೃತ್ಯಕ್ಕೆ ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದರು. ಅದೇ ರೀತಿ ನಮ್ಮ ಸರ್ಕಾರವೂ ಮಾಡುತ್ತಿದೆ. ಕಲೆ–ಸಂಸ್ಕೃತಿಗೆ ಎಲ್ಲ ರೀತಿಯ ಬೆಂಬಲ ಹಾಗೂ ಪ್ರೋತ್ಸಾಹವನ್ನು ನೀಡಲಾಗುತ್ತಿದೆ' ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ್ ತಂಗಡಗಿ ಮಾತನಾಡಿದರು.

ವಿದ್ವಾನ್ ಎಸ್.ಪುಟ್ಟರಾಜು ಮತ್ತು ತಂಡ ಹಾಗೂ ಯದುಕುಮಾರ್ ಮತ್ತು ತಂಡದವರು ನಾದಸ್ವರ ಕಾರ್ಯಕ್ರಮ ಪ್ರಸ್ತುತಪಸಿದರು. ರಾಜಪ್ಪ ಹಾಗೂ ಮಲ್ಲೇಶ್ ತಂಡದವರು ವೀರಭದ್ರ ಕುಣಿತ ಪ್ರದರ್ಶಿಸಿ ನೆರೆದಿದ್ದವರ ಗಮನ ಸೆಳೆದರು.

ವಿದುಷಿ ಬಿ.ರಶ್ಮಿ ಮತ್ತು ತಂಡದವರು ನಾಡಗೀತೆ, ಆಸ್ಥಾನ ಗೀತೆ ಹಾಡಿದರು. ಬಳಿಕ ಚಲನಚಿತ್ರ ನಟಿ ಭಾವನಾ ರಾಮಣ್ಣ ಹಾಗೂ ತಂಡ ಚಾಮುಂಡೇಶ್ವರಿ, ಮರ್ದಿನಿ ಹಾಗೂ ಸಿಂಹವಾಹಿನಿ ನೃತ್ಯರೂಪಗಳನ್ನು ಪ್ರಸ್ತುತಪಡಿಸಿ ನೆರೆದಿದ್ದವ ರಲ್ಲಿ ದೈವೀಕ ಭಾವನೆ ತುಂಬಿದರು. ಮುಖ್ಯಮಂತ್ರಿ, ಸಚಿವರು ಹಾಗೂ ಗಣ್ಯರು ಕಾರ್ಯಕ್ರಮ ವೀಕ್ಷಿಸಿದರು.

ಸುದ್ದಿ 2 ನಿಮಿಷ

ಎನ್‌ಸಿಪಿ ನಾಯಕನ ₹ 315 ಕೋಟಿ ಮೌಲ್ಯದ ಆಸ್ತಿ ಇ.ಡಿ ವಶಕ್ಕೆ



ನವದೆಹಲಿ(ಪಿಟಿಐ): ಮಹಾರಾಷ್ಟ್ರದ ಎನ್‌ಸಿಪಿ ನಾಯಕ ಈಶ್ವರಲಾಲ್ ಶಂಕರ್‌ಲಾಲ್ ಜೈನ್ ಲಾಲ್‌ವಾನಿ(77) ಅವರಿಗೆ ಸೇರಿದ ಅಂದಾಜು ₹315 ಕೋಟಿ ಮೌಲ್ಯದ ಸ್ವತ್ತುಗಳನ್ನು ಜಾರಿ ನಿರ್ದೇಶನಾಲಯವು ಭಾನುವಾರ ವಶಕ್ಕೆ ಪಡೆದಿದೆ.

ರಾಜ್ಯಸಭೆಯ ಮಾಜಿ ಸದಸ್ಯರಾದ ಈಶ್ವರಲಾಲ್ ಅವರು 'ರಾಜ್‌ಮಾಲ್ ಲಕ್‌ಚಂದ್ ಜ್ಯುವೆಲರ್ಸ್ ಪ್ರೈವೇಟ್ ಲಿಮಿಟೆಡ್', 'ಆರ್.ಎಲ್ ಗೋಲ್ಡ್ ಪ್ರೈ.ಲಿ', 'ಮನ್‌ರಾಜ್ ಜ್ಯುವೆಲರ್ಸ್'ಗಳ ಪ್ರವರ್ತಕರು. ಈ ಚಿನ್ನಾಭರಣ ಸಂಸ್ಥೆಗಳ ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಈಶ್ವರಲಾಲ್ ಅವರ 70 ಸ್ಥಿರಾಸ್ತಿಗಳನ್ನು ವಶಕ್ಕೆ ಪಡೆಯಲಾಗಿದೆ.

ಈಶ್ವರ್‌ಲಾಲ್ ಮತ್ತು ಇತರರು ಬ್ಯಾಂಕ್ ಸಾಲ ಪಡೆಯಲು ತಪ್ಪು ಲೆಕ್ಕ ತೋರಿಸಿದ್ದರು ಎಂದು ಆರೋಪಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ ಕಳೆದ ಆಗಸ್ಟ್‌ನಲ್ಲಿ ದಾಳಿ ನಡೆಸಿತ್ತು.

ರಣ್ ಉತ್ಸವ: ಬಚ್ಚನ್‌ಗೆ ಮೋದಿ ಸಲಹೆ

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ ನಡೆಯಲಿರುವ ರಣ್ ಉತ್ಸವ ಮತ್ತು ಏಕತಾ ಪ್ರತಿಮೆಗೆ ಭೇಟಿ ನೀಡುವಂತೆ ಬಾಲಿವುಡ್ ನಟ ಅಮಿತಾಬ್ ಬಚ್ಚನ್ ಅವರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾನುವಾರ ಸಲಹೆ ನೀಡಿದ್ದಾರೆ.

ಉತ್ತರಾಖಂಡದ ಆದಿ ಕೈಲಾಸ ಮತ್ತು ಪಾರ್ವತಿ ಕುಂಡಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಚಿತ್ರವನ್ನು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಅಮಿತಾಬ್ ಬಚ್ಚನ್, ತಾವು ಈ ಸ್ಥಳಗಳಿಗೆ ಭೇಟಿ ನೀಡಲು ಆಗದೇ ಇರುವುದಕ್ಕೆ ವಿಷಾದ ವ್ಯಕ್ತಪಡಿಸಿದ್ದರು. ಬಚ್ಚನ್ ಅವರ ಈ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಮೋದಿ, ಗುಜರಾತ್‌ನ ಕಛ್‌ಗೆ ಭೇಟಿ ನೀಡುವಂತೆ ಹೇಳಿದ್ದಾರೆ.

'ಮುಂದಿನ ವಾರ ಕಛ್‌ನಲ್ಲಿ ರಣ್ ಉತ್ಸವ ನಡೆಯಲಿದೆ. ನೀವು ಅಲ್ಲಿಗೆ ಭೇಟಿ ನೀಡಬೇಕು. ಜತೆಗೆ ಏಕತಾ ಪ್ರತಿಮೆಗೆ ಭೇಟಿ ನೀಡುವುದೂ ಬಾಕಿ ಇದೆ' ಎಂದು ಹೇಳಿದ್ದಾರೆ.

'ನರ ಇದ್ರೆ ಒಕ್ಕಲಿಗರ ಬಗ್ಗೆ ಮಾತಾಡು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರೊ.ಕೆ.ಎಸ್.ಭಗವಾನ್‌ಗೆ ಶಕ್ತಿ, ತಾಕತ್ತು ಇದ್ರೆ ಒಕ್ಕಲಿಗರ ಬಗ್ಗೆ ಮಾತನಾಡಲಿ. ನರ ಇದ್ರೆ ಮಾತಾಡು. ನಂತ್ರ ಗೊತ್ತಾಗತ್ತೇ ಎಂಟರ್‌ಟೈನ್‌ಮೆಂಟು' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ವಾಗ್ದಾಳಿ ನಡೆಸಿದ್ದಾರೆ.

'ಬುದ್ಧಿ ಏರುಪೇರಾಗಿರುವ ಭಗವಾನ್ ಎಂಬ ವ್ಯಕ್ತಿ ಒಕ್ಕಲುತನದ ಬಗ್ಗೆ ಕುವೆಂಪು ಹೆಸರನ್ನು ಮುಂದಿಟ್ಟುಕೊಂಡು ಮಾತನಾಡುವ ಅಗತ್ಯವಿಲ್ಲ. ನಿನಗೆ ಧೈರ್ಯವಿದ್ದರೆ ನೇರವಾಗಿ ಮಾತಾಡಪ್ಪ, ನರ ಇದ್ರೆ ಮಾತನಾಡು' ಎಂದು ಏಕವಚನದಲ್ಲಿ ಕಿಡಿಕಾರಿದ್ದಾರೆ.

ಸೇಂದಿ ಸಾಗಾಟ: ಇಬ್ಬರ ಬಂಧನ

ಮಧುಗಿರಿ: ಮಿಡಿಗೇಶಿ ಹೋಬಳಿ ಲಕ್ಲಿಹಟ್ಟಿ ಗ್ರಾಮದ ಸಮೀಪ ಸೇಂದಿ ಸಾಗಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಅಬಕಾರಿ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ನೆಲಮಂಗಲ ತಾಲ್ಲೂಕಿನ ನರಸೀಪುರದ ನಿವಾಸಿಗಳಾದ ಆನಂದ್ ಕುಮಾರ್ (28) ಹಾಗೂ ಸುರೇಶ್ (29) ಬಂಧಿತರು.

ಸೀಮಾಂಧ್ರ ಪ್ರದೇಶದ ಮಡಕಶಿರಾ ತಾಲ್ಲೂಕಿನ ಯರ್ ಬೊಮ್ಮನಹಳ್ಳಿ ಗ್ರಾಮದಿಂದ 46 ಲೀಟರ್ ಸೇಂದಿ ತೆಗೆದುಕೊಂಡು ಕಾರಿನಲ್ಲಿ ನರಸೀಪುರ ಗ್ರಾಮಕ್ಕೆ ತೆರಳುತ್ತಿದ್ದಾಗ ಲಕ್ಲಿಹಟ್ಟಿ ಸಮೀಪ ಅಬಕಾರಿ ಅಧಿಕಾರಿಗಳು ಪರಿಶೀಲಿಸಿದ್ದಾರೆ. ಕಾರು ಮತ್ತು ಸೇಂದಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

ಚಹಾ ಮಂಡಳಿಗೆ ಅಮರ್‌ದೀಪ್ ಸಿಂಗ್ ಭಾಟಿಯಾ ನೂತನ ಅಧ್ಯಕ್ಷ

ಕೋಲ್ಕತ್ತ (ಪಿಟಿಐ): ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಅಮರ್‌ದೀಪ್ ಸಿಂಗ್ ಭಾಟಿಯಾ ಅವರನ್ನು ಚಹಾ ಮಂಡಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ.

'ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿಯಾಗಿರುವ ಭಾಟಿಯಾ ಅ.12ರಿಂದ ಆರು ತಿಂಗಳ ಅವಧಿಗೆ ಅಧ್ಯಕ್ಷರಾಗಿರಲಿದ್ದಾರೆ' ಎಂದು ಮಂಡಳಿ ಪ್ರಕಟಣೆ ತಿಳಿಸಿದೆ.



ನವರಾತ್ರಿ... ನವರಾತ್ರಿ ಹಬ್ಬದ ಅಂಗವಾಗಿ ರಂಗ ಸಂಸ್ಥಾನ ಭಾನುವಾರ ಬೆಂಗಳೂರಿನ ಸಂಸ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ 'ಶಿರಡಿ ಸಾಯಿ ಗಾನ ಮಹೋತ್ಸವ'ದಲ್ಲಿ ಬಂಡ್ಲಹಳ್ಳಿ ವಿಜಯ ಕುಮಾರ್ ಅವರ ನೇತೃತ್ವದಲ್ಲಿ 1,116 ಗಾಯಕರಿಂದ ಸಾಮೂಹಿಕ ಗಾಯನ ನಡೆಯಿತು

ಚಪ್ಪಲಿ ಹಾರ ಹಾಕಿ ಮೆರವಣಿಗೆ: 13 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಘಟಪ್ರಭಾ(ಬೆಳಗಾವಿ ಜಿಲ್ಲೆ): ಹನಿಟ್ರ್ಯಾಪ್ ಆರೋಪದಡಿ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ಮಹಿಳೆಯ ಕೊರಳಿಗೆ ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ 13 ಮಂದಿ ಆರೋಪಿಗಳನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಅರ್ಜುನ ಗಂಡವ್ವಗೋಳ, ಲಕ್ಷ್ಮಿ ಮಸ್ಕಿ, ಶೋಭಾ ಮಾಳಗಿ, ಮಾರ್ಕಂಡೇಶ್ವರ ಮಹಿಮಗೋಳ, ರಾಘವೇಂದ್ರ ಚಿಂಚಲಿ, ಸರಸ್ವತಿ ಕೋಳಿ, ಸಾವಿತ್ರಿ ಪೂಜೇರಿ, ಕಮಲವ್ವ ಭಜಂತ್ರಿ, ಮಾರುತಿ ದೊಡಮನಿ, ಉದಯ ಗಂಡವ್ವಗೋಳ, ಕೃಷ್ಣಾ ಗಂಡವ್ವಗೋಳ, ಸುಧೀರ ಜೋಡಟ್ಟಿ, ಶಾಲವ್ವ ದೊಡಮನಿ ಬಂಧಿತರು.

'ಸಂತ್ರಸ್ತ ಮಹಿಳೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ನೀಡಿದ ದೂರು ಆಧರಿಸಿ 13 ಮಂದಿ ಬಂಧಿಸಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಎಸ್ಪಿ ಡಾ.ಭೀಮಾಶಂಕರ ಗುಳೇದ ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ ಇಲ್ಲಿನ ಮೃತ್ಯುಂಜಯ ಸರ್ಕಲ್‌ನಲ್ಲಿ ಕೆಲವರು ಮಹಿಳೆ ಮೇಲೆ ಹಲ್ಲೆ ನಡೆಸಿದ್ದರು. ಚಪ್ಪಲಿ ಹಾರ ಮಾಡಿ, ಕೊರಳಿಗೆ ಹಾಕಿ ರಸ್ತೆಯಲ್ಲಿ ಅವರನ್ನು ನಡೆಸಿಕೊಂಡು ಹೋದರು. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಶನಿವಾರ ಹರಿದಾಡಿತ್ತು. ಈ ಪ್ರಕರಣದಡಿ 20ಕ್ಕೂ ಅಧಿಕ ಮಂದಿ ವಿರುದ್ಧ ದೂರು ದಾಖಲಾಗಿದೆ.

6 ವರ್ಷದ ಬಾಲಕಿ ಮೇಲೆ ಅತ್ಯಾಚಾರ: ಆರೋಪಿ ಸೆರೆ

ಬಾರಬಂಕಿ (ಪಿಟಿಐ): ಉತ್ತರ ಪ್ರದೇಶದ ಬಾರಬಂಕಿ ಜಿಲ್ಲೆಯ ಗ್ರಾಮವೊಂದರಲ್ಲಿ ಆರು ವರ್ಷದ ಬಾಲಕಿ ಮೇಲೆ ವ್ಯಕ್ತಿಯೊಬ್ಬ ಅತ್ಯಾಚಾರವೆಸಗಿದ್ದು, ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಆರೋಪಿ ಸತ್ಯವಾನ್ ಅಲಿಯಾನ್ ಗೌತಮ್ (34) ಆಮಿಷ ತೋರಿ ಬಾಲಕಿಯನ್ನು ಶನಿವಾರ ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ಈ ಕೃತ್ಯವೆಸಗಿದ್ದಾನೆ. ಆ ಬಳಿಕ ಆರೋಪಿ ಪರಾರಿಯಾಗಿದ್ದು, ಮನೆಗೆ ಬಂದ ಬಾಲಕಿ ಈ ವಿಚಾರವನ್ನು ಕುಟುಂಬ ಸದಸ್ಯರ ಗಮನಕ್ಕೆ ತಂದಿದ್ದಳು. ಅವರು ಗ್ರಾಮದ ಮುಖ್ಯಸ್ಥರಿಗೆ ತಿಳಿಸಿದ್ದು, ಪ್ರಕರಣ ದಾಖಲಿಸಿದ್ದಾರೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅಶುತೋಷ್ ಮಿಶ್ರಾ ಹೇಳಿದ್ದಾರೆ.

ಬಾಲಕಿಯನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆಕೆಯ ಸ್ಥಿತಿ ಸ್ಥಿರವಾಗಿದೆ ಎಂದು ತಿಳಿಸಿದ್ದಾರೆ.

ಅತ್ಯಾಚಾರ: ಯುವಕನ ಬಂಧನ

ರೇವಾ (ಪಿಟಿಐ): ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ಶಾಲೆಯಿಂದ ಮನೆಗೆ ಹೊರಟಿದ್ದ 12 ವರ್ಷದ ಬಾಲಕಿಯನ್ನು ವ್ಯಕ್ತಿಯೊಬ್ಬ ಅಪಹರಿಸಿ ಅತ್ಯಾಚಾರ ಎಸಗಿದ್ದಾನೆ. ಈ ಪ್ರಕರಣದ ಆರೋಪಿ ಅಂಜನಿ ಕೇವತ್ (23) ಎಂಬಾತನನ್ನು ಶನಿವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶುಕ್ರವಾರ ಶಾಲೆಯಿಂದ ಮನೆಗೆ ಹೊರಟಿದ್ದ 5ನೇ ತರಗತಿ ಬಾಲಕಿಗೆ ಆರೋಪಿಯು ತನ್ನ ಬೈಕ್‌ನಲ್ಲಿ ಊರಿಗೆ ಬಿಡುವುದಾಗಿ ಆಮಿಷವೊಡ್ಡಿದ್ದ. ಆದರೆ, ಬಾಲಕಿಯನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ಈ ಕೃತ್ಯವೆಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಅಹವಾಲುಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು: ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



ಕನಕಪುರ ರಸ್ತೆ ಎಟುಬಿಯ ಪಾದಚಾರಿ ಮಾರ್ಗದಲ್ಲಿ ಬೆಳೆದಿರುವ ಗಿಡ–ಗಂಟಿಗಳು

'ಪಾದಚಾರಿ ಮಾರ್ಗದಲ್ಲಿರುವ ಗಿಡ–ಗಂಟಿಗಳು'

ಕನಕಪುರ ರಸ್ತೆಯ ಎಟುಬಿ ಜಂಕ್ಷನ್‌ನಿಂದ ಟಿಪ್ಪು ವೃತ್ತದವರೆಗೆ ಇರುವ ಅಂಜನಾಪುರ ಡಬಲ್ ರಸ್ತೆಯ ಎರಡು ಭಾಗದ ಪಾದಚಾರಿ ಮಾರ್ಗದಲ್ಲಿ ಗಿಡ-ಗಂಟಿಗಳು ಬೆಳೆದು ನಿಂತಿವೆ. ಜತೆಗೆ ಇಲ್ಲಿಯೇ ರಾಶಿ ರಾಶಿ ಕಸ ತಂದು ಹಾಕಲಾಗುತ್ತದೆ. ಇಲ್ಲಿರುವ ಮೋರಿಗೆ ಚಪ್ಪಡಿ ಕಲ್ಲು ಹಾಕದ ಕಾರಣ ಮಳೆ ನೀರು ರಸ್ತೆಯಲ್ಲಿಯೇ ಹರಿಯುತ್ತಿದೆ. ಇದರಿಂದ, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಮುಖ್ಯರಸ್ತೆಯಲ್ಲಿ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಬಿಬಿಎಂಪಿ ಈ ಪಾದಚಾರಿ ಮಾರ್ಗದಲ್ಲಿ ಬೆಳೆದಿರುವ ಗಿಡ-ಗಂಟಿಗಳನ್ನು ತೆರವುಗೊಳಿಸಿ, ಇದನ್ನು ದುರಸ್ತಿಗೊಳಿಸಬೇಕು.

ಶ್ರೀನಿವಾಸ ಭಟ್, ಎಂ.ಕೆ.ಎಸ್ ಬಡಾವಣೆ ನಿವಾಸಿ

'ಪಾದಚಾರಿ ಮಾರ್ಗದಲ್ಲಿ ವಿದ್ಯುತ್ ಪರಿವರ್ತಕ'



ಪಾದಚಾರಿ ಮಾರ್ಗದಲ್ಲಿರುವ ವಿದ್ಯುತ್ ಪರಿವರ್ತಕ

ರಾಜರಾಜೇಶ್ವರಿ ನಗರದ ಹೊರವರ್ತುಲ ರಸ್ತೆಯ ಬೆಂಗಳೂರು ವಿಶ್ವವಿದ್ಯಾಲಯದ ಪಾದಚಾರಿ ಮಾರ್ಗಗಳಲ್ಲಿ ವಿದ್ಯುತ್ ಪರಿವರ್ತಕ ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಇವುಗಳಿಗೆ ಯಾವುದೇ ರೀತಿಯ ತಂತಿ ಬೇಲಿ ಅಳವಡಿಸದೆ ಅಸಂಖ್ಯಾತ ಜನ ಓಡಾಡುವ ಪಾದಚಾರಿ ಮಾರ್ಗದಲ್ಲಿ ಅಳವಡಿಸಲಾಗಿದೆ. ಮಳೆ ಬಂದಾಗ ಗ್ರೌಂಡಿಂಗ್ ಆಗುವ ಸಾಧ್ಯತೆ ಹೆಚ್ಚಿದೆ. ಆಕಸ್ಮಿಕವಾಗಿ ಯಾರಾದರೂ ಇದನ್ನು ಸ್ಪರ್ಶಿಸಿದರೆ ವಿದ್ಯುತ್ ಅವಘಡ ಸಂಭವಿಸುವ ಸಾಧ್ಯತೆ ಇದೆ. ತಕ್ಷಣ ಬೆಸ್ಕಾಂ ಅಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

ಎಚ್. ತುಕಾರಾಂ, ಬಾಲಗಂಗಾಧರ ನಗರದ ನಿವಾಸಿ



ಮೀನಾಜ್‌ನಗರದ ಮುಖ್ಯರಸ್ತೆಯಲ್ಲಿ ಹಾಕಿರುವ ಕಸ

'ರಸ್ತೆಯಲ್ಲಿರುವ ಕಸ ತೆರವುಗೊಳಿಸಿ'

ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಕುಮಾರಸ್ವಾಮಿ ಬಡಾವಣೆಯ ಮೀನಾಜ್‌ನಗರದ ಮುಖ್ಯರಸ್ತೆಯಲ್ಲಿ ರಾಶಿಗಟ್ಟಲೇ ಕಸ ಹಾಕಲಾಗುತ್ತಿದೆ. ಇದರ ಪಕ್ಕದಲ್ಲಿರುವ ಶಾಲೆಗೆ ಮತ್ತು ಆಸ್ಪತ್ರೆ ರೋಗಿಗಳಿಗೆ ಸಮಸ್ಯೆ ಹೆಚ್ಚಾಗಿದೆ. ಜತೆಗೆ ಬಿಬಿಎಂಪಿ ಸಿಬ್ಬಂದಿ ಬಡಾವಣೆಯ ಎಲ್ಲ ಕಸ ಇಲ್ಲಿಯೇ ಸಂಗ್ರಹಿಸಿ ಕಸದ ವಾಹನಗಳಿಗೆ ಲೋಡ್ ಮಾಡುತ್ತಾರೆ. ಇದರಿಂದ ಹರಿಯುವ ಕೊಳಚೆ ನೀರಿನಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಹೋಗಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಅಬ್ದುಲ್ ರಜಾಕ್ ಎನ್., ಸ್ಥಳೀಯ ನಿವಾಸಿ

'ಅಂಚೆಪೆಟ್ಟಿಗೆ ಬದಲಾಯಿಸಿ'

ಕಮ್ಮನಹಳ್ಳಿಯ ಚರ್ಚ್ ಕಾಂಪೌಂಡ್‌ನ ಗೋಡೆ ಮೇಲೆ ಹಾಕಿರುವ ಅಂಚೆಪೆಟ್ಟಿಗೆ ಹಾಳಾಗಿದೆ. ಇದು ಪತ್ರಗಳನ್ನು ಹಾಕುವ ಸ್ಥಿತಿಯಲ್ಲಿಲ್ಲ. ಇದರಿಂದ, ಈ ಭಾಗದ ಜನರು ಪತ್ರಗಳನ್ನು ಹಾಕಲು ಅಂಚೆಕಚೇರಿಗೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಅಂಚೆಪೆಟ್ಟಿಗೆಯನ್ನು ಬದಲಾಯಿಸಬೇಕು.

ಶ್ರೀಸ್ವಾಮಿ, ಸ್ಥಳೀಯ ನಿವಾಸಿ



ಕಮ್ಮನಹಳ್ಳಿ ದುಃಸ್ಥಿತಿಯಲ್ಲಿರುವ ಅಂಚೆಪೆಟ್ಟಿಗೆ

'ಪಾದಚಾರಿ ಮಾರ್ಗದಲ್ಲಿ ಅಂಗಡಿ ನಿರ್ಮಾಣ'

ಆರ್.ಟಿ. ಸ್ಟ್ರೀಟ್ ಬಳೆಪೇಟೆ ಮುಖ್ಯರಸ್ತೆಯ ಕ್ರಾಸ್‌ನಲ್ಲಿ ಪಾದಚಾರಿ ಮಾರ್ಗವನ್ನು ಆಕ್ರಮಿಸಿಕೊಂಡು ಹೈಟೆಕ್ ಅಂಗಡಿ ನಿರ್ಮಿಸಲಾಗುತ್ತಿದೆ. ಇದರ ಕೆಳಗಡೆ ಇರುವ ಮೋರಿಗೆ ಅಳವಡಿಸಿರುವ ಚಪ್ಪಡಿ ಕಲ್ಲುಗಳ ಮೇಲೆ ಅಂಗಡಿ ನಿರ್ಮಾಣ ಕೆಲಸ ನಡೆಯುತ್ತಿದೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ಸಮಸ್ಯೆಯಾಗಲಿದೆ. ಬಿಬಿಎಂಪಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇದು ಹಲವು ಅನುಮಾನಗಳಿಗೆ ಕಾರಣವಾಗುತ್ತಿದೆ. ಕೂಡಲೇ ಈ ಅನಧಿಕೃತ ಅಂಗಡಿಯನ್ನು ತೆರವುಗೊಳಿಸಬೇಕು.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ



ಬಳೆಪೇಟೆಯ ಪಾದಚಾರಿಮಾರ್ಗದಲ್ಲಿನ ಅಂಗಡಿ




ನಾರಾಯಣ ನಗರ ದೊಡ್ಡಕಲ್ಲಸಂದ್ರದ ರಸ್ತೆ ದುಃಸ್ಥಿತಿ

ರಸ್ತೆ ದುರಸ್ತಿಗೊಳಿಸಿ

ನಾರಾಯಣ ನಗರ ವಾರ್ಡ್ ಸಂಖ್ಯೆ 197ರ 1ನೇ ಬ್ಲಾಕ್‌ನ ದೊಡ್ಡಕಲ್ಲಸಂದ್ರದ 18ನೇ ತಿರುವು ರಸ್ತೆಯನ್ನು ಬೆಂಗಳೂರು ಜಲಮಂಡಳಿಯ ಸಿಬ್ಬಂದಿ ನೀರಿನ ಪೈಪ್‌ಗಳನ್ನು ಅಳವಡಿಸಲು ಅಗೆದು ಹಾಗೆಯೇ ಬಿಟ್ಟಿದ್ದಾರೆ. ಆರು ತಿಂಗಳಿನಿಂದ ರಸ್ತೆಯನ್ನು ದುರಸ್ತಿ ಮಾಡಿಲ್ಲ. ಮಳೆ ಬಂದಾಗ ರಸ್ತೆಯಲ್ಲ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಇಂತಹ ರಸ್ತೆಯಲ್ಲಿ ವಾಹನ ಚಲಾಯಿಸುವುದು ಸವಾರರಿಗೆ ಸವಾಲಾಗಿ ಪರಿಣಮಿಸಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಮನವಿ ಸಲ್ಲಿಸಿದರೂ ಪರಿಹಾರ ಸಿಕ್ಕಿಲ್ಲ. ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಮಹಾಬಲೇಶ್ವರ, ಸ್ಥಳೀಯ ನಿವಾಸಿ



ಕೆ.ಆರ್. ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವ ಮೈಸೂರು ರಸ್ತೆಯಲ್ಲಿ ಗುಂಡಿಗಳು

ಕೆ.ಆರ್. ಮಾರುಕಟ್ಟೆ: ರಸ್ತೆ ದುರಸ್ತಿಗೊಳಿಸಿ

ಕೆ.ಆರ್. ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವ ಎನ್.ಆರ್. ರಸ್ತೆ, ಮೈಸೂರು ರಸ್ತೆಯು ಸಂಪೂರ್ಣ ಹಾಳಾಗಿವೆ. ನಗರದಲ್ಲಿ ಸಣ್ಣ ಮಳೆ ಸುರಿದರೂ ಕೆಸರು ಗದ್ದೆಯಾಗಿ ಮಾರ್ಪಡುತ್ತವೆ. ಮಾರುಕಟ್ಟೆಗೆ ಬರುವ ವಾಹನ ಸವಾರರು, ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಈ ರಸ್ತೆಯಲ್ಲಿ ಬಹಳ ಎಚ್ಚರಿಕೆಯಿಂದ ಸಂಚರಿಸಬೇಕು. ಆದ್ದರಿಂದ, ಮಳೆಗಾಲದಲ್ಲಿ ಗ್ರಾಹಕರು ಈ ಮಾರುಕಟ್ಟೆಗೆ ಬರಲು ಹಿಂದೇಟು ಹಾಕುತ್ತಾರೆ. ಕೂಡಲೇ ರಸ್ತೆ ದುರಸ್ತಿಗೊಳಿಸಬೇಕು.

ಸುರೇಶ್, ಚಾಮರಾಜಪೇಟೆ ನಿವಾಸಿ

'ಸೋರುತಿಹುದು ಬಸ್ ತಂಗುದಾಣ'

ರಾಜಾಜಿನಗರದ 6ನೇ ಬ್ಲಾಕ್‌ನ ಬಸ್ ತಂಗುದಾಣದ ಮೇಲ್ಚಾವಣಿಗೆ ಅಳವಡಿಸಿದ್ದ ತಗಡಿನ ಶೀಟ್‌ಗಳು ಹಾಳಾಗಿವೆ. ಮಳೆ ಬಂದರೆ ಈ ಬಸ್ ತಂಗುದಾಣ ಸಂಪೂರ್ಣ ಸೋರುತ್ತದೆ. ವಿದ್ಯಾರ್ಥಿಗಳು, ವೃದ್ಧರು ಮತ್ತು ಮಹಿಳೆಯರಿಗೆ ಸಮಸ್ಯೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ತಂಗುದಾಣದ ಮೇಲ್ಚಾವಣಿ ದುರಸ್ತಿಗೊಳಿಸಬೇಕು.

ರಾಜೇಶ್, ಸ್ಥಳೀಯ ನಿವಾಸಿ



ರಾಜಾಜಿನಗರದ 6ನೇ ಬ್ಲಾಕ್ ಬಸ್ ತಂಗುದಾಣದ ದುಃಸ್ಥಿತಿ

'ರಸ್ತೆ ಗುಂಡಿ ಮುಚ್ಚಿ'

ಆರ್.ಟಿ. ನಗರ 2ನೇ ಮುಖ್ಯರಸ್ತೆಯ 3ನೇ ಅಡ್ಡರಸ್ತೆಯ ಮಧ್ಯದಲ್ಲಿ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆಯಾಗಿದೆ. ಮಳೆ ಬಂದಾಗ ಈ ಗುಂಡಿಯಲ್ಲಿ ಮಳೆ ನೀರು ಸಂಗ್ರಹವಾಗುತ್ತದೆ. ಇದರಿಂದ, ವಾಹನ ಸವಾರರಿಗೆ ರಸ್ತೆ ಯಾವುದು ಗುಂಡಿ ಯಾವುದು ಎಂಬುದು ತಿಳಿಯುವುದಿಲ್ಲ. ರಸ್ತೆಯ ಮಧ್ಯದಲ್ಲಿರುವ ಗುಂಡಿಯನ್ನು ಮುಚ್ಚುವಂತೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಶೇಖರ್, ಸ್ಥಳೀಯ ನಿವಾಸಿ



ಆರ್.ಟಿ. ನಗರದ 3ನೇ ಅಡ್ಡರಸ್ತೆಯ ಮಧ್ಯದಲ್ಲಿ ಬಿದ್ದಿರುವ ಗುಂಡಿ

ನವವರ್ಣ


ಚಾಮುಂಡೇಶ್ವರ ಭಜನಾ ಮಂಡಳಿ ಸದಸ್ಯೆಯರು, ಅಂಜನಾಪುರ, ಬೆಂಗಳೂರು


ನಾಗರತ್ನ, ಶೈಲಾ, ನ್ಯೂಟೌನ್ ಯಲಹಂಕ, ಬೆಂಗಳೂರು


ಕಾರ್ಡಿಯಲ್ ಹೈ ಸ್ಕೂಲ್ ಶಿಕ್ಷಕಿಯರು, ಪ್ರಶಾಂತ್ ನಗರ, ಬೆಂಗಳೂರು



ಶೋಭಾ ಕಟ್ಟಿ, ಲಕ್ಷ್ಮಿ, ನಿರ್ಮಲಾ, ಪುಷ್ಪ, ಕೆಂಗೇರಿ, ಬೆಂಗಳೂರು


ಶ್ರೀ ತಿಮ್ಮರಾಯ ಸ್ವಾಮಿ ಭಜನಾ ಮಂಡಳಿ ಸದಸ್ಯೆಯರು, ಆನೇಕಲ್, ಬೆಂಗಳೂರು


ವಿಜಯಾ ಸ್ವಾಮಿ, ಪೂರ್ಣಿಮಾ, ಸಾನಿಕಾ, ಸಹಕಾರ ನಗರ, ಬೆಂಗಳೂರು


ಮೀನಾ ಕುಮಾರಿ ಮತ್ತು ಸಹೋದ್ಯೋಗಿಗಳು, ಕುಮಾರಸ್ವಾಮಿ ಲೇಔಟ್, ಬೆಂಗಳೂರು


ವಿಜಯಲಕ್ಷ್ಮಿ ಬಿಲ್ಕರ್, ಅನುರಾಧಾ ಬಿಲ್ಕರ್, ಬೆಂಗಳೂರು


ಚಾರಿಕ ಪ್ರಸಾದ್, ಕೆಂಗೇರಿ, ಬೆಂಗಳೂರು


ಪರಿಮಳ ಮತ್ತು ತಂಡ, ಬೆಂಗಳೂರು


ಜ್ಯೋತಿ, ದೀಪ್ತಿ, ರಾದಮ್ಮ ಬಂಗಾರಪೇಟೆ ತಾಲ್ಲೂಕು, ಕೋಲಾರ


ಸವಿತಾ ಮಲ್ಲಿಕಾರ್ಜುನ್, ರಾಜಾಜಿನಗರ ಬೆಂಗಳೂರು


ನವರಸ ನಟನ ಅಕಾಡೆಮಿ ಸದಸ್ಯೆಯರು, ಸದಾಶಿವನಗರ


ಶಾಲಿನಿ ಚೇತನ್, ಬೆಂಗಳೂರು


ಕೋಕಿಲಾ ಸಹೋದರಿಯರು, ದೊಡ್ಡಬಳ್ಳಾಪುರ, ಬೆಂ. ಗ್ರಾ.



ಉಷಾಲಕ್ಷ್ಮಿ ಅರವಿಂದ ಹೊಳ್ಳ, ಬೆಂಗಳೂರು



ಸಂಧ್ಯಾ ಮತ್ತು ಗೆಳತಿಯರು, ಕೆಂಗೇರಿ, ಬೆಂಗಳೂರು


ಗೌರಮ್ಮ, ವಸಂತಾ, ವೀಣಾ, ಛಾಯಾ, ಕೆಂಗೇರಿ ಉಪನಗರ, ಬೆಂಗಳೂರು


ಶ್ವೇತಾ ಮತ್ತು ಕವಿತಾ, ರಾಚೇನಹಳ್ಳಿ, ಥಣಿಸಂದ್ರ, ಬೆಂಗಳೂರು


ಲಕ್ಷ್ಮಿ ಮಿಸ್ಕಿನ್ ಮತ್ತು ಗೆಳತಿಯರು, ಹುಬ್ಬಳ್ಳಿ


ಆನವಿ ಎಸ್ ಪೆರ್ಲ, ಬೆಂಗಳೂರು


ಶಿಲ್ಪಾ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ


ಲಕ್ಷ್ಮಿ ಮತ್ತು ಸಹೋದರಿಯರು, ಬೆಂಗಳೂರು


ಶ್ರೀಮಾತಾ ಸಂಘ, ಮಹಾಲಕ್ಷ್ಮೀಪುರಂ, ಬೆಂಗಳೂರು


ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಿಬ್ಬಂದಿ ವರ್ಗ, ಕ್ಯಾರಕೊಪ್ಪ, ಧಾರವಾಡ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ಈ ಪ್ರಪಂಚದಲ್ಲಿ ಹೆದರಿಕೆಗೆ ಜಾಗವಿಲ್ಲ. ಸಾಮರ್ಥ್ಯವು ಸಾಮರ್ಥ್ಯವನ್ನಷ್ಟೇ ಗೌರವಿಸುತ್ತದೆ.

–ಎ.ಪಿ.ಜೆ. ಅಬ್ದುಲ್ ಕಲಾಂ

ಫ್ಲೆಕ್ಸ್, ಹೋರ್ಡಿಂಗ್ ಹಾವಳಿ ಬಿಬಿಎಂಪಿಗೆ ಬೇಕು ಸ್ಪಷ್ಟ ನೀತಿ

ಪರವಾನಗಿ ಇಲ್ಲದ ಹೋರ್ಡಿಂಗ್‌ಗಳು ಹಾಗೂ ಫ್ಲೆಕ್ಸ್‌ಗಳ ಅಳವಡಿಕೆ ತಡೆಯುವಲ್ಲಿ ವೈಫಲ್ಯ ಕಾಣುತ್ತಲೇ ಇರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ರಾಜ್ಯ ಹೈಕೋರ್ಟ್, 'ನಗರದ ಪಾಲಿನ ನಂ. 1 ಶತ್ರು' ಎಂದು ಕರೆದಿದೆ. ನಗರದಲ್ಲಿ ಅಕ್ರಮವಾಗಿ ತಲೆ ಎತ್ತಿರುವ ಫ್ಲೆಕ್ಸ್‌ಗಳು, ಬ್ಯಾನರ್‌ಗಳು, ಹೋರ್ಡಿಂಗ್‌ಗಳ ವಿರುದ್ಧ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ವಿಚಾರಣೆಯ ಸಂದರ್ಭದಲ್ಲಿ ಕೋರ್ಟ್ ಹೀಗೆ ತಪರಾಕಿ ನೀಡಿದೆ. ಇಂತಹ ಅಕ್ರಮ ಹೋರ್ಡಿಂಗ್‌ಗಳು, ಫ್ಲೆಕ್ಸ್‌ಗಳು ನಗರದ ಸೌಂದರ್ಯವನ್ನು ಹಾಳು ಮಾಡುತ್ತವೆ. ಅಷ್ಟೇ ಅಲ್ಲ, ಇವುಗಳಿಂದಾಗಿ ಬಿಬಿಎಂಪಿ ವರಮಾನಕ್ಕೆ ಪೆಟ್ಟು ಬೀಳುತ್ತದೆ ಎಂದು ಕೋರ್ಟ್ ಹೇಳಿದೆ. ಬಿಬಿಎಂಪಿಯು ಎಲ್ಲ ಹೋರ್ಡಿಂಗ್‌ಗಳ ಸಮೀಕ್ಷೆ ನಡೆಸಬೇಕು ಎಂದು ಕೋರ್ಟ್ ಸೂಚಿಸಿದೆ. ಎಷ್ಟು ಹೋರ್ಡಿಂಗ್‌ಗಳು ತಮಗೆ ನಿಗದಿ ಮಾಡಲಾಗಿದ್ದ ಅವಧಿಯನ್ನು ಮೀರಿ ಉಳಿದುಕೊಂಡಿವೆ ಎಂಬುದರ ವಿವರವನ್ನು ನೀಡುವಂತೆ ಕೂಡ ಕೋರ್ಟ್ ಸೂಚನೆ ನೀಡಿದೆ. ಇಲ್ಲಿ ಕುತೂಹಲಕರ ಅಂಶವೊಂದು ಇದೆ. ನಗರದಲ್ಲಿ ಯಾವುದೇ ಸಂದರ್ಭದಲ್ಲಿ ನೂರಾರು ಅಕ್ರಮ ಫ್ಲೆಕ್ಸ್‌ಗಳನ್ನು, ಬೋರ್ಡ್‌ಗಳನ್ನು ಗುರುತಿಸಬಹುದು. ಆದರೆ ತನ್ನ ವ್ಯಾಪ್ತಿಯ ಎಂಟು ವಲಯಗಳಲ್ಲಿನ 47 ಪ್ರಕರಣಗಳಲ್ಲಿ ಮಾತ್ರ ಒಟ್ಟು ₹ 5 ಲಕ್ಷ ದಂಡ ವಿಧಿಸಲಾಗಿದೆ ಎಂದು ಕೋರ್ಟ್‌ಗೆ ಬಿಬಿಎಂಪಿ ಮಾಹಿತಿ ನೀಡಿದೆ. ಮೊದಲ ಹಂತದಲ್ಲಿ ಒಟ್ಟು 1,400 ಕಿಲೊಮೀಟರ್ ಉದ್ದದ ರಸ್ತೆಯಲ್ಲಿನ ಅಕ್ರಮ ಹೋರ್ಡಿಂಗ್‌ಗಳನ್ನು ಮೂರು ತಿಂಗಳಲ್ಲಿ ತೆರವು ಮಾಡಲಾಗುವುದು ಎಂದು ಪಾಲಿಕೆಯು ಕೋರ್ಟ್‌ಗೆ ಮಾಹಿತಿ ನೀಡಿದೆ. ಇನ್ನುಳಿದ ರಸ್ತೆಗಳಲ್ಲಿನ ಹೋರ್ಡಿಂಗ್‌ಗಳನ್ನು ಆನಂತರದ ಮೂರು ತಿಂಗಳುಗಳಲ್ಲಿ ತೆರವು ಮಾಡಲಾಗುತ್ತದೆ ಎಂದು ಅದು ತಿಳಿಸಿದೆ.



ತಪ್ಪು ಮಾಡಿದವರ ವಿರುದ್ಧ ಬಿಬಿಎಂಪಿ ಕಠಿಣ ಕ್ರಮಕ್ಕೆ ಮುಂದಾಗಬೇಕು. ಅದರಲ್ಲೂ ಮುಖ್ಯವಾಗಿ, ದೊಡ್ಡ ಪ್ರಮಾಣದಲ್ಲಿ ತಪ್ಪು ಮಾಡುವ ರಾಜಕಾರಣಿಗಳ ವಿರುದ್ಧ ಕ್ರಮ ಜರುಗಿಸಬೇಕು

ಹೊರಾಂಗಣ ಹೋರ್ಡಿಂಗ್‌ಗಳು 2018ರಿಂದಲೂ ವಿವಾದದ ಕೇಂದ್ರವಾಗಿ ಉಳಿದಿವೆ. ಆ ಇಸವಿಯಲ್ಲಿ ಹೈಕೋರ್ಟ್, ಬೆಂಗಳೂರನ್ನು ಹೋರ್ಡಿಂಗ್‌ಗಳಿಂದ ಮುಕ್ತವಾಗಿಸಬೇಕು ಎಂದು ಬಿಬಿಎಂಪಿಗೆ ಆದೇಶ ನೀಡಿತ್ತು. ಹೋರ್ಡಿಂಗ್‌ಗಳ ಪೈಕಿ ಶೇಕಡ 95ರಷ್ಟನ್ನು ತೆರವು ಮಾಡಲಾಗಿದೆ ಎಂದು ಬಿಬಿಎಂಪಿ ಆಗ ತಿಳಿಸಿತ್ತು. ನಂತರದಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿದ್ದ ಬಿಬಿಎಂಪಿ, ಸ್ಕೈವಾಕ್ ಹಾಗೂ ಬಸ್ ನಿಲ್ದಾಣಗಳಲ್ಲಿ ಇರುವ ಜಾಹೀರಾತುಗಳನ್ನು ಹೊರತುಪಡಿಸಿ ಎಲ್ಲ ಬಗೆಯ ಹೊರಾಂಗಣ ಜಾಹೀರಾತುಗಳನ್ನು ನಿಷೇಧಿಸಿತ್ತು. ಖಾಸಗಿ ಸ್ವತ್ತುಗಳ ಮೇಲೆ ಹಾಕಲಾಗಿದ್ದ ಹೋರ್ಡಿಂಗ್‌ಗಳನ್ನೂ ತೆರವು ಮಾಡುವಂತೆ ಆದೇಶ ನೀಡಲಾಗಿತ್ತು. ಆದರೆ ಹೋರ್ಡಿಂಗ್‌ಗಳಿಗಿಂತ ದೊಡ್ಡ ಸಮಸ್ಯೆ ರಾಜಕಾರಣಿಗಳು ಅಳವಡಿಸುವ ಫ್ಲೆಕ್ಸ್, ಬ್ಯಾನರ್‌ಗಳದ್ದು. ಇವು ನಗರದ ಸೌಂದರ್ಯದ ಪಾಲಿಗೆ ಕಪ್ಪುಚುಕ್ಕೆ ಇದ್ದಂತೆ.

ಇಂದು ಬಿಬಿಎಂಪಿಯ ಹೊರಾಂಗಣ ಜಾಹೀರಾತು ನೀತಿ ಏನು ಎಂಬ ವಿಚಾರದಲ್ಲಿ ಯಾರಿಗೂ ಸ್ಪಷ್ಟತೆ ಇದ್ದಂತಿಲ್ಲ. ಈ ವಿಚಾರವಾಗಿ ನ್ಯಾಯಾಲಯಗಳು ನೀಡಿರುವ ಹಲವು ಆದೇಶಗಳಿವೆ, ಪಾಲಿಕೆಯಲ್ಲಿಯೇ ಈ ವಿಚಾರವಾಗಿ ಗೊಂದಲಗಳು ಇವೆ. ಸಂದರ್ಭಕ್ಕೆ ಒಂದು ತೀರ್ಮಾನ ಕೈಗೊಳ್ಳುವ ಬದಲು, ನಗರದ ಸೌಂದರ್ಯ ಹಾಗೂ ಇಂದಿನ ಅಗತ್ಯಗಳನ್ನು ಗಮನದಲ್ಲಿ ಇರಿಸಿಕೊಂಡು ಬಿಬಿಎಂಪಿ ಹೊರಾಂಗಣ ಜಾಹೀರಾತುಗಳ ಬಗ್ಗೆ ಸೂಕ್ತವಾದ ನೀತಿಯೊಂದನ್ನು ಹೊಂದುವುದು ಒಳ್ಳೆಯದು. ತಪ್ಪು ಮಾಡಿದವರ ವಿರುದ್ಧ ಬಿಬಿಎಂಪಿ ಕಠಿಣ ಕ್ರಮಕ್ಕೆ ಮುಂದಾಗಬೇಕು. ಅದರಲ್ಲೂ ಮುಖ್ಯವಾಗಿ ದೊಡ್ಡ ಪ್ರಮಾಣದಲ್ಲಿ ತಪ್ಪು ಮಾಡುವ ರಾಜಕಾರಣಿಗಳ ವಿರುದ್ಧ ಕ್ರಮ ಜರುಗಿಸಬೇಕು. ಹಾಗೆಯೇ, ಈ ವಿಚಾರದಲ್ಲಿ ಉಪೇಕ್ಷೆಯಿಂದ ವರ್ತಿಸಿದ ಹಾಗೂ ಅಕ್ರಮ ಎಸಗಿದವರ ಜೊತೆ ಶಾಮೀಲಾಗಿದ್ದ ತನ್ನ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧವೂ ಅದು ಕ್ರಮ ಜರುಗಿಸಬೇಕು. ಆದರೆ, ಸಂಬಂಧಪಟ್ಟ ಎಲ್ಲರ ಜೊತೆ ಚರ್ಚಿಸಿ ಸಮಗ್ರವಾದ ನೀತಿಯೊಂದನ್ನು ರೂಪಿಸದ ಹೊರತು ನ್ಯಾಯಾಲಯಗಳ ಆದೇಶಗಳು ಅಥವಾ ಅಧಿಕಾರಿಗಳ ಮಧ್ಯಪ್ರವೇಶವು ಈ ಸಮಸ್ಯೆಯನ್ನು ಬಗೆಹರಿಸಲಾರವು.

ದಿನದ ಟ್ವೀಟ್

ಜೀವಜಲ ಪೂರೈಸಿ, ಜೀವ ಉಳಿಸಿ



ಗಾಜಾದಲ್ಲಿ ನೀರಿಲ್ಲದೆ ಮೂರು ದಿನಗಳಾಗಿವೆ. ಇದೊಂದು ಯುದ್ಧಾಪರಾಧ. ಮನುಷ್ಯರು ನೀರಿಲ್ಲದೆ ಸುಮಾರು ಮೂರು ದಿನಗಳಷ್ಟೇ ಬದುಕುಳಿಯಬಲ್ಲರು. ಗಾಜಾದಲ್ಲಿ ಈಗ ಸತ್ವಪರೀಕ್ಷೆಯ ಕಾಲ! ನೀರು, ವಿದ್ಯುತ್, ಆಹಾರ ಪದಾರ್ಥ ಸರಬರಾಜಿಗೆ ಇಸ್ರೇಲ್ ಅವಕಾಶ ನೀಡಿಲ್ಲ. ಗಾಜಾದಲ್ಲಿ ಇರುವವರಲ್ಲಿ ಶೇ 50ರಷ್ಟು ಮಕ್ಕಳು. ಈ ಯುದ್ಧಾಪರಾಧ ಮತ್ತು ಜನಾಂಗೀಯ ಹತ್ಯೆಯನ್ನು ತಡೆಗಟ್ಟಲು ನಾವೆಲ್ಲರೂ ಒಗ್ಗಟ್ಟಾಗಲೇಬೇಕು. ಗಾಜಾಗೆ ನೀರು ಕೊಡಿ. #Gazagenocide

ಸುಲೈಮಾನ್ ಅಹ್ಮದ್, ಪತ್ರಕರ್ತ, ಲೇಖಕ

ಕಿಡಿನುಡಿ



ರಾಜ್ಯದಲ್ಲಿ ಜನರ ಹಣವನ್ನು ಲೂಟಿ ಮಾಡಿ ಪಂಚರಾಜ್ಯಗಳ ಚುನಾವಣೆಗೆ ಕಳುಹಿಸುತ್ತಿದ್ದಾರೆ. ಬೇರೆ ರಾಜ್ಯಗಳ ಚುನಾವಣೆಗೆ ಕರ್ನಾಟಕವು ಎಟಿಎಂ ಆಗಿದೆ. ಇವತ್ತು ಇನ್ನೊಬ್ಬರ ಮನೆಯಲ್ಲೂ ಹಣ ಸಿಕ್ಕಿದೆ. ಇದೆಲ್ಲವೂ ಲೂಟಿ ಹಣ.

ನಳಿನ್ ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಶುಕ್ರವಾರ, 16-10-1998

• **ನಾಲ್ಕು ಜಿಲ್ಲೆಗಳಲ್ಲಿ ವ್ಯಾಪಕ ಹಾನಿ: 19ಕ್ಕೂ ಹೆಚ್ಚು ಮಂದಿಯ ಸಾವು**

ಬೆಂಗಳೂರು, ಅ. 15– ವಿಜಾಪುರ, ಕಲ್ಬುರ್ಗಿ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸುರಿದ ಧಾರಾಕಾರ ಮಳೆ ಕಳೆದ ಎರಡು ದಿನಗಳಲ್ಲಿ 19ಕ್ಕೂ ಹೆಚ್ಚು ಜೀವಗಳನ್ನು ಬಲಿ ತೆಗೆದುಕೊಂಡಿದೆ.

ಅನೇಕ ಕಡೆಗಳಲ್ಲಿ ಮನೆಗಳು ಕುಸಿದಿವೆ. ಬೆಟ್ಟದ ಕಲ್ಲುಗಳು ಜರಿದುಬಿದ್ದು ಸಕಲೇಶಪುರದ ಬಳಿ ರಾಷ್ಟ್ರೀಯ ಹೆದ್ದಾರಿಯ ಸಂಚಾರವೂ ಅಸ್ತವ್ಯಸ್ತವಾಗಿದೆ.

ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟ ಏರುತ್ತಿದೆ. ಬೀದರ್ ಜಿಲ್ಲೆಯ ಮಾಂಜ್ರಾ ನದಿಯಲ್ಲಿ ಮತ್ತೆ ಪ್ರವಾಹ ಕಾಣಿಸಿಕೊಂಡಿದೆ.

ಕಲ್ಬುರ್ಗಿ ಜಿಲ್ಲೆಯಾದ್ಯಂತ ಮಳೆ ಸತತವಾಗಿ ಮೂರನೆಯ ದಿನಕ್ಕೆ ಮುಂದುವರಿದಿದ್ದು, ಜನರನ್ನು ರಕ್ಷಿಸಲು ಹೆಲಿಕಾಪ್ಟರ್ ಒದಗಿಸುವಂತೆ ಜಿಲ್ಲಾಧಿಕಾರಿ ಸರ್ಕಾರವನ್ನು ಕೋರಿದ್ದಾರೆ.

• **ಶಾಸಕರನ್ನು ಸೆಳೆಯಲು ದಳದ ಉಭಯ ಬಣಗಳ ಪೈಪೋಟಿ**

ಬೆಂಗಳೂರು, ಅ. 15– ರಾಜ್ಯದಲ್ಲಿ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ನಾಯಕತ್ವ ಬದಲಾವಣೆ ಆಗಬೇಕೆಂದು ಭಿನ್ನರು, ಆಗಬಾರದೆಂದು ನಿಷ್ಠರು ಹೀಗೆ ಆಡಳಿತಾರೂಢ ಜನತಾದಳದ ಎರಡೂ ಬಣಗಳು ತಮ್ಮತ್ತ ಶಾಸಕರ ಮನವೊಲಿಸಲು ತೀವ್ರ ಪೈಪೋಟಿ ನಡೆಸಿವೆ.

ನಾಯಕತ್ವ ಬದಲಾವಣೆಗೆ ಒತ್ತಾಯಿಸುತ್ತಿರುವ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಗುಂಪಿನೊಂದಿಗೆ ಗುರುತಿಸಿಕೊಂಡಿರುವ ದಳದ ಶಾಸಕರನ್ನು ಸಂಪರ್ಕಿಸಿ ಅವರ ಮನವೊಲಿಸಿರುವುದಾಗಿ ಜೆ.ಎಚ್. ಪಟೇಲ್ ನಿಷ್ಠರ ಗುಂಪಿನ ವಕ್ತಾರರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 16-10-1973

• **ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ ವಿಧೇಯಕ ಕೇವಲ 'ಕಾಗದದ ಹುಲಿ'**

ಬೆಂಗಳೂರು, ಅ. 15– ಖಾಸಗಿ ಶಾಲಾ, ಕಾಲೇಜುಗಳಿಂದ ವಿವಿಧ ರೀತಿಯ ಶುಲ್ಕ ಪಾವತಿಯ ಮೂಲಕ ಶೋಷಣೆಗೆ ಒಳಗಾಗುತ್ತಿರುವ ಪಾಲಕರ ದೂರುಗಳನ್ನು ಕೇಳಲು ಪ್ರತ್ಯೇಕ ಪಂಚಾಯ್ತಿಯೊಂದು ರಚನೆಯಾಗಬೇಕು ಎಂದು ಶಿಕ್ಷಕರ ಪ್ರತಿನಿಧಿ ಮುಳ್ಳೂರು ಆನಂದರಾವ್ ಇಂದು ವಿಧಾನಪರಿಷತ್ತಿನಲ್ಲಿ ಸಲಹೆ ನೀಡಿದರು.

ಶೋಷಣೆಗೆ ಒಳಗಾಗುತ್ತಿರುವ ಶಿಕ್ಷಕರ ದೂರುಗಳಿಗೆ ಪ್ರತ್ಯೇಕ ಪಂಚಾಯ್ತಿ ವ್ಯವಸ್ಥೆಯು ಇರುವಂತೆ, ಪಾಲಕರಿಗೂ ದೂರು ಸಲ್ಲಿಸಲು ವ್ಯವಸ್ಥೆ ಇಲ್ಲದಿರುವುದು ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ ವಿಧೇಯಕದ ಕೊರತೆ ಎಂದು ಅವರು ವಿಧೇಯಕದ ಮೇಲೆ ಮಾತನಾಡಿದಾಗ ಹೇಳಿದರು.

• **ನಿರ್ವಹಣೆ ವೆಚ್ಚ ಏರಿಕೆ ಕಾರಣ ಸರ್ಕಾರಿ ಬಸ್ಸುಗಳ ಪ್ರಯಾಣ ದರ ಹೆಚ್ಚಳ 'ಅವಶ್ಯಕ, ಪ್ರಾಮಾಣಿಕ'**

ಬೆಂಗಳೂರು, ಅ. 15– ಕಳೆದ ಒಂದು ವರ್ಷದ ಅವಧಿಯಲ್ಲಿ ಆಗಿರುವ ಶೇಕಡ 20ರಷ್ಟು ನಿರ್ವಹಣಾ ವೆಚ್ಚ ಏರಿಕೆಯ ದೃಷ್ಟಿಯಿಂದ, ನಗರೇತರ ಸರ್ಕಾರಿ ಬಸ್ಸುಗಳ ಪ್ರಯಾಣ ದರ ಹೆಚ್ಚಳ 'ಅವಶ್ಯಕ, ಪ್ರಾಮಾಣಿಕ ಹಾಗೂ ಸಮರ್ಥನೀಯ' ಎಂದು ಸಾರಿಗೆ ಮಂತ್ರಿ ಅಜೀಜ್ ಸೇಠ್ ಅವರು ಇಂದು ವಿಧಾನ ಪರಿಷತ್‌ನಲ್ಲಿ ಪ್ರತಿಪಾದಿಸಿದರು.

'ಕಳೆದ ವರ್ಷ ಸಾರಿಗೆ ಸಂಸ್ಥೆಯ ನಿರ್ವಹಣಾ ವೆಚ್ಚವು 25 ಕೋಟಿ ರೂಪಾಯಿಗಳಾಗಿದ್ದರೆ, 1973–74ರ ಅವಧಿಯಲ್ಲಿ ಈ ವೆಚ್ಚವು 4.75 ಕೋಟಿ ರೂಪಾಯಿಗಳಷ್ಟು ಏರಲಿದೆ' ಎಂದು ಸಚಿವರು ಹೇಳಿದರು.

ಸಮೀಕ್ಷಾ ವರದಿ ಬಹಿರಂಗಪಡಿಸುವ ಅವಕಾಶ ಕೈಚೆಲ್ಲದಿರಲಿ ಸಿದ್ದರಾಮಯ್ಯ

ಶ್ರೇಷ್ಠತೆಯ ವ್ಯಸನಕ್ಕೆ ಜಾತಿಗಣತಿ ಮದ್ದು



ಗತಿಬಿಂಬ

ವೈ.ಗ.ಜಗದೀಶ್

ಬಿಹಾರದಲ್ಲಿ ಜಾತಿ ಜನಗಣತಿ ವರದಿ ಬಿಡುಗಡೆಯಾಗಿದ್ದೇ ತಡ, ಜಾತಿಯ ಪದರುಗಳನ್ನೇ ಹಿಂದುತ್ವದ ಸಾಂಸ್ಥಿಕ ನೆಲೆಗೆ ಅಡಿಪಾಯವಾಗಿ ಇರಿಸಿಕೊಂಡ ಕೋಮುವಾದಿಗಳು ಹೌಹಾರಿದ್ದಾರೆ. ಹಿಂದೂಧರ್ಮದ ಅಸ್ತಿತ್ವವು ಜಾತಿಯ ಶ್ರೇಣೀಕರಣದ ಮೇಲೆ ನಿಂತಿದೆ. ಶ್ರೇಷ್ಠತೆಯ ವ್ಯಸನ ಈಗ ಎಲ್ಲ ಪ್ರಬಲ ಜಾತಿಗಳ ಪುರೋಹಿತಶಾಹಿ ವರ್ಗವನ್ನೂ ವ್ಯಾಪಿಸಿಕೊಂಡಿದ್ದು, ತನಗಿಂತ 'ಕೆಳಗೆ' ಎಂದು ಭಾವಿಸಿಕೊಂಡ ಜನಪದರನ್ನು ಕೀಳಾಗಿ ಕಾಣುವುದನ್ನು ಮುಂದುವರಿಸಿದೆ.

ಜಾತಿ ಜನಗಣತಿಯ ಬಳಿಕ ಎಲ್ಲ ಸಮುದಾಯಗಳ ನೈಜ ಅಂಕಿ ಅಂಶಗಳು ಗೊತ್ತಾದರೆ, ರಾಜಕೀಯ, ಸಾಮಾಜಿಕ, ಆರ್ಥಿಕ ಪ್ರಾತಿನಿಧ್ಯದ ಕೂಗು ಬಲಗೊಳ್ಳುತ್ತಾ ಹೋಗುತ್ತದೆ. ಅಲಕ್ಷಿತ ಸಮುದಾಯಗಳ ಜನರನ್ನು ಕಾಲಾಳುಗಳನ್ನಾಗಿ ಬಳಸಿಕೊಂಡು ರಾಜಕಾರಣ ಮಾಡುತ್ತಿರುವ ಪ್ರಬಲ ಜಾತಿಗಳ ಹಿತಾಸಕ್ತಿಗೆ ಹೊಡೆತ ಬೀಳಲಿದೆ. ಈ ಕಾರಣಕ್ಕಾಗಿಯೇ, ಜಾತಿಗಣತಿಯ ವಿರುದ್ಧ ಅಪಸ್ವರಗಳು ಎದ್ದಿವೆ.

ಇತ್ತೀಚಿನ ವರ್ಷಗಳಲ್ಲಿ ದೇಶದೊಳಗಿನ ಯಾವುದೇ ವಿದ್ಯಮಾನಗಳಿಗೂ ಪ್ರತಿಕ್ರಿಯೆ ನೀಡದ ಪ್ರಧಾನಿ ನರೇಂದ್ರ ಮೋದಿಯವರು ಈಚೆಗೆ ಎರಡು ಬಾರಿ ಮೌನ ಮುರಿದರು. ಸನಾತನಧರ್ಮದ ಕುರಿತು ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಆಡಿದ ಮಾತಿಗೆ ನೀಡಿದ ಪ್ರತಿಕ್ರಿಯೆ ಮೊದಲನೆಯದು. ಜಾತಿಗಣತಿ ವರದಿ ಬಿಡುಗಡೆಯಾದ ಬಳಿಕ, ಅದನ್ನು ಉಲ್ಲೇಖಿಸದೇ ಪ್ರತಿಕ್ರಿಯಿಸಿದ ಅವರು, 'ವಿರೋಧ ಪಕ್ಷಗಳು ದೇಶವನ್ನು ಜಾತಿ ಆಧಾರದ ಮೇಲೆ ವಿಭಜಿಸಿವೆ. ಈಗ ಮಾಡುತ್ತಿರುವುದೂ ಅಂತಹುದೇ ಪಾಪದ ಕೆಲಸ' ಎಂದಿದ್ದರು.

ಬಿಹಾರ ಸರ್ಕಾರದ ನಡೆಯು ದೇಶದಲ್ಲಿ ಸಂಚಲನ ಮೂಡಿಸಿದೆ. ಕರ್ನಾಟಕದಲ್ಲೂ 'ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ'ಯ ವರದಿಯನ್ನು ಬಿಡುಗಡೆ ಮಾಡಬೇಕೆಂಬ ಕೂಗು ಎದ್ದಿದೆ. ಅದಕ್ಕೆ ವಿರೋಧವೂ ವ್ಯಕ್ತವಾಗಿದೆ. ಈ ಬಗ್ಗೆ ಮಾತನಾಡಿದ್ದ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ, 'ಕಾಂಗ್ರೆಸ್ ಪಕ್ಷವು ಜಾತಿಗಣತಿ ವರದಿ ಮುಂದಿಟ್ಟುಕೊಂಡು ಜಾತಿ, ಜಾತಿಗಳ ಮಧ್ಯೆ ವಿಷಬೀಜ ಬಿತ್ತಲು ಹೊರಟಿದೆ. ಈಗ ಜಾತಿಗಣತಿ ನಡೆಸಿ ಯಾವ ಸಾಧನೆ ಮಾಡುತ್ತಾರೆ? ಸಮಾಜ ಒಡೆಯಲು ಜಾತಿಗಣತಿ ಮಾಡುತ್ತಿದ್ದಾರೆಯೇ? ಇದು ಜಾತಿ ದ್ವೇಷಕ್ಕೆ ಕಾರಣವಾಗಲಿದೆ' ಎಂದಿದ್ದರು. ಹೀಗೆ ಹೇಳಿದ ಮರುದಿನವೇ, ಅವರ 'ಸಾಮ್ರಾಜ್ಯ'ವೇ ಆಗಿದ್ದ ರಾಮನಗರ ತಾಲ್ಲೂಕಿನ ಚನ್ನಮಾನಹಳ್ಳಿಯ ದೇವಸ್ಥಾನದ ಆವರಣದಲ್ಲಿರುವ ನಲ್ಲಿಯಲ್ಲಿ ನೀರು ಹಿಡಿಯಲು ಹೋದ, ಪರಿಶಿಷ್ಟ ಜಾತಿಗೆ ಸೇರಿದ 13 ವರ್ಷದ ಬಾಲಕಿಯನ್ನು ದೇವಸ್ಥಾನದ ಪೂಜಾರಿ ಹಾಗೂ ಆತನ ಸಹೋದರಿ ಜಾತಿ ಹೆಸರಲ್ಲಿ ನಿಂದಿಸಿ, ಅವರ ಕಡೆಯವರ ಮೇಲೆ ಹಲ್ಲೆ ಮಾಡಿದ್ದರು.

ಅದಾದ ಮೂರು ದಿನಗಳಲ್ಲೇ, ಬೇರೊಂದು ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದ 20 ವರ್ಷದ ಮಗಳನ್ನು ಅಪ್ಪನೇ ಕತ್ತು ಸೀಳಿ ಹತ್ಯೆ ಮಾಡಿದ ಘಟನೆ ದೇವನಹಳ್ಳಿ ತಾಲ್ಲೂಕಿನ ಬಿದಲೂರು ಗ್ರಾಮದಲ್ಲಿ ನಡೆದಿದೆ. ವಾಲ್ಮೀಕಿ ಸಮುದಾಯದ ಯುವತಿ, ತಂದೆಯಿಂದ ಮರ್ಯಾದೆಗೇಡು ಹತ್ಯೆಗೀಡಾದ ದುರ್ದೈವಿ. ಈ ಎರಡೂ ಪ್ರಕರಣಗಳು ಜಾತಿ ದ್ವೇಷ, ಜಾತಿ ಶ್ರೇಷ್ಠತೆಯ ಧೂರ್ತರ ಧೋರಣೆಗೆ ನಿದರ್ಶನ. ಜಾತಿಗಣತಿ ನಡೆದರೆ ದ್ವೇಷ ಹುಟ್ಟುತ್ತದೆ ಎಂದಾದರೆ, ಈ ಎರಡು ಪ್ರಕರಣಗಳನ್ನು ಕುಮಾರಸ್ವಾಮಿ ಏನೆಂದು ಅರ್ಥೈಸುತ್ತಾರೆ?

ದೇಶದಲ್ಲಿ 1931ರಲ್ಲಿ ಜಾತಿವಾರು ಗಣತಿ ನಡೆದಿದ್ದು ಬಿಟ್ಟರೆ ಮತ್ತೆ ನಡೆದಿಲ್ಲ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಮೊದಲ ಅವಧಿಯಲ್ಲಿ ದೇಶದಲ್ಲಿ ಪ್ರಾಯೋಗಿಕವಾಗಿ ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಸಲು ಕರ್ನಾಟಕಕ್ಕೆ ಅನುದಾನ ನೀಡಿದ್ದರು. ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ, ಕಾಂಗ್ರೆಸ್–ಜೆಡಿಎಸ್ ನೇತೃತ್ವದ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಇದರ ಬಗ್ಗೆ ಆಸ್ಥೆ ವಹಿಸಿ, ರಾಜ್ಯದ ಪಾಲನ್ನು ನೀಡಿದ್ದರು. ಆಗ ಪ್ರಕ್ರಿಯೆಗೆ ಚಾಲನೆ ಸಿಕ್ಕಿತ್ತು. ಬಳಿಕ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗ ಇದರ ಮೊದಲ ಹಂತದ ಪ್ರಕ್ರಿಯೆ ಶುರುವಾಗಿದ್ದರೂ ಮುಂದೆ ಸಾಗಿರಲಿಲ್ಲ. ಸಮೀಕ್ಷೆ ನಡೆಯಬೇಕಾದರೆ ಮತ್ತೆ ಸಿದ್ದರಾಮಯ್ಯನವರೇ ಬರಬೇಕಾಯಿತು. 2013ರಲ್ಲಿ ಮುಖ್ಯಮಂತ್ರಿಯಾದ ಅವರು ಇದಕ್ಕೆ ಬೇಕಾದ ಅನುದಾನ, ಎಲ್ಲ ಇಲಾಖೆಗಳ ನೆರವನ್ನೂ ಕೊಡಿಸಿದರು. 2018ರ ವಿಧಾನಸಭೆ ಚುನಾವಣೆಗೆ ಮುನ್ನ, ವರದಿಯನ್ನು ಸ್ವೀಕರಿಸುವ ಇರಾದೆ ಅವರಲ್ಲಿತ್ತು. ಆದರೆ, ಸಚಿವ ಸಂಪುಟದಲ್ಲಿದ್ದ ಪ್ರಬಲ ಜಾತಿಗಳ ಪ್ರತಿನಿಧಿಗಳು ಅದಕ್ಕೆ ಸಹಕಾರ ಕೊಡಲಿಲ್ಲ. ಈಗ ಮತ್ತೆ, ಸಿದ್ದರಾಮಯ್ಯನವರ ಮುಂದೆ ಸವಾಲು ಎದುರಾಗಿದೆ.

₹ 158 ಕೋಟಿ ವೆಚ್ಚ ಮಾಡಿ ಸಿದ್ಧವಾಗಿರುವ ವರದಿ ಮಂಡನೆಗೆ ಸಣ್ಣಪುಟ್ಟ ಕಾನೂನು ತೊಡಕುಗಳು ಇರಬಹುದು. ವರದಿ ಪಡೆಯುವುದು ಕಷ್ಟವೇನಲ್ಲ. ದೇಶದಲ್ಲಿ ಜಾತಿ ಜನಗಣತಿ ನಡೆಸಬೇಕು ಎಂಬ ಪ್ರಬಲ ಬೇಡಿಕೆಯನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮುಂದಿಟ್ಟಿದ್ದಾರೆ. ಹೀಗಾಗಿ, ಸಚಿವ ಸಂಪುಟದಲ್ಲಿರುವ ಪ್ರಬಲ ಜಾತಿಯ ಕೆಲವು ಪ್ರತಿನಿಧಿಗಳು ಎಷ್ಟೇ ವಿರೋಧಿಸಿದರೂ ರಾಹುಲ್ ಅಸ್ತ್ರ ತೋರಿಸಿ ಬಚಾವಾಗಬಹುದಾದ ಅಮೂಲ್ಯ ಅವಕಾಶ ಸಿದ್ದರಾಮಯ್ಯನವರಿಗೆ ಸಿಕ್ಕಿದೆ.



ರಾಜ್ಯದಲ್ಲಿ ಸಮೀಕ್ಷೆ ಸರಿಯಾಗಿ ನಡೆದಿಲ್ಲ, ಹೀಗಾಗಿ ಅದನ್ನು ಒಪ್ಪಬಾರದು ಎಂಬ ವಾದ ಕೆಲವರದ್ದಾಗಿದೆ. ಇಲ್ಲೊಂದು ಗಮನಿಸಬೇಕಾದ ವೈಚಿತ್ರ್ಯವಿದೆ.

2019ರ ಲೋಕಸಭೆ ಚುನಾವಣೆ ಪೂರ್ವದಲ್ಲಿ ಪ್ರಧಾನಿ ಮೋದಿಯವರು, ಗರಿಷ್ಠ ಶೇ 4ರಷ್ಟು ಜನಸಂಖ್ಯೆ ಇದೆ ಎಂದು ಅಂದಾಜಿಸಲಾದ ಬ್ರಾಹ್ಮಣ, ವೈಶ್ಯ ಸೇರಿದಂತೆ ಐದು ಜಾತಿಗಳಿಗೆ ಶೇ 10ರಷ್ಟು ಮೀಸಲಾತಿಯನ್ನು ಆರ್ಥಿಕವಾಗಿ ಹಿಂದುಳಿದವರ ಹೆಸರಿನಲ್ಲಿ ನೀಡಿದರು. ಹಿಂದುಳಿದವರ, ಪರಿಶಿಷ್ಟ ಜಾತಿ–ಪಂಗಡದವರ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಮುಂದಾದಾಗಲೆಲ್ಲ, ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಕೇಂದ್ರ ಸರ್ಕಾರ ಮುಂದಿಡುತ್ತಿತ್ತು. ಆದರೆ ಪ್ರಬಲ ಜಾತಿಗಳಲ್ಲಿನ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸುವಾಗ ಶೇ 50ರ ಮಿತಿ ಅಡ್ಡಿಯಾಗಲಿಲ್ಲ. ಈ ಜಾತಿಗಳವರ ಹಿಂದುಳಿದಿರುವಿಕೆಯನ್ನು ಖಚಿತಪಡಿಸುವ ಯಾವುದೇ ಅಂಕಿ ಅಂಶಗಳೂ ಸರ್ಕಾರದ ಬಳಿ ಇರಲಿಲ್ಲ. ಹಾಗಿದ್ದರೂ ಮೀಸಲಾತಿ ಸಿಂಧುವಾಯಿತು.


ಕರ್ನಾಟಕದಲ್ಲಿದ್ದ ಬಿಜೆಪಿ ನೇತೃತ್ವದ ಸರ್ಕಾರ ತನ್ನ ಕೊನೆಯ ದಿನಗಳಲ್ಲಿ, ಮುಸ್ಲಿಂ ಸಮುದಾಯಕ್ಕೆ ಇದ್ದ ಶೇ 4ರ ಮೀಸಲಾತಿಯನ್ನು ರದ್ದುಪಡಿಸಿ, ಅದನ್ನು ಒಕ್ಕಲಿಗರು, ಲಿಂಗಾಯತರಿಗೆ ತಲಾ ಶೇ 2ರಷ್ಟು ಹಂಚಿತು. ಪರಿಶಿಷ್ಟ ಪಂಗಡದ ಮೀಸಲಾತಿಯನ್ನೂ ಹೆಚ್ಚಿಸಿತು. ಅದಕ್ಕೆ ಕೂಡ ನಿಖರ ಅಂಕಿ ಅಂಶಗಳು ಇರಲಿಲ್ಲ. ಈಗ ಜಾತಿಗಣತಿಯ ಬಗ್ಗೆ ತಕರಾರು ತೆಗೆದ ಪ್ರಧಾನಿ ಮೋದಿಯವರು ತಮ್ಮದೇ ಪಕ್ಷದ ಆಡಳಿತವಿದ್ದ ರಾಜ್ಯ ಸರ್ಕಾರವೊಂದರ ನೀತಿಯ ಬಗ್ಗೆ ಬಾಯಿಬಿಡಲಿಲ್ಲ.

ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ, ಹೋರಾಟ ನಡೆಸುವುದಾಗಿ ಹೇಳಿ ಮೀಸಲಾತಿ ಪ್ರಮಾಣ ಹೆಚ್ಚಿಸಿಕೊಂಡ ಲಿಂಗಾಯತ, ಒಕ್ಕಲಿಗರ ಸಂಘಗಳೇ ಈಗ ಸಮೀಕ್ಷಾ ವರದಿಯನ್ನು ವಿರೋಧಿಸುತ್ತಿವೆ. ಈ ವರದಿ ಹೊರಬಂದು, ಜಾತಿವಾರು ಜನಸಂಖ್ಯೆ, ರಾಜಕೀಯ, ಔದ್ಯೋಗಿಕ ಪ್ರಾತಿನಿಧ್ಯದ ಮಾಹಿತಿಗಳು ಹೊರಬಂದರೆ ತಮ್ಮ ಪ್ರಾತಿನಿಧ್ಯಕ್ಕೆ ಕುತ್ತು ಬಂದೀತೆಂಬ ಭಯವು ವಿರೋಧಕ್ಕೆ ಕಾರಣ ಎಂಬುದರಲ್ಲಿ ಸಂಶಯ ಬೇಕಿಲ್ಲ.

ವರದಿ ಹೊರಬರಲಿ, ಬಾರದಿರಲಿ ಜಾತಿ ಇರುವುದು, ಅದೇ ಪರಿಗಣನೆಗೆ ಒಳಗಾಗುತ್ತಿರುವುದು ವಾಸ್ತವ. ಜಾತಿ ಇಲ್ಲವೆನ್ನುವವರು, ಜಾತಿ ಹೋಗಬೇಕು ಎನ್ನುವವರು ಜಾತಿಗೊಂದು ಮಠವನ್ನು, ನಿಗಮವನ್ನು ಬೆಂಬಲಿಸುತ್ತಲೇ ಬಂದಿದ್ದಾರೆ. ಇಂತಹ ಹೊತ್ತಿನೊಳಗೆ, ಸಿದ್ದರಾಮಯ್ಯನವರು ಸಾಮಾಜಿಕ– ಆರ್ಥಿಕ ಸಮೀಕ್ಷಾ ವರದಿಯನ್ನು ಬಹಿರಂಗಪಡಿಸಬೇಕು. ಸಂಗ್ರಹಿಸಲಾದ ದತ್ತಾಂಶಗಳು ಸಾರ್ವಜನಿಕವಾಗಿ ಲಭ್ಯವಾಗುವಂತೆಯೂ ನೋಡಿಕೊಳ್ಳಬೇಕು. ಈ ಕೆಲಸವು ಏಕಕಾಲಕ್ಕೆ, ಜಾತಿ ಶ್ರೇಷ್ಠತೆಯನ್ನೇ ಪ್ರತಿಪಾದಿಸುತ್ತಾ ಜಾತಿ ವ್ಯವಸ್ಥೆಯನ್ನು ಪೋಷಿಸಿಕೊಂಡು ಲಾಭ ಗಿಟ್ಟಿಸಿಕೊಂಡ ವೈದಿಕ ಸನಾತನಿಗಳು, ದೇಶದ ತುಂಬೆಲ್ಲ ಜನಾಂಗ ದ್ವೇಷವನ್ನೇ ಬಿತ್ತುತ್ತಾ ತಮ್ಮ ಅಧಿಕಾರದ ವಿಸ್ತರಣೆಗೆ ಹವಣಿಸುತ್ತಿರುವ ಕೋಮುವಾದಿಗಳಿಗೆ ನೀಡುವ ಪೆಟ್ಟೂ ಆಗುತ್ತದೆ.

ಜನವಿರೋಧಿ ಶಕ್ತಿಗಳನ್ನು ಹಿಮ್ಮೆಟ್ಟಿಸುವುದರ ಜತೆಗೆ, ಇಲ್ಲಿಯವರೆಗೆ ಎಲ್ಲ ಸೌಲಭ್ಯಗಳಿಂದ ವಂಚಿತಗೊಂಡ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಕೊಡಿಸುವ ದಾರಿಯೂ, ಕತ್ತಲೆಗೆ ತಳ್ಳಿಸಿಕೊಂಡಿರುವವರಿಗೆ ನೀಡಬಹುದಾದ ದೊಂದಿಯ ಬೆಳಕೂ ಆದೀತು.

ಚುರುಮುರಿ



ಧ್ಯಾನವೂ ಡ್ಯಾನ್ಸೂ...

• ಸುಮಂಗಲಾ

'ನನಗ ಈಗಿಂದೀಗೇ ಉತ್ತರಾಖಂಡಕ್ಕೆ ವಿಮಾನದ ಟಿಕೇಟು ಮಾಡಿಸು. ಮತ್ತ ಈ ಥರಾ ಡ್ರೆಸ್ಸು, ಈ ಥರಾ ಕಾರ್ಪೆಟ್ಟು ಎಲ್ಲಾ ಬೇಕು' ಬೆಕ್ಕಣ್ಣನದು ಬೆಳಗ್ಗೆಯೇ ವರಾತ.

'ಉತ್ತರಾಖಂಡಕ್ಕೆ ಈಗೆದಕ್ಕಲೇ? ಅಲ್ಲಿ ಯಾವಾಗ ನೋಡಿದರೂ ಮೇಘಸ್ಫೋಟ, ಭೂಕುಸಿತ ಅಗತೈತಿ' ಗಾಬರಿಯಾದೆ ನಾನು.

'ನೀ ನೆವಾ ಹೇಳಬ್ಯಾಡ. ನೋಡಿಲ್ಲಿ... ಮೋದಿಮಾಮ ಅಲ್ಲಿ ಪಾರ್ವತಿಕುಂಡದಾಗೆ ಎಷ್ಟ್ ಚಂದ ಪೂಜೆ ಮಾಡಿ, ಧ್ಯಾನ ಮಾಡಲಾಕೆ ಹತ್ಯಾನ. ನಾನೂ ಅಲ್ಲಿಗೆ ಹೋಗಿ, ಹಂಗೆ ಕೂತು ಧ್ಯಾನ ಮಾಡತೀನಿ' ಎಂದು ಮೋದಿಮಾಮನ ಧ್ಯಾನಸ್ಥ ಫೋಟೊ ತೋರಿಸಿತು.

'ಅಲ್ಲಲೇ... ಖರೇ ಖರೇ ಧ್ಯಾನ ಮಾಡೋರು ಫೋಟೊಗ್ರಾಫರ್ ಎದುರಿಗೆ ನಿಲ್ಲಿಸಿಕೆಂಡು, ನಾ ಕಣ್ಣುಮುಚ್ಚಿದಾಗ ಚಂದ ಫೋಟೊ ಹೊಡಿಯಪ್ಪ ಅಂತಾರೇನು? ಧ್ಯಾನ ಮಾಡೋರು, ಸದ್ದುಗದ್ದಲವಿಲ್ಲದೆ ಮಾಡತಾರ'.

ಬೆಕ್ಕಣ್ಣ ಪಕಪಕನೆ ನಕ್ಕಿತು.

'ಹಂಗ ಸದ್ದಿಲ್ಲದ ಧ್ಯಾನ ಮಾಡಿದರೆ ದೇವರಿಗೆ ಹೆಂಗ ತಿಳೀತೈತಿ? ಅಂವನಿಗೇನು ಕನಸು ಬೀಳತಾವೇನು? ಇಂಥವರು ಇಂಥಲ್ಲಿ ಧ್ಯಾನ ಮಾಡಾಕಹತ್ಯಾರ ಅಂತ ಪೇಪರಿನಾಗೆ, ಸೋಷಿಯಲ್ ಮೀಡಿಯಾದಾಗೆ, ಟಿ.ವಿ.ವಳಗ ಎಲ್ಲಾ ಕಡಿಗಿ ಫೋಟೊ, ವಿಡಿಯೊ ಬರಬಕು, ಅಂದ್ರ ದೇವ್ರಿಗೆ ಗೊತ್ತಾಗತೈತಿ'.

'ಹೋಗಲೇ... ಇದಕ್ಕೆಲ್ಲ ನನ್ ಹತ್ರ ರೊಕ್ಕ ಇಲ್ಲ' ಗದರಿದೆ.

'ಹಂಗಾರೆ ನನಗ ಗರ್ಬಾ ಡ್ಯಾನ್ಸ್ ಮಾಡಾಕೆ ಡ್ರೆಸ್ಸು, ಕೋಲಾಟದ ಕೋಲು ಎಲ್ಲ ಕೊಡಿಸು'.

'ಆಕಡಿಗೆ ಮಣಿಪುರ ಹೊತ್ತಿ ಉರಿಯಾಕೆ ಹತ್ತೈತಿ, ನಮ್ ಕರುನಾಡಿನಾಗೆ ಒಂದ್ ಕಡಿಗೆ ಹಸಿಬರ, ಇನ್ನೊಂದ್ ಕಡಿಗೆ ಒಣಬರ. ಯಾವ ಪಕ್ಷ ಬಂದ್ರೂ ರಟ್ಟಿನ ಡಬ್ಬಿವಳಗ ರೊಕ್ಕ ಇಡೋರು ಆರಾಮಾಗೆ ಇರತಾರೆ. ಹಿಂಗ ನೂರಾರು ಚಿಂತಿ ವಿಚಾರ ಬಿಟ್ಟು ನಿನಗ ಈ ಗರ್ಬಾ ಡ್ಯಾನ್ಸ್ ಹುಚ್ಚ್ ಎಲ್ಲಿಂದ ಹಿಡಿತು?'

'ಇದು ಅಂತಿಂಥ ಗರ್ಬಾ ಡ್ಯಾನ್ಸ್ ಅಲ್ಲ... ನಮ್ ಮೋದಿಮಾಮಾನೆ ಇದಕ್ಕ ಸಾಹಿತ್ಯ ಬರೆದಾನ! ನೋಡಿಲ್ಲಿ' ಎಂದು ಯುಟ್ಯೂಬಿನಲ್ಲಿ 'ಗರ್ಬೋ' ವಿಡಿಯೊ ಹಾಕಿ ಕುಣಿಯತೊಡಗಿತು!

ಸಂಗತ

ಬೇಕು 'ಕರ್ನಾಟಕ ಮಾದರಿ' ಕಾನೂನು

ಮರ್ಯಾದೆಗೇಡು ಹತ್ಯೆ ವಿರುದ್ಧ ಜನಾಂದೋಲನವೊಂದು ಪುಟಿದೇಳಬೇಕಾಗಿದೆ. ಕನ್ನಡ ನಾಡಿನ ಹೆಣ್ಣುಮಕ್ಕಳನ್ನು, ದುರ್ಬಲ ಜಾತಿಗಳ ಗಂಡುಮಕ್ಕಳನ್ನು ರಕ್ಷಿಸಬೇಕಿದೆ

• ವಿಕಾಸ್ ಆರ್. ಮೌರ್ಯ

ಮಗಳು ಜನಿಸಿದಾಗ ತಂದೆ–ತಾಯಿಯಲ್ಲಿ ಹೊಸ ಕನಸು ಹುಟ್ಟುತ್ತದೆ. ಅವಳನ್ನು ಎದೆಯ ಮೇಲೆ ಮಲಗಿಸಿಕೊಂಡೇ ರಾತ್ರಿಯಿಡೀ ನಿದ್ದೆ ಮಾಡದೆ, ಹೆಸರಿಗಾಗಿ ಹುಡುಕಾಡಿ, ನಾಮಕರಣಕ್ಕೆ ಸಂಬಂಧಿಕರನ್ನು ಆಹ್ವಾನಿಸಿ, ಅವಳನ್ನು ಶಾಲೆಗೆ ಕಳುಹಿಸಿ, ಪ್ರತಿವರ್ಷ ಹುಟ್ಟುಹಬ್ಬದಂದು ಹೊಸ ಬಟ್ಟೆ ತೊಡಿಸಿ, ಕೇಕ್ ಕತ್ತರಿಸಿ, ದೊಡ್ಡವಳಾದಾಗ ಸಂಭ್ರಮಿಸಿ, ಪರೀಕ್ಷೆಯಲ್ಲಿ ಪಾಸಾದಾಗ ಸಿಹಿ ಹಂಚಿ ಜಾತ್ರೆ ಮಾಡುವ ತಂದೆ–ತಾಯಿ, ವಯೋಸಹಜ ಪ್ರೀತಿಯೆಂಬ ಭಾವಕ್ಕೆ ಅವಳು ಸ್ಪಂದಿಸಿದೊಡನೆ ವ್ಯಘ್ರರಾಗಿಬಿಡುತ್ತಾರೆ!

ಆಕೆ ಪ್ರೀತಿಸಿದ ಹುಡುಗ ದುರ್ಬಲ ಜಾತಿಯವನಾಗಿದ್ದರೆ, ಅದರಲ್ಲೂ ದಲಿತನಾಗಿದ್ದರಂತೂ ಸ್ವಂತ ಮಗಳನ್ನೇ ವಿಷವುಣಿಸಿ, ನೇಣು ಹಾಕಿ, ಕತ್ತು ಕೊಯ್ದು, ಬೆಂಕಿ ಹಚ್ಚಿ ಕೊಂದು ಹಾಕುತ್ತಾರಲ್ಲ! ಇಂತಹ ಭೀಕರ ಹತ್ಯೆಗಳು 'ಮರ್ಯಾದಾ ಹತ್ಯೆ'ಗಳಲ್ಲ, 'ಮರ್ಯಾದೆಗೇಡು ಹತ್ಯೆ'ಗಳು.

ಸ್ವತಃ ಪ್ರೇಮದ ಭಾವದಲ್ಲಿ ಮಿಂದೇಳುವ, ಪ್ರೇಮಕಥೆಯ ಸಿನಿಮಾಗಳನ್ನು ಮೊದಲ ದಿನವೇ ನೋಡಲು ಟಿಕೆಟ್‌ಗಾಗಿ ಹರಸಾಹಸಪಡುವ ಯುವಕರು ತಮ್ಮ ಅಕ್ಕ-ತಂಗಿಯರಿಗೂ ತಮ್ಮಂತೆಯೇ ಹೃದಯವಿದೆ ಎಂಬುದನ್ನು ಮರೆತು, ಜಾತಿ ವಿಕೃತಿ ಮೆರೆಯುವುದನ್ನು ಕಾಣುತ್ತೇವೆ. ಯಾರೇ ಆಗಲಿ, ಜಾತಿಯ ಪ್ರಮಾಣಪತ್ರ ತೋರಿಸಿ ಪ್ರೀತಿ ಮಾಡಲು ಸಾಧ್ಯವೇ?

ಮರ್ಯಾದೆಗೇಡು ಹತ್ಯೆಗಳಿಗೆ ಜಾತಿಪದ್ಧತಿಯೇ ಮೂಲ ಕಾರಣ. ಇಂತಹ ಭೀಕರ-ಅಸಹ್ಯಕರ ಕೃತ್ಯವನ್ನು ತಮ್ಮ 'ಜಾತಿ ಮರ್ಯಾದೆ' ಉಳಿಸಿಕೊಳ್ಳಲು ಮಾಡುತ್ತಿರುವುದಾಗಿ ಹೇಳಿಕೊಳ್ಳುವುದು ಆತಂಕವನ್ನುಂಟು ಮಾಡುತ್ತದೆ. ಇಂತಹ ಹತ್ಯೆಗಳ ವಿರುದ್ಧ ಗಟ್ಟಿಯಾಗಿ ನಿಲ್ಲಬೇಕಿರುವ ನಾಗರಿಕ ಸಮಾಜವು ಮೌನ ವಹಿಸಿರುವುದನ್ನು ಕಂಡರೆ, ಭವಿಷ್ಯದ ಭಾರತದ ಬಗ್ಗೆ ಆತಂಕ ಉಂಟಾಗುತ್ತದೆ.

ಹೆತ್ತ ಮಕ್ಕಳನ್ನೇ ಕೊಲೆ ಮಾಡುವ ಪೋಷಕರ ಜಾತಿಯ ಮುಖಂಡರು ಇಂತಹ 'ಮರ್ಯಾದೆಗೇಡು' ಹತ್ಯೆಗಳನ್ನು ಖಂಡಿಸಿ ಛೀಮಾರಿ ಹಾಕಿದರೆ, ಜಾತಿ ಪ್ರತಿಷ್ಠೆಗೆ ಅಂಟಿಕೊಂಡಿರುವ 'ಮರ್ಯಾದೆ'ಯು ಮುರಿದುಬೀಳುತ್ತದೆ. ಕೋಲಾರ ಜಿಲ್ಲೆಯ ಚಲ್ದಿಗಾನಹಳ್ಳಿಯಲ್ಲಿ ಇತ್ತೀಚೆಗೆ ನಡೆದ ಕೃತ್ಯದಲ್ಲಿ ಹೀಗೆ ಛೀಮಾರಿ ಹಾಕುವ ಪ್ರತಿಭಟನೆ ನಡೆಯಿತು. ಎರಡೂ ಸಮುದಾಯಗಳು ಜಾತಿಯನ್ನು ಮೀರಿ 'ಮಾನವೀಯತೆ' ಪರ ನಿಲ್ಲುವ ಮೂಲಕ ಸಮಾಜಕ್ಕೆ ಮಾದರಿಯಾದವು.

ಜಾತಿಪದ್ಧತಿ ಹಾಗೂ ಅಸ್ಪೃಶ್ಯತೆಯು ಹಿಂದೂ ಸಮಾಜಕ್ಕೆ ಅಂಟಿಕೊಂಡಿರುವ ಅಪಾಯಕಾರಿ ವೈರಸ್. ಸಾಂಕ್ರಾಮಿಕ ರೋಗಗಳು ಬಲಿ ಪಡೆದಿರುವುದಕ್ಕಿಂತಲೂ ಹೆಚ್ಚು ಜೀವಗಳನ್ನು 'ಜಾತಿ ವೈರಸ್' ಬಲಿ ಪಡೆದಿದೆ. ಹಿಂದೂ ಧರ್ಮದ ಸುಧಾರಣೆ ಬಯಸುವವರು 'ಮರ್ಯಾದೆಗೇಡು ಹತ್ಯೆ' ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತಬೇಕಿದೆ. ಪ್ರಬಲ ಜಾತಿಗಳಲ್ಲಿ ಬಹುತೇಕರು ಅಂಬೇಡ್ಕರ್ ಅವರು ಕನಸಿದ 'ಜಾತಿವಿನಾಶ'ಕ್ಕೆ ಬೆನ್ನು ತೋರಿಸಿರುವುದು ಸ್ಪಷ್ಟ. ಜಾತಿವಿನಾಶ ಆಗದೇ ಭಾರತ ಪ್ರಗತಿ ಹೊಂದಲಾರದು ಎಂಬುದನ್ನು ಅವರು ಆದಷ್ಟು ಬೇಗ ತಿಳಿದುಕೊಳ್ಳಬೇಕು. ಕನಿಷ್ಠ ತಮ್ಮ ಜಾತಿ ಸಂಘಟನೆಗಳ ಸಭೆಗಳಲ್ಲಿ 'ಮರ್ಯಾದೆಗೇಡು ಹತ್ಯೆ' ವಿರೋಧಿ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ಹಿಂದೂ ಧರ್ಮದ ಜಾತಿವಾರು ಸ್ವಾಮೀಜಿಗಳು ತಮ್ಮ ಜನರಲ್ಲಿಗೆ ತೆರಳಿ ಜಾಗೃತಿ ಮೂಡಿಸಬೇಕಿದೆ. ಹೆತ್ತ ಮಕ್ಕಳನ್ನು ಕೊಂದು ಉಳಿಸಿಕೊಳ್ಳುವುದನ್ನು ಧರ್ಮವೆಂದು ಭಾವಿಸಿರುವವರಿಗೆ ಬುದ್ಧಿ ಹೇಳಬೇಕಿದೆ.

ಇಂತಹ ಹತ್ಯೆಗಳು ಮುಸ್ಲಿಂ ಸಮುದಾಯ ಮತ್ತು ದಲಿತ ಸಮುದಾಯದೊಳಗೂ ಕಂಡುಬಂದಿವೆ. ಕೋಮುವಾದ ಮತ್ತು ಅಸ್ಪೃಶ್ಯತೆಯಿಂದ ತಾರತಮ್ಯಕ್ಕೆ ಒಳಗಾಗುತ್ತಿರುವ ಈ ಸಮುದಾಯಗಳು ಇಂತಹ ಜೀವವಿರೋಧಿ ಕಳೆಗಳನ್ನು ಆರಂಭದಲ್ಲಿಯೇ ಕಿತ್ತು ಬಿಸಾಕದಿದ್ದರೆ, ತಮ್ಮ ಹಳ್ಳವನ್ನು ತಾವೇ ತೋಡಿಕೊಂಡಂತೆ ಆಗುತ್ತದೆ.



ಕರ್ನಾಟಕದಲ್ಲಿ ಈ ಐದು ತಿಂಗಳಿನಲ್ಲಿ ಐದು ಮರ್ಯಾದೆಗೇಡು ಹತ್ಯೆಗಳು ಸಂಭವಿಸಿವೆ. ಕೋಲಾರ ಜಿಲ್ಲೆಯಲ್ಲಿಯೇ ಮೂರು ಪ್ರಕರಣಗಳು ನಡೆದಿವೆ. ಹೆತ್ತ ಮಗಳನ್ನು ಕೊಲೆ ಮಾಡಿದ ಕುಟುಂಬಗಳಲ್ಲಿ ಕಿಂಚಿತ್ತೂ ಪಶ್ಚಾತ್ತಾಪದ ಭಾವ ಕಂಡುಬಾರದಿರುವುದು ಮತ್ತಷ್ಟು ಆತಂಕವನ್ನು ಉಂಟುಮಾಡುತ್ತದೆ. ಸರ್ವ ಜನಾಂಗದ ಶಾಂತಿಯ ತೋಟವೆಂದು ಬೆನ್ನು ತಟ್ಟಿಕೊಳ್ಳುವ ಕನ್ನಡಿಗರಾದ ನಾವು, ಈ ನಕಾರಾತ್ಮಕ ಬೆಳವಣಿಗೆಯನ್ನು ಬುಡಸಮೇತ ಕಿತ್ತುಹಾಕಲು ಮುಂದಾಗಬೇಕಿದೆ. ಮರ್ಯಾದೆಗೇಡು ಹಂತಕರಿಗೆ ಕಠಿಣ ಶಿಕ್ಷೆ ವಿಧಿಸಲು ಪ್ರತ್ಯೇಕ ಕಾನೂನಿಗಾಗಿ ಸರ್ಕಾರವನ್ನು ಆಗ್ರಹಿಸಬೇಕಿದೆ.

ಇದು ಜಾತಿ ವೈರಸ್‌ಗಳಲ್ಲಿ ಸ್ವಲ್ಪಮಟ್ಟಿಗೆ ಭಯ ಹುಟ್ಟಿಸುತ್ತದಾದರೂ ಸಾಮಾಜಿಕ ಜಾಗೃತಿಗಾಗಿ ಜನಾಂದೋಲನವೊಂದು ಪುಟಿದೆದ್ದು, ಕನ್ನಡ ನಾಡಿನ ಹೆಣ್ಣುಮಕ್ಕಳನ್ನು ಹಾಗೂ ದುರ್ಬಲ ಜಾತಿಗಳ ಗಂಡುಮಕ್ಕಳನ್ನು ರಕ್ಷಿಸಲು ಪಣ ತೊಡಬೇಕಿದೆ. ಅಂತರ್ಜಾತಿ ವಿವಾಹಿತರಿಗೆ ಆಶ್ರಯ, ಆರ್ಥಿಕ ಸಬಲೀಕರಣ, ಭದ್ರತೆಯಂತಹವನ್ನು ಒದಗಿಸುವ ಯೋಜನೆಗಳನ್ನು ರೂಪಿಸಲು ಸ್ವತಃ ಕೈಹಾಕಬೇಕಿದೆ ಹಾಗೂ ಸರ್ಕಾರವನ್ನು ಒತ್ತಾಯಿಸಬೇಕಿದೆ.

'ಕರ್ನಾಟಕ ಮಾದರಿ'ಗಳಿಂದ ಹೆಸರಾಗಿರುವ ಸರ್ಕಾರವು ಮರ್ಯಾದೆಗೇಡು ಹತ್ಯೆ ವಿರೋಧಿ ಕಾನೂನು ಜಾರಿಗೊಳಿಸುವ ಮೂಲಕ ಇಡೀ ದೇಶಕ್ಕೆ ಮತ್ತೊಂದು ಮಾದರಿಯನ್ನು ಹಾಕಿಕೊಡಲಿ.

ವಾಚಕರ ವಾಣಿ

ಸಹಕಾರ ಕ್ಷೇತ್ರ: ಪಾಟೀಲರಿಗೆ ಸಿಗಲಿ ಆದ್ಯತೆ

ಸಹಕಾರ ಕ್ಷೇತ್ರವು ದೇಶ ವಿದೇಶಗಳಲ್ಲಿ ಇಂದು ಅಗಾಧವಾಗಿ ಬೆಳೆದಿದೆ. ಭಾರತದಲ್ಲಿ ಕರ್ನಾಟಕವನ್ನು ಸಹಕಾರ ಕ್ಷೇತ್ರದ ತೊಟ್ಟಿಲು ಎಂದು ಕರೆಯಲಾಗುತ್ತದೆ. ದೇಶದಲ್ಲಿ ಪ್ರಥಮವಾಗಿ ಸಹಕಾರ ಸಂಘವನ್ನು ಸ್ಥಾಪಿಸಿದ ಗದಗ ತಾಲ್ಲೂಕಿನ ಸಿದ್ಧನಗೌಡ ಪಾಟೀಲ ಅವರನ್ನು ಸ್ಮರಿಸುವ ಕೆಲಸ ಆಗಬೇಕು. ಈ ದಿಸೆಯಲ್ಲಿ ರಾಜ್ಯದ ಎಲ್ಲಾ ಸಹಕಾರ ಸಂಘಗಳಲ್ಲಿ ಸಿದ್ಧನಗೌಡ ಪಾಟೀಲರ ಭಾವಚಿತ್ರ ಅಳವಡಿಸುವಂತೆ ಸರ್ಕಾರ ಆದೇಶ ಹೊರಡಿಸಬೇಕು.

ಪಾಟೀಲರ ಸ್ಮರಣಾರ್ಥ ಅಂಚೆಚೀಟಿ ಮತ್ತು ನಾಣ್ಯವನ್ನು ಕೇಂದ್ರ ಸರ್ಕಾರ ಹೊರತರಬೇಕು. ಸಹಕಾರ ಕ್ಷೇತ್ರ ಹಾಗೂ ಸಿದ್ಧನಗೌಡ ಪಾಟೀಲರ ಬಗ್ಗೆ ಶಾಲಾ ಪಠ್ಯದಲ್ಲಿ ಒಂದು ಅಧ್ಯಾಯವನ್ನು ಸೇರಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಮತ್ತು ಸಹಕಾರ ಸಚಿವರು ಗಮನಹರಿಸುವುದು ಒಳಿತು.

ಸಿ.ಪುಟ್ಟಯ್ಯ ಹಂದನಕೆರೆ, ತುಮಕೂರು

ಕಸಾಪ ತಾಲ್ಲೂಕು ಘಟಕಕ್ಕೂ ಚುನಾವಣೆ ನಡೆಯಲಿ

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಮತ್ತು ಜಿಲ್ಲಾ ಘಟಕಗಳ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಚುನಾವಣೆಯ ಮೂಲಕ ನಡೆಯುತ್ತದೆ. ಆದರೆ ತಾಲ್ಲೂಕು ಘಟಕದ ಅಧ್ಯಕ್ಷರನ್ನು ಜಿಲ್ಲಾ ಘಟಕದ ಅಧ್ಯಕ್ಷರು ನೇಮಕ ಮಾಡುವ ಪರಿಪಾಟ ಈಗ ಚಾಲ್ತಿಯಲ್ಲಿದೆ. ಅದರ ಬದಲು, ತಾಲ್ಲೂಕು ಘಟಕದ ಅಧ್ಯಕ್ಷರನ್ನೂ ಚುನಾವಣೆಯ ಮೂಲಕವೇ ಆರಿಸುವಂತೆ ಆಗಬೇಕು. ಅಲಂಕಾರಕ್ಕಾಗಿ ತಮಗೊಂದು ಹುದ್ದೆ ಬೇಕೆಂದು ಬಯಸುವವರು ಜಿಲ್ಲಾ ಘಟಕದ ಅಧ್ಯಕ್ಷರ ಬಳಿ ಲಾಬಿ ಮಾಡಿಯೋ ವಶೀಲಿ ಹಚ್ಚಿಯೋ ತಾಲ್ಲೂಕು ಘಟಕದ ಅಧ್ಯಕ್ಷ ಸ್ಥಾನ ಗಿಟ್ಟಿಸಿಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಸುಮ್ಮನೆ ಯಾರನ್ನೋ ಆ ಸ್ಥಾನದಲ್ಲಿ ತಂದು ಕೂರಿಸಿದರೆ ಏನು ಪ್ರಯೋಜನ? ಕನ್ನಡದ ಕುರಿತು ನಿಜವಾದ ಕಾಳಜಿ ಹಾಗೂ ಕಳಕಳಿಯುಳ್ಳವರು ತಾಲ್ಲೂಕು ಸಾಹಿತ್ಯ ಪರಿಷತ್ತಿಗೆ ಆಯ್ಕೆಯಾಗುವಂತೆ ಆಗಬೇಕು. ಇದಕ್ಕಾಗಿ ಅವಶ್ಯವಿದ್ದರೆ ಪರಿಷತ್ತಿನ ಬೈಲಾದಲ್ಲಿ ತಿದ್ದುಪಡಿ ತರಲಿ.

ವೆಂಕಟೇಶ ಬೈಲೂರು, ಕುಮಟಾ

ಪಕ್ಷಾಂತರಿಗಳಿಗೆ ಪಾಠವಾಗಲಿ, ನಂಬಿಕೆ ಉಳಿಯಲಿ

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ನೀಡಲಾಗಿದ್ದ ಅನುದಾನವನ್ನು ಸರ್ಕಾರ ಹಿಂಪಡೆದಿದ್ದು, ಅದನ್ನು ಮರಳಿ ಪಡೆಯಲು ಕ್ಷೇತ್ರದ ಹಾಲಿ ಶಾಸಕ ಮುನಿರತ್ನ ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಾಲಿಗೆ ಬಿದ್ದಿರುವುದು ಕ್ಷೇತ್ರದ ಜನರಿಗೆ ಮಾಡಿರುವ ಅವಮಾನವೇ ಹೌದು. ಅಂತೆಯೇ ಅನುದಾನ ಹಿಂಪಡೆದಿರುವುದು ಕೂಡಾ ಸರಿಯಲ್ಲ. ಕಾಮಗಾರಿಗಳಲ್ಲಿ ಲೋಪಗಳಿದ್ದರೆ ತನಿಖೆ ಮಾಡಿ ಗುತ್ತಿಗೆದಾರರಿಗೆ ದಂಡ ವಿಧಿಸಲಿ ಮತ್ತು ಅಂತಹವರನ್ನು ಕಪ್ಪುಪಟ್ಟಿಗೆ ಸೇರಿಸಲಿ.

ಮುನಿರತ್ನ ಅವರು ತಾವು ಶಾಸಕರಾಗಿ ಆಯ್ಕೆಯಾಗಿದ್ದ ಕಾಂಗ್ರೆಸ್ಸಿಗೆ ಕೈಕೊಟ್ಟು, ಕಮಲದ ಆಪರೇಷನ್‌ಗೆ ತುತ್ತಾಗಿ ಬಿಜೆಪಿ ಸೇರಿದ್ದರಿಂದ ಕಾಂಗ್ರೆಸ್‌ಗೆ ಅವರ ಮೇಲೆ ಕೋಪ ಇರಬಹುದು. ಈಗ ಮುನಿರತ್ನ ಅವರ ಸ್ಥಿತಿ ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ ಎಂಬಂತೆಯೂ ಆಗಿರಬಹುದು. ಬರೀ ಅಧಿಕಾರಕ್ಕಾಗಿ ಪಕ್ಷಾಂತರ ಮಾಡಿದವರ ಪರಿಸ್ಥಿತಿ ನಿಜಕ್ಕೂ ಶೋಚನೀಯ. ಮಾಡಿದ್ದುಣ್ಣೋ ಮಹರಾಯ ಎಂದರೂ ತಪ್ಪಾಗಲಾರದು. ಹಾಗಾಗಿ, ಮುಂದಿನ ದಿನಗಳಲ್ಲಿ ಆಪರೇಷನ್‌ಗೆ ಒಳಗಾಗುವ ಅಥವಾ ಸ್ವಯಂ ಪಕ್ಷಾಂತರ ಮಾಡಲು ಚಿಂತಿಸುವ ಜನಪ್ರತಿನಿಧಿಗಳಿಗೆ ಇದೊಂದು ಪಾಠವಾಗಲಿ. ಪಕ್ಷದ ತತ್ವ, ಸಿದ್ಧಾಂತಕ್ಕೆ ಬದ್ಧರಾಗಿರಲಿ. ಅಧಿಕಾರಕ್ಕಾಗಿಯೋ ಮಂತ್ರಿಗಿರಿ ಪಡೆಯಲೋ ಪಕ್ಷದಿಂದ ಪಕ್ಷಕ್ಕೆ ಹಾರುವುದನ್ನು ಬಿಡಲಿ. ಆಗ ಮತದಾರರ ನಂಬಿಕೆಯೂ ಉಳಿದೀತು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಲಂಚ ನಿಯಂತ್ರಣಕ್ಕೆ ಬೇಕು ದೃಢಸಂಕಲ್ಪ

ಸಾರ್ವಜನಿಕ ಕ್ಷೇತ್ರದಲ್ಲಿ, ಸರ್ಕಾರದ ಹಣ ಬಿಡುಗಡೆ ಆಗಬೇಕಾದ ಸಂದರ್ಭದಲ್ಲಿ ಕಮಿಷನ್- ಲಂಚ ಎಂಬುದು ಸರ್ವೇ ಸಾಮಾನ್ಯ ಆಗಿಬಿಟ್ಟಿದೆ. ಹನ್ನೆರಡು ವರ್ಷಗಳ ಹಿಂದೆ ನಾನು ನಿವೃತ್ತಿ ಹೊಂದಿದಾಗ ನಿವೃತ್ತಿ ವೇತನ, ಭತ್ಯೆಗಳನ್ನು ಪಡೆದುಕೊಳ್ಳಲು ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಯ ಮುಖಾಂತರ ಪ್ರಸ್ತಾವಗಳನ್ನು ಮಹಾಲೇಖಪಾಲರ ಕಚೇರಿಗೆ ಕಳಿಸಬೇಕಾಗಿತ್ತು. ಅದಕ್ಕಾಗಿ ಆ ಕಚೇರಿಗೆ ಹಲವಾರು ಬಾರಿ ಅಲೆದದ್ದಾಯಿತು. ಲಂಚ ಕೊಡದೆ ಕೆಲಸ ಆಗುವುದಿಲ್ಲ ಎಂದು ಖಾತರಿಯಾಯಿತು. ಒಂದು ದಿನ ಮಧ್ಯಾಹ್ನ ಉಪನಿರ್ದೇಶಕರ ಕಚೇರಿಗೆ ಹೋಗಿ, ಅಲ್ಲಿದ್ದ ಅವರ ಕೊಠಡಿಗೆ ನುಗ್ಗಿ, ಒಂದು ಕುರ್ಚಿಯಲ್ಲಿ ಕೂತು 'ಇವತ್ತು ನನ್ನ ಎಲ್ಲಾ ಬಿಲ್‌ಗಳಿಗೆ ನೀವು ಸಹಿ ಮಾಡಿಕೊಡುವವರೆಗೂ ನಾನು ಈ ಜಾಗ ಬಿಟ್ಟು ಕದಲುವುದಿಲ್ಲ' ಎಂದು ಪಟ್ಟುಹಿಡಿದು ಕೂತೆ. 'ಏನು ಸತ್ಯಾಗ್ರಹನಾ' ಎಂದು ಆ ಮಹಾಶಯ ಸಿಡುಕಿದಾಗ, 'ಏನಾದ್ರೂ ಅಂದುಕೊಳ್ಳಿ' ಅಂದು ಸುಮ್ಮನಾದೆ. ನನ್ನ ದಿಟ್ಟತೆಯನ್ನು ಕಂಡು ದಾರಿ ಕಾಣದೇ ಸಂಬಂಧಪಟ್ಟ ಗುಮಾಸ್ತನನ್ನು ಕರೆಸಿ, ಫೈಲ್ ತರಿಸಿಕೊಂಡು, ಎಲ್ಲಾ ಬಿಲ್‌ಗಳಿಗೂ ಸಹಿ ಮಾಡಿ, ಗೊಣಗುತ್ತಲೇ ನನ್ನ ಕೈಗೆ ಕೊಟ್ಟರು.

ಮುಂದೆ ಮಹಾಲೇಖಪಾಲರಿಂದ ನಿವೃತ್ತಿ ವೇತನ, ಭತ್ಯೆಗಳು ಮಂಜೂರಾಗಿ ಬಂದು, ಅವುಗಳಿಗೆ ಸಂಬಂಧಪಟ್ಟ ಚೆಕ್‌ನಂತಹವನ್ನು ತಾಲ್ಲೂಕು ಖಜಾನಾಧಿಕಾರಿಯಿಂದ ಪಡೆದುಕೊಳ್ಳುವ ಸಂದರ್ಭದಲ್ಲೂ ಇದೇ ವರಸೆಯನ್ನು ಪ್ರಯೋಗಿಸಿ, ಲಂಚ ಕೊಡದೆ ಎಲ್ಲವನ್ನೂ ಪಡೆದೆ. ಪ್ರಾಮಾಣಿಕತೆ ಮತ್ತು ದೃಢಸಂಕಲ್ಪದಿಂದ ಲಂಚದ ಪಿಡುಗನ್ನು ನಿಯಂತ್ರಿಸಬಹುದು ಎಂಬುದು ನನ್ನ ನಂಬಿಕೆ.

ಶಿವರಾಮ್ ಎಚ್.ಎಸ್., ಮೈಸೂರು

ಬೀಳಲಿ ಕಡಿವಾಣ

ನಾವು ತಿಳಿದುಕೊಂಡಿದ್ದು
ಮಂಚ ಮಲಗಲು ಮಾತ್ರ ಎಂದು,
ಆದರೆ ಈಗ ಅರಿತಿದ್ದು
ಅದು ಭ್ರಷ್ಟಾಚಾರದ ಹಣ
ಬಚ್ಚಿಡುವ ಪೆಠಾರಿಯೂ
ಆಗಬಹುದು ಎಂದು,
ಭ್ರಷ್ಟಾಚಾರಕೆ ಕಡಿವಾಣ ಹಾಕದಿದ್ದರೆ
ದೇಶ ಉದ್ಧಾರವಾಗುವುದು ಎಂದು?
ಸ್ವಸ್ಥ ಸಮಾಜದ ಕನಸು
ನನಸಾಗುವುದು ಎಂದು?

ಸುಬ್ರಹ್ಮಣ್ಯ ನಾಡಿಗೇರ್, ಹರಿಹರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಮಾಸ್–ಇಸ್ರೇಲ್ ಸಂಘರ್ಷ

ಕ್ರೌರ್ಯ ಮೆರೆದ ಯುದ್ಧಾಪರಾಧ

ಗಾಜಾ ಮತ್ತು ಗಾಜಾಪಟ್ಟಿಯ ಮೇಲೆ ದಾಳಿ ನಡೆಸುವಾಗಲೆಲ್ಲಾ ಇಸ್ರೇಲ್ ಯುದ್ಧಾಪರಾಧ ಎಸಗಿದೆ, ಎಸಗುತ್ತಿದೆ ಎಂದು ವಿಶ್ವ ಸಂಸ್ಥೆ ಹೇಳಿದೆ. ಆದರೆ, 'ಹಮಾಸ್ ಉಗ್ರರು ಇಸ್ರೇಲ್ ನಾಗರಿಕರ ಮೇಲೆ ದಾಳಿ ನಡೆಸಿದ್ದಾರೆ. ಮಕ್ಕಳನ್ನು ಕೊಂದಿದ್ದಾರೆ' ಎಂದು ಇಸ್ರೇಲ್ ಹೇಳುತ್ತಲೇ ಇದೆ. ಇನ್ನೊಂದೆಡೆ ಇಸ್ರೇಲ್ ದಾಳಿಗೆ ಬಲಿಯಾದ ಮಕ್ಕಳ ಮತ್ತು ನಾಗರಿಕರ ಚಿತ್ರಗಳನ್ನು ಪ್ಯಾಲೆಸ್ಟೀನಿಯನ್ನರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ನಮ್ಮ ನೆಲವನ್ನು ನಮಗೆ ನೀಡಿ ಎಂದು ಆಗ್ರಹಿಸುತ್ತಿದ್ದಾರೆ. ಇದರ ಮಧ್ಯೆ ಇಸ್ರೇಲ್‌ನ ನಡೆಯನ್ನು ಖಂಡಿಸಿ ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾದಲ್ಲಿ ಲಕ್ಷಾಂತರ ಮಂದಿ ಭಾನುವಾರ ಪ್ರತಿಭಟನೆ ನಡೆಸಿದ್ದಾರೆ. ಇಸ್ರೇಲ್‌ಗೆ ನೀಡುತ್ತಿರುವ ಬೆಂಬಲವನ್ನು ವಾಪಸ್ ಪಡೆಯಿರಿ ಎಂದು ತಮ್ಮ ಸರ್ಕಾರವನ್ನು ಒತ್ತಾಯಿಸಿದ್ದಾರೆ

ಪರಸ್ಪರ ದಾಳಿಗಳಲ್ಲಿ ಸತ್ತವರಿಷ್ಟು

ಪ್ಯಾಲೇಸ್ಟೀನಿಯರ ಸಾವಿನ ಸಂಖ್ಯೆ	ವರ್ಷ	ಇಸ್ರೇಲಿಯನ್ನರ ಸಾವಿನ ಸಂಖ್ಯೆ
899	2008	33
1,066	2009	11
95	2010	8
124	2011	11
260	2012	7
39	2013	6
2,329	2014	88
147	2015	26
109	2016	12
77	2017	17
300	2018	13
138	2019	12
30	2020	3
349	2021	11
191	2022	21
2,557	2023*	1,329

8,710 2008ರಿಂದ ಈವರೆಗೆ ಇಸ್ರೇಲ್ ದಾಳಿಯಲ್ಲಿ ಮೃತಪಟ್ಟ ಪ್ಯಾಲೆಸ್ಟೀನಿಯನ್ನರ ಸಂಖ್ಯೆ

1,608 2008ರಿಂದ ಈವರೆಗೆ ಹಮಾಸ್ ದಾಳಿಯಲ್ಲಿ ಮೃತಪಟ್ಟ ಇಸ್ರೇಲಿಗರ ಸಂಖ್ಯೆ

* 2023ರ ಅಕ್ಟೋಬರ್ 14ರವರೆಗೆ

ಪ್ರಜಾವಾಣಿ ವಾರ್ತೆ

'ಅದು 2014ರ ರಂಜಾನ್ ದಿನಗಳು. ಗಾಜಾ ನಗರವನ್ನು ಒಳಗೊಂಡಂತೆ ಇಡೀ ಗಾಜಾಪಟ್ಟಿಯ ಮೇಲೆ ಇಸ್ರೇಲ್‌ನ ವಾಯುಪಡೆ 51 ದಿನ ನಿರಂತರವಾಗಿ ದಾಳಿ ನಡೆಸಿತ್ತು. ಈ ಅವಧಿಯಲ್ಲಿ ಇಸ್ರೇಲ್ ವಾಯುಪಡೆಯೊಂದೇ 6,000ಕ್ಕೂ ಹೆಚ್ಚು ವೈಮಾನಿಕ ದಾಳಿಗಳನ್ನು ನಡೆಸಿತ್ತು. ಈ ಎಲ್ಲಾ ದಾಳಿಗಳಲ್ಲಿ ಅತ್ಯಂತ ನಿಖರವಾಗಿ ಗುರಿ ತಲುಪಬಲ್ಲ ಗುರಿನಿರ್ದೇಶಿತ ಬಾಂಬ್‌ಗಳು ಮತ್ತು ಕಿರು ಕ್ಷಿಪಣಿಗಳನ್ನು ಇಸ್ರೇಲ್ ಬಳಸಿತ್ತು. ದಾಳಿ ಕರಾರುವಕ್ಕಾಗಿ ನಡೆಯಲಿ ಎಂದು ಇಸ್ರೇಲ್ ಉಪಗ್ರಹ ಚಿತ್ರಗಳನ್ನೂ ಬಳಸಿಕೊಂಡಿತ್ತು. ಆದರೆ ಬಹುತೇಕ ದಾಳಿಗಳು ಜನವಸತಿ ಪ್ರದೇಶದ ಮೇಲೆಯೇ ನಡೆದಿದ್ದವು. ಜನರು ಉಪವಾಸ ಮುರಿಯಲು ಒಟ್ಟಿಗೆ ಸೇರಿದ ಮತ್ತು ಇಫ್ತಾರ್ ಕೂಟದ ಸಂದರ್ಭದಲ್ಲಿಯೇ ಈ ದಾಳಿಗಳು ನಡೆದಿದ್ದವು. ಜನರನ್ನು ಗುರಿಯಾಗಿಸಿಕೊಂಡು ವಸತಿ ಪ್ರದೇಶದ ಮೇಲೆ ದಾಳಿ ನಡೆಸಿದ ಕಾರಣಕ್ಕೇ ಈ ದಾಳಿಗಳಲ್ಲಿ ಮೃತಪಟ್ಟ ನಾಗರಿಕರ ಸಂಖ್ಯೆ ಹೆಚ್ಚು ಇರಬಹುದು.

***

'ಮನೆಯಲ್ಲಿ ಇರುವುದಕ್ಕೇ ಭಯವಾಗುತ್ತದೆ. ಹಮಾಸ್‌ಗಳು ಸುರಂಗದೊಳಗಿಂದ ಬಂದು ರಾಕೆಟ್ ದಾಳಿ ನಡೆಸುತ್ತಾರೆ. ಆ ರಾಕೆಟ್‌ಗಳು ನಮ್ಮ ತಲೆಯ ಮೇಲೆ ಎಲ್ಲಿ ಬೀಳುತ್ತದೆಯೋ ಎಂಬ ಭಯದಲ್ಲಿ ಬದುಕಬೇಕಾಗುತ್ತದೆ. ಇಸ್ರೇಲ್ ಸೈರನ್ ಕೂಗಿಸಿ ನಡೆಸುವ ವಾಯುದಾಳಿಗಿಂತ, ಹಮಾಸ್ ಸುರಂಗದ ಮೂಲಕ ನಡೆಸುವ ರಾಕೆಟ್ ದಾಳಿಯೇ ಹೆಚ್ಚು ಭೀಕರವಾಗಿರುತ್ತದೆ ಎಂಬುದು ಇಸ್ರೇಲಿ ಮಹಿಳೆಯ ಆತಂಕ'.

***

ಇಸ್ರೇಲ್–ಪ್ಯಾಲೆಸ್ಟೀನ್‌ನ ಮಧ್ಯೆ 2014ರಲ್ಲಿ ನಡೆದ ಸಂಘರ್ಷದಲ್ಲಿನ ಯುದ್ಧಾಪರಾಧಗಳ ಬಗ್ಗೆ ವಿಶ್ವ ಸಂಸ್ಥೆ ಸಿದ್ಧಪಡಿಸಿದ ಸತ್ಯಶೋಧನಾ ವರದಿಯ ಆಯ್ದ ಭಾಗಗಳಿವು.

ನಾವು ಎಚ್ಚರಿಕೆ ನೀಡಿ, ದಾಳಿ ನಡೆಸುವುದರಿಂದ ಪ್ಯಾಲೆಸ್ಟೀನಿಯನ್ನರಿಗೆ ತಪ್ಪಿಸಿಕೊಳ್ಳಲು ಅವಕಾಶವಿರುತ್ತದೆ ಎಂದು ಇಸ್ರೇಲ್ ರಕ್ಷಣಾ ಸಚಿವಾಲಯ ಹೇಳಿಕೆ ನೀಡಿತ್ತು ಎಂದು 2014ರ ಸತ್ಯಶೋಧನಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಇಸ್ರೇಲ್ ನಡೆಸುತ್ತಿರುವ ದಾಳಿಗಳಿಗೇ ಹೆಚ್ಚು ಜನರು ಬಲಿಯಾಗುತ್ತಿದ್ದಾರೆ ಎಂಬುದನ್ನು ಅಂಕಿಅಂಶಗಳು ಹೇಳುತ್ತವೆ. 2014ರಲ್ಲಿ ನಡೆದ ಸಂಘರ್ಷದಲ್ಲಿ ಹಮಾಸ್ ನಡೆಸಿದ ದಾಳಿಯಲ್ಲಿ ಮೃತಪಟ್ಟ ಇಸ್ರೇಲಿಗಳ ಸಂಖ್ಯೆ 88. ಆದರೆ, ಆಗ ಇಸ್ರೇಲ್ ದಾಳಿಯಲ್ಲಿ ಮೃತಪಟ್ಟ ಪ್ಯಾಲೆಸ್ಟೀನಿಯನ್ನರ ಸಂಖ್ಯೆ 2,239.

ಪ್ಯಾಲೆಸ್ಟೀನ್ ಸಂಘರ್ಷದಲ್ಲಿ ಇಸ್ರೇಲ್, ಅಂತರರಾಷ್ಟ್ರೀಯ ಮಾನವೀಯ ಕಾನೂನುಗಳು ಮತ್ತು ಮಾನವ ಹಕ್ಕುಗಳ ರಕ್ಷಣೆಯ ಬದ್ಧತೆಯನ್ನು ಪಾಲಿಸುತ್ತಿಲ್ಲ. ನಾಗರಿಕರ ಮೇಲೆ, ನಿರಾಶ್ರಿತ ಶಿಬಿರಗಳ ಮೇಲೆ, ಆಸ್ಪತ್ರೆ, ಶಾಲೆಗಳ ಮೇಲೆ ದಾಳಿ ನಡೆಸಿದೆ. ತಾನು ನಡೆಸಿದ ದಾಳಿಗಳ ಬಗ್ಗೆ ಇಸ್ರೇಲ್ ಪಾರದರ್ಶಕವಾಗಿಲ್ಲ. ಅಗತ್ಯ ಮಾಹಿತಿಗಳನ್ನು ಒದಗಿಸುವುದಿಲ್ಲ ಎಂದು ಸಾಮಾನ್ಯ ಸಭೆಯ ಸತ್ಯಶೋಧನಾ ವರದಿಯುದ್ದಕ್ಕೂ ಪದೇ–ಪದೇ ಹೇಳಲಾಗಿದೆ. ಹಮಾಸ್ ಸಹ ನಾಗರಿಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಮೂಲಕ ಯುದ್ಧಾಪರಾಧಕ್ಕೆ ಕಾರಣವಾಗಿದೆ ಎಂದೂ ವರದಿಯಲ್ಲಿ ಹೇಳಿದೆ. ಸಾಮಾನ್ಯ ಸಭೆಯಲ್ಲಿ ಈ ವರದಿಯಲ್ಲಿ ಮಂಡಿಸಿ, ಮತಕ್ಕೆ ಹಾಕಲಾಗಿತ್ತು. ಯುದ್ಧಾಪರಾಧಕ್ಕೆ ಹೊಣೆಗಾರಿಕೆ ನಿಗದಿ ಮಾಡುವುದು ಈ ವರದಿಯ ಉದ್ದೇಶವಾಗಿತ್ತು. ಆದರೆ, ಬ್ರಿಟನ್ ಒಳಗೊಂಡಂತೆ ಐರೋಪ್ಯ ಒಕ್ಕೂಟದ ಎಲ್ಲಾ ದೇಶಗಳೂ ಸೇರಿ ಒಟ್ಟು 41 ದೇಶಗಳು ಈ ವರದಿಯನ್ನು ಒಪ್ಪಿಕೊಂಡವು. ವರದಿಯ ವಿರುದ್ಧ ಮತ ಚಲಾಯಿಸಿದ್ದು ಅಮೆರಿಕ ಮತ್ತು ಭಾರತ ಮಾತ್ರ. ಇಸ್ರೇಲ್ ಯುದ್ಧಾಪರಾಧ ಎಸಗಿಲ್ಲ ಎಂದು ಅಮೆರಿಕ ಹೇಳಿತ್ತು.

ಇದೇ ತಿಂಗಳ ಆರಂಭದಲ್ಲಿ ಹಮಾಸ್, ಇಸ್ರೇಲ್ ಮೇಲೆ ಅಪ್ರಚೋದಿತವಾಗಿ ದಾಳಿ ನಡೆಸಿತು. ಇಸ್ರೇಲ್, ಹಮಾಸ್ ಮೇಲೆ ಯುದ್ಧ ಘೋಷಿಸಿತು. ಆದರೆ, ಗಾಜಾಪಟ್ಟಿಯ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಗಳಿಗೆ ಗುರಿಯಾಗುತ್ತಿರುವವರಲ್ಲಿ ಹೆಚ್ಚಿನ ಸಂಖ್ಯೆ ಮಕ್ಕಳದು ಮತ್ತು ನಾಗರಿಕರದು. ಗಾಜಾವನ್ನು ಬಿಟ್ಟು ಹೋಗಿ ಎಂದು ಪ್ಯಾಲೆಸ್ಟೀನ್ ನಾಗರಿಕರಿಗೆ ಇಸ್ರೇಲ್ ಎಚ್ಚರಿಕೆ ನೀಡಿದೆ. ಆದರೆ, ಗಾಜಾಪಟ್ಟಿಯ ಎಲ್ಲೆಡೆ ದಾಳಿ ನಡೆಸಲಾಗುತ್ತಿದೆ. 2014ರ ಸತ್ಯಶೋಧನಾ ವರದಿಯ ಅಂಗೀಕಾರದ ಸಂದರ್ಭದಲ್ಲಿ, ಇಸ್ರೇಲ್ ಯುದ್ಧಾಪರಾಧ ಎಸಗಿಲ್ಲ ಎಂದು ಹೇಳಿದ್ದ ದೇಶಗಳು ಇಂದೂ ಇಸ್ರೇಲ್ ಪರವಾಗಿ ನಿಂತಿವೆ. ಆ ಗುಂಪಿಗೆ ಈಗ ಬ್ರಿಟನ್ ಸೇರಿದೆ.



ಗಾಜಾಪಟ್ಟಿಯ ದಕ್ಷಿಣ ಭಾಗದಲ್ಲಿರುವ ರಫಾ ನಗರದ ಮೇಲೆ ಇಸ್ರೇಲ್ ಸೇನೆ ನಡೆಸಿದ ದಾಳಿಯಿಂದಾಗಿ ಮನೆಗಳು ಧ್ವಂಸವಾಗಿರುವುದು —ಎಎಫ್‌ಪಿ ಚಿತ್ರ

ಹಮಾಸ್ ಸಹ ಬೇರೆಯಲ್ಲ

- ನಾವು ನಾಗರಿಕರನ್ನು ಗುರಿಮಾಡಿಕೊಂಡೇ ದಾಳಿ ನಡೆಸುತ್ತೇವೆ ಎಂದು ಹಮಾಸ್ ಬಂಡುಕೋರರು ಹೇಳಿದ್ದಾರೆ.ಯುದ್ಧದಲ್ಲಿ ನಾಗರಿಕರನ್ನು ಅಪಹರಿಸಿ, ಒತ್ತೆಯಾಳಾಗಿ ಇರಿಸಿಕೊಳ್ಳಲಾಗುತ್ತದೆ
- ಸಾರ್ವಜನಿಕ ಸ್ಥಳಗಳನ್ನು ಯುದ್ಧಕ್ಕೆ, ದಾಳಿಗೆ ನೆಲೆಯಾಗಿ ಬಳಸಿಕೊಳ್ಳುವಂತಿಲ್ಲ. ಆದರೆ, ಹಮಾಸ್ ಬಂಡುಕೋರರು ಶಾಲೆ, ಮಸೀದಿ, ಆಸ್ಪತ್ರೆಗಳಲ್ಲಿ ಅಡಗಿರುತ್ತಾರೆ. ಜನರ ಮಧ್ಯದಿಂದಲೇ ಅವರು ದಾಳಿ ನಡೆಸುತ್ತಾರೆ ಮತ್ತು ಅಲ್ಲಿಯೇ ಅವರ ಅಡಗುದಾಣ. ಜನರನ್ನೇ ತಮ್ಮ ರಕ್ಷಾ ಕವಚವನ್ನಾಗಿ ಮಾಡಿಕೊಳ್ಳುತ್ತಾರೆ ಎಂದು ಇಸ್ರೇಲ್ ಹಲವು ಆರೋಪಗಳನ್ನು ಮಾಡಿದೆ. ಆದರೆ, ಅದರ ಆರೋಪಗಳಿಗೆ ಯಾವುದೇ ಸಾಕ್ಷ್ಯ ದೊರೆತಿಲ್ಲ ಎಂದು ವಿಶ್ವಸಂಸ್ಥೆ ಹೇಳಿದೆ

ಇಸ್ರೇಲ್‌ಗೆ ನಾಗರಿಕರೇ ಗುರಿ

ಇಸ್ರೇಲ್ ಹಾಗೂ ಹಮಾಸ್ ಬಂಡುಕೋರರ ನಡುವಣ ಯುದ್ಧದಲ್ಲಿ ಎರಡೂ ಕಡೆಯವರಿಗೆ ನಾಗರಿಕರೇ ಮುಖ್ಯ ಗುರಿಯಾಗಿದ್ದಾರೆ. ಗಾಜಾಪಟ್ಟಿಯಲ್ಲಿನ ನಾಗರಿಕ ಮೇಲೆ ಇಸ್ರೇಲ್ ದಾಳಿ ನಡೆಸುತ್ತಲೇ ಬಂದಿದ್ದು, ಯುದ್ಧಾಪರಾಧ ಎಸಗಿದೆ ಎನ್ನುತ್ತದೆ ವಿಶ್ವಸಂಸ್ಥೆ. ವಿಶ್ವಸಂಸ್ಥೆಯ ವರದಿಯ ಮುಖ್ಯಾಂಶಗಳು ಇಂತಿವೆ

- ನಾಗರಿಕರ ಮೇಲೆ ದಾಳಿ ನಡೆಸಬಾರದು ಎಂಬುದು ಯುದ್ಧದ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮ. ಆದರೆ ಇಸ್ರೇಲ್, ನಾಗರಿಕರನ್ನೇ ಗುರಿಮಾಡಿಕೊಂಡು ದಾಳಿ ನಡೆಸುತ್ತದೆ. 'ಮನೆಗಳನ್ನು ತೊರೆಯುವಂತೆ ನಾವು ಜನರಿಗೆ ಎಚ್ಚರಿಕೆ ಸಂದೇಶ ನೀಡಿದ ನಂತರವೇ ದಾಳಿ ಮಾಡುತ್ತೇವೆ. ಆನಂತರ ನಮ್ಮ ಎದುರಿಗೆ ಜನರು ಕಂಡರೆ ಅವರನ್ನು ನಮ್ಮ ಶತ್ರು ಎಂದೇ ಭಾವಿಸಬೇಕಾಗುತ್ತದೆ. ಯಾಕೆಂದರೆ, ಎಚ್ಚರಿಕೆ ನೀಡಿದ ಮೇಲೆಯೂ ಅವರು ಜಾಗ ಬಿಡಲಿಲ್ಲ ಎಂದರೆ ಅವರು ಶತ್ರುವೇ ಆಗಿರುತ್ತಾರೆ' ಎನ್ನುತ್ತದೆ ಇಸ್ರೇಲ್
- ಜನವಸತಿ ಪ್ರದೇಶ, ಕಟ್ಟಡವೇ ಇಸ್ರೇಲ್ ಸೇನೆಯ ಗುರಿ. ವಿದ್ಯುತ್ ಸಂಪರ್ಕ ವ್ಯವಸ್ಥೆ, ನೀರು ಮತ್ತು ನೈರ್ಮಲ್ಯ ವ್ಯವಸ್ಥೆಯ ಮೂಲಸೌಕರ್ಯಗಳ ಮೇಲೆ ಕೂಡ ಇಸ್ರೇಲ್ ದಾಳಿ ನಡೆಸುತ್ತದೆ
- ರಾತ್ರಿ ಅಥವಾ ಬೆಳಗಿನ ಜಾವದಲ್ಲಿ ಯುದ್ಧ ಮಾಡಬಾರದು ಎಂಬ ನಿಯಮವಿದೆ. ಆದರೆ, ಇಸ್ರೇಲ್ ಸೇನೆಯು ಇದೇ ಸಮಯದಲ್ಲಿ ನಾಗರಿಕ ಮೇಲೆ ದಾಳಿ ನಡೆಸುತ್ತದೆ. ಕುಟುಂಬದ ಎಲ್ಲ ಸದಸ್ಯರು ಮನೆಯಲ್ಲಿ ಇರುವ, ಊಟ ಮಾಡುವ ವೇಳೆ, ಮಲಗಿರುವಾಗ ದಾಳಿ ನಡೆಸಲಾಗುತ್ತದೆ ಮತ್ತು ಇಡೀ ಕುಟುಂಬವನ್ನು ಕೊಲ್ಲಲಾಗುತ್ತದೆ. ವಸತಿ ಪ್ರದೇಶದ ಮೇಲೆ ವಿಧ್ವಂಸಕಾರಿ ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಪ್ರಯೋಗಿಸುತ್ತದೆ
- ನಾಗರಿಕರ ಮೇಲೆ ದಾಳಿ ನಡೆಸುವ ಮುನ್ನ ಎಚ್ಚರಿಕೆ ಸಂದೇಶ ನೀಡಬೇಕು ಎಂಬ ನಿಯಮವನ್ನು ಇಸ್ರೇಲ್ ಎಂದಿಗೂ ಪಾಲಿಸಿಲ್ಲ. ಸಣ್ಣ ಯುದ್ಧವಿಮಾನವೊಂದು ಮೊದಲಿಗೆ ಛಾವಣಿಗಳ ಮೇಲೆ ರಬ್ಬರ್ ಗುಂಡುಗಳನ್ನು ಹಾಕುತ್ತದೆ. ಇದಾದ, ಕೆಲವೇ ಸೆಕೆಂಡ್‌ಗಳಲ್ಲಿ ಬಾಂಬ್ ಬಂದು ಬೀಳುತ್ತದೆ. ಬಿಳಿ ಬಾವುಟ ತೋರಿಸಿ ನಾಗರಿಕರು ಓಡಾಡಿದರೂ ಇಸ್ರೇಲ್ ಸೇನೆ ದಾಳಿ ನಡೆಸುತ್ತದೆ
- **ಏನಿದು ಹ್ಯಾನಿಬಲ್ ಡೈರೆಕ್ಟಿವ್?:** ಇಸ್ರೇಲ್‌ನ ಕ್ರೂರ ಯುದ್ಧವಿಧಾನಗಳಲ್ಲಿ ಇದೂ ಒಂದು. ಇಸ್ರೇಲ್ ಸೇನೆಯ ಸೈನಿಕನೊಬ್ಬನನ್ನು ಎದುರಾಳಿಯು ಅಪಹರಿಸಿದ, ಇಸ್ರೇಲ್ ಸೇನೆಯು ಎಂತದ್ದೇ ಪರಿಸ್ಥಿತಿಯಲ್ಲೂ ತನ್ನ ಸೈನಿಕನನ್ನು ವಾಪಸು ತರಲು ಕಾರ್ಯಾಚರಣೆ ನಡೆಸುತ್ತದೆ. ಸಾಧ್ಯವಾಗದಿದ್ದರೆ ಪ್ರತೀಕಾರ ತೀರಿಸಿಕೊಳ್ಳುತ್ತದೆ. ತನ್ನ ಸೈನಿಕನ ಜೀವವನ್ನೂ ಅದು ಲೆಕ್ಕಿಸುವುದಿಲ್ಲ. ಸೈನಿಕನನ್ನು ಅಪಹರಿಸಿ ಇಟ್ಟುಕೊಂಡಿರುವ ಪ್ರದೇಶದ ಮೇಲೆ ನಾಗರಿಕರ ಜೀವವನ್ನೂ ಲೆಕ್ಕಿ ಸದೇ ಇಸ್ರೇಲ್ ತೀವ್ರ ದಾಳಿ ನಡೆಸುತ್ತದೆ

ಗಾಜಾಪಟ್ಟಿಯೆಂಬ ಬಯಲು ಬಂದೀಖಾನೆ



4-5 ಕಿ.ಮೀ. ಗಾಜಾಪಟ್ಟಿಯ ಸರಾಸರಿ ಅಗಲ

40 ಕಿ.ಮೀ. ಗಾಜಾಪಟ್ಟಿಯ ಉದ್ದ

23 ಲಕ್ಷ ಗಾಜಾಪಟ್ಟಿಯ ಜನಸಂಖ್ಯೆ

ವಿಶ್ವಸಂಸ್ಥೆಯು ಗಾಜಾಪಟ್ಟಿಯನ್ನು ಬಂದೀಖಾನೆ ಎಂದು ಕರೆಯುತ್ತದೆ. ಏಕೆ ಹಾಗೆ ಕರೆಯಲಾಗುತ್ತದೆ ಎಂಬುದನ್ನು ಈ ಅಂಶಗಳು ನಿರೂಪಿಸುತ್ತವೆ.

- ಗಾಜಾಪಟ್ಟಿಯ ವಿಸ್ತೀರ್ಣ 365 ಚದರ ಕಿ.ಮೀ. (ಬೆಂಗಳೂರಿನ ವಿಸ್ತೀರ್ಣ 741 ಚದರ ಕಿ.ಮೀ.). ಇದರಲ್ಲಿ ಶೇ 40ರಷ್ಟು ಕೃಷಿಭೂಮಿಯೂ ಇದೆ. ಇಷ್ಟು ಸಣ್ಣ ಪ್ರದೇಶದಲ್ಲಿ 23 ಲಕ್ಷದಷ್ಟು ಜನರು ವಾಸಿಸುತ್ತಿದ್ದಾರೆ. ಈ ಪ್ರದೇಶವು 52 ಕಿ.ಮೀ.ನಷ್ಟು ಉದ್ದದ ಭೂಗಡಿ ಹೊಂದಿದೆ. ಗಡಿ ಉದ್ದಕ್ಕೂ 18 ಅಡಿ ಎತ್ತರದ ಬೇಲಿಯನ್ನು ಇಸ್ರೇಲ್ ನಿರ್ಮಿಸಿದೆ
- ಗಾಜಾಪಟ್ಟಿಗೆ ನೀರು, ವಿದ್ಯುತ್ ಮತ್ತು ಆಹಾರ ಪದಾರ್ಥವು ಇಸ್ರೇಲ್ ಮೂಲಕವೇ ಪೂರೈಕೆಯಾಗಬೇಕು. ಇವುಗಳ ಪೂರೈಕೆ ಮೇಲೆ ಇಸ್ರೇಲ್ ಆಗಾಗ್ಗೆ ನಿರ್ಬಂಧ ಹೇರುತ್ತದೆ. ಈಗಲೂ ಅಂತಹ ನಿರ್ಬಂಧ ಹೇರಿದೆ. ವಿಶ್ವಸಂಸ್ಥೆಯು ಆಹಾರ, ಔಷಧ ಪೂರೈಸುವುದಕ್ಕೂ ಇಸ್ರೇಲ್ ಬಿಡುತ್ತಿಲ್ಲ
- ಗಾಜಾಪಟ್ಟಿಯಲ್ಲಿರುವ ಪ್ಯಾಲೆಸ್ಟೀನಿಯನ್ ಕೂಲಿಕಾರರು ಕೆಲಸಕ್ಕಾಗಿ ಪ್ರತಿದಿನ ಇಸ್ರೇಲ್‌ಗೆ ಬರಬೇಕು. ಗಡಿಯಲ್ಲಿ ತಪಾಸಣೆ ಮಾಡಿ ಅವರನ್ನು ಇಸ್ರೇಲ್‌ನೊಳಕ್ಕೆ ಬಿಡಲಾಗುತ್ತದೆ. ಸಂಜೆ ಅವರು ವಾಪಸಾಗಬೇಕು. ಇಲ್ಲದಿದ್ದಲ್ಲಿ ಅವರನ್ನು ಜೈಲಿಗೆ ಹಾಕಲಾಗುತ್ತದೆ. ಸಂಘರ್ಷದ ಸಂದರ್ಭದಲ್ಲಿ ಗಡಿದಾಟಲು ಇಸ್ರೇಲ್ ಬಿಡುವುದೇ ಇಲ್ಲ. ಆಗ ಪ್ಯಾಲೆಸ್ಟೀನ್‌ನ ಬಡ ಕೂಲಿಕಾರರು ಕೆಲಸ ಮತ್ತು ದುಡಿಮೆ ಇಲ್ಲದೆ ಹಸಿವಿನಿಂದ ಇರಬೇಕಾಗುತ್ತದೆ
- ಗಾಜಾಪಟ್ಟಿಯ ದಕ್ಷಿಣದಲ್ಲಿ ಈಜಿಪ್ಟ್ ಗಡಿ ಇದೆ. ಪ್ಯಾಲೆಸ್ಟೀನಿಯನ್ನರು ಆ ಗಡಿಯನ್ನು ದಾಟದಂತೆಯೂ ಇಸ್ರೇಲ್ ನೋಡಿಕೊಳ್ಳುತ್ತದೆ

ಕರಪತ್ರಗಳು, ರೇಡಿಯೊ ಮುಂತಾದವುಗಳ ಮೂಲಕ ಎಚ್ಚರಿಕೆ ನೀಡಲಾಗುತ್ತದೆ ಹೌದು. ಆದರೆ, ನಾವು ಹೋಗುವುದಾದರೂ ಎಲ್ಲಿಗೆ. ಎಲ್ಲಾ ಕಡೆಯಿಂದಲೂ ದಾಳಿಗಳು ನಡೆಯುತ್ತವೆ. ಸುರಕ್ಷಿತ ಸ್ಥಳ ಎಂದು ತಿಳಿದು ಅಲ್ಲಿಗೆ ಹೋದರೆ, ಅಲ್ಲಿ ಅದಾಗಲೇ ಸಾವಿರಾರು ಜನರು ಬಂದು ಸೇರಿಸುತ್ತಾರೆ. ಇದೇ ಕಾರಣಕ್ಕೆ ಎಲ್ಲಿಗೆ ಹೋಗುವುದು ಎಂದು ತಿಳಿಯದೇ ನಾವು ನಮ್ಮ ಮನೆಗಳಲ್ಲಿಯೇ ಉಳಿದುಕೊಂಡು ಬಿಡುತ್ತೇವೆ' ಎನ್ನುತ್ತಾರೆ ಗಾಜಾಪಟ್ಟಿಯ ಜನರು. ಗಾಜಾದ ಶೇ 44ರಷ್ಟು ಪ್ರದೇಶದ ಜನರ ಸ್ಥಿತಿ ಇದೇ ರೀತಿ ಇದೆ

ಆಧಾರ: ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸತ್ಯಶೋಧನಾ ವರದಿ–2014, ಸತ್ಯಶೋಧನಾ ವಿಸ್ತೃತ ವರದಿ–2015, ವಿಶ್ವಸಂಸ್ಥೆಯ 'ಪ್ಯಾಲೆಸ್ಟೀನ್–ಇಸ್ರೇಲ್ ಸಂಘರ್ಷ ದತ್ತಾಂಶ ಡ್ಯಾಶ್‌ಬೋರ್ಡ್', ರಾಯಿಟರ್ಸ್, ಎಎಫ್‌ಪಿ


ಸಿನಿ ಬಿಟ್ಸ್

'ಬಸ್ರಿಕಟ್ಟೆ'ಯಲ್ಲಿ ಭಯಾನಕ ಜಗತ್ತು!

ಚಿಕ್ಕಮಗಳೂರು ಜಿಲ್ಲೆಯ 'ಬಸ್ರಿಕಟ್ಟೆ' ಮಲೆನಾಡಿಗರಿಗೆ ಚಿರಪರಿಚಿತ ಊರು. ಇದೇ ಊರನ್ನು ಶೀರ್ಷಿಕೆಯಾಗಿಸಿಕೊಂಡಿರುವ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಯುವ ನಿರ್ದೇಶಕ ವೈಭವ್ ಎಂ 'ಬಸ್ರಿಕಟ್ಟೆ'ಗೆ ಆ್ಯಕ್ಷನ್ ಕಟ್ ಹೇಳಿದ್ದು, ಗೀತಾಂಜಲಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ಪ್ರಶಾಂತ್ ಎನ್ ಪೈ ಈ ಚಿತ್ರವನ್ನು ನಿರ್ಮಿಸಿದ್ದಾರೆ.

'ಸಾಮಾನ್ಯವಾಗಿ ಹಾರರ್ ಸಿನಿಮಾ ಎಂದಾಕ್ಷಣ ಕಾಡು, ಕತ್ತಲೆ, ದೆವ್ವ...ಹೀಗೆ ಅನೇಕ ಅಂಶಗಳು ಕಣ್ಮುಂದೆ ಬರುತ್ತವೆ. ಆದರೆ, ಬಸ್ರಿಕಟ್ಟೆ ಸಿನಿಮಾ ಕೊಂಚ ವಿಭಿನ್ನ. ಸಸ್ಪೆನ್ಸ್- ಹಾರರ್ ಸಿನಿಮಾವಾದರೂ ರಿಯಲಿಸ್ಟಿಕ್ ಆಗಿ ಮೂಡಿಬಂದಿದೆ.ನವೆಂಬರ್ 3 ರಂದು ಸಿನಿಮಾ ತೆರೆ ಕಾಣಲಿದೆ' ಎಂದರು ನಿರ್ದೇಶಕ ಪ್ರಶಾಂತ್.

'ಕಿರಗೂರಿನ ಗಯ್ಯಾಳಿಗಳು' ಸೇರಿದಂತೆ ಅನೇಕ ಸಿನಿಮಾಗಳಲ್ಲಿ ನಟಿಸಿರುವ ರಾಹುಲ್ ಮಾದೇವ್ ನಾಯಕ. 'ಮುಂದಿನ ನಿಲ್ದಾಣ' ಸಿನಿಮಾ ಖ್ಯಾತಿಯ ಅನನ್ಯ ಕಶ್ಯಪ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಬಲರಾಜವಾಡಿ, ಕಿರಣ್ ನಾಯ್ಕ್, ಸಿದ್ಲಿಂಗು ಶ್ರೀಧರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಅಶ್ವಿನ್ ಕೆನಡಿ ಛಾಯಾಗ್ರಹಣ, ಕದ್ರಿ ಮಣಿಕಾಂತ್ ಸಂಗೀತ ಹಾಗೂ ಉಮೇಶ್ ಸಂಕಲನ ಈ ಚಿತ್ರಕ್ಕಿದೆ. ❖



ಅನನ್ಯ ಕಶ್ಯಪ್

ಹಾರರ್ ಚಿತ್ರದಲ್ಲಿ ಪ್ರಿಯಾಂಕಾ



ಲೋಹಿತ್, ಪ್ರಿಯಾಂಕಾ ಉಪೇಂದ್ರ, ರವಿರಾಜ್


ಪ್ರಿಯಾಂಕಾ ಉಪೇಂದ್ರ ಅವರ ಹಾರರ್ ಸಿನಿಮಾ 'ಮಮ್ಮಿ' ಉತ್ತಮ ಯಶಸ್ಸು ಕಂಡಿತ್ತು. ಅದೇ ಚಿತ್ರತಂಡದಿಂದ ನಂತರ 'ದೇವಕಿ' ಸಿನಿಮಾ ಬಂದಿದ್ದು, ಉಪೇಂದ್ರ ಪುತ್ರಿಯೂ ಅದರಲ್ಲಿ ನಟಿಸಿದ್ದರು. ಇದೀಗ ನಿರ್ದೇಶಕ ಲೋಹಿತ್ ಜೊತೆಗೂಡಿ ನಟಿ ಪ್ರಿಯಾಂಕಾ ಮತ್ತೊಂದು ಹಾರರ್ ಸಿನಿಮಾದ ಚಿತ್ರೀಕರಣ ಮುಗಿಸಿದ್ದಾರೆ. ಚಿತ್ರದೊಂದಿಗೆ ರಾಧಿಕಾ ಕುಮಾರಸ್ವಾಮಿಯವರ ಸಹೋದರ ರವಿರಾಜ್ ನಿರ್ಮಾಪಕರಾಗಿದ್ದಾರೆ.

'ಇದೊಂದು ಪ್ರಯೋಗಾತ್ಮಕ ಚಿತ್ರ. ಕನ್ನಡದಲ್ಲಿ ಈವರೆಗೆ ಮಾಡಿರದ ಪ್ರಯೋಗವೊಂದು ಈ ಚಿತ್ರದಲ್ಲಾಗಿದೆ. ಪ್ರೇಕ್ಷಕರಿಗೆ ಅತ್ಯಂತ ಭಯಾನಕ ಅನುಭವ ನೀಡುವ ಹಾರರ್ ಜಾನರ್‌ನ ಕಥೆಯಾಗಿದ್ದು, ಈಗಾಗಲೇ ಚಿತ್ರೀಕರಣ ಪೂರ್ಣಗೊಂಡಿದೆ. ಉಳಿದ ಮಾಹಿತಿಗಳನ್ನು ಶೀಘ್ರದಲ್ಲಿಯೇ ಹಂಚಿಕೊಳ್ಳುತ್ತೇವೆ' ಎಂದು ನಿರ್ದೇಶಕ ಲೋಹಿತ್ ತಿಳಿಸಿದ್ದಾರೆ.

'ಅ.17ರಂದು ಉಪೇಂದ್ರ ಚಿತ್ರದ ಶೀರ್ಷಿಕೆ ಬಿಡುಗಡೆಗೊಳಿಸಲಿದ್ದಾರೆ. ಬಹುತೇಕ 'ಮಮ್ಮಿ' ಚಿತ್ರತಂಡವೇ ತಾಂತ್ರಿಕ ವರ್ಗದಲ್ಲಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ' ಎಂದು ಚಿತ್ರತಂಡ ಹೇಳಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ನಿಜವಾದ ನಾಯಕತ್ವ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಇದು ಎಪಿಜೆ ಅಬ್ದುಲ್ ಕಲಾಮ್ ಅವರು ಒಂದು ಸಂದರ್ಶನದಲ್ಲಿ ವಿವರಿಸಿದ ನೈಜ ಘಟನೆ. 1979ರಲ್ಲಿ ಕಲಾಂರವರು ಇಸ್ರೊದಲ್ಲಿ ವಿಜ್ಞಾನಿಯಾಗಿದ್ದ ಸಂದರ್ಭ. ಆಗ ಇವರ ನೇತೃತ್ವದಲ್ಲಿ ಎಸ್‌ಎಲ್‌ವಿ-3 ರಾಕೆಟ್ ಅನ್ನು ಅಂತರಿಕ್ಷಕ್ಕೆ ಉಡಾವಣೆ ಮಾಡಲಾಗುತ್ತದೆ. ಆದರೆ ತಾಂತ್ರಿಕ ದೋಷದಿಂದ ರಾಕೆಟ್ ಬಂಗಾಳಕೊಲ್ಲಿಯಲ್ಲಿ ಪತನಗೊಳ್ಳುತ್ತದೆ. ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ವಿವರಣೆ ನೀಡುವ ಸಂದರ್ಭ ಬರುತ್ತದೆ. ಆಗ ಮಾಧ್ಯಮದವರು ದೇಶದ ದುಡ್ಡನ್ನು ವೃಥಾ ವ್ಯರ್ಥ ಮಾಡಿ ಬಂಗಾಳಕೊಲ್ಲಿಗೆ ಸುರಿದಿರಿ ಎಂದು ನಮ್ಮನ್ನು ಖಂಡಿತವಾಗಿಯೂ ದೂಷಿಸುತ್ತಾರೆ ಎಂಬ ಅಳುಕಿನಲ್ಲಿರುತ್ತಾರೆ ಕಲಾಂ.

ಆಗ ಇಸ್ರೊದ ಅಧ್ಯಕ್ಷರಾಗಿದ್ದ ಕ್ಯಾಪ್ಟನ್ ಸತೀಶ್ ಧವನ್ ಪತ್ರಿಕಾಗೋಷ್ಠಿಯನ್ನು 'ನಾನು ಎದುರಿಸುತ್ತೇನೆ' ಎಂದು ತಮ್ಮ ತಂಡದವರಿಗೆ ಧೈರ್ಯ ತುಂಬಿ ಮಾಧ್ಯಮದವರ ಮುಂದೆ ಅವರನ್ನು ಕರೆ ತರುತ್ತಾರೆ. ಹಾಗೂ ಅಲ್ಲಿ ಬರುವ ತೀಕ್ಷ್ಣ ಪ್ರಶ್ನೆಗಳಿಗೆ ಸಮರ್ಥವಾಗಿ ಉತ್ತರಿಸುತ್ತಾ, ತಮ್ಮ ವಿಜ್ಞಾನಿಗಳ ಕಾರ್ಯಕ್ಷಮತೆಯ ಕುರಿತು ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿ ಅವರನ್ನು ಸಮರ್ಥಿಸಿಕೊಳ್ಳುತ್ತಾರೆ.

ಅಂತೆಯೇ 1980ರಲ್ಲಿ ಉಡಾವಣೆ ಯಶಸ್ವಿಯಾಗಿ ನೆರವೇರುತ್ತದೆ. ಈ ಬಾರಿ ಸತೀಶ್ ಧವನ್ ಅವರು ಅಬ್ದುಲ್ ಕಲಾಂ ಹಾಗೂ ಅವರ ತಂಡದ ಪ್ರಮುಖರನ್ನು ಕರೆದು 'ಈ ಬಾರಿ ಪತ್ರಿಕಾಗೋಷ್ಠಿಯನ್ನು ನೀವೇ ಎದುರಿಸಿ ಹಾಗೂ ನಮ್ಮ ಯಶಸ್ಸಿನ ವಿವರಗಳನ್ನು ಮಾಧ್ಯಮದವರಿಗೆ ನೀಡಿ' ಎನ್ನುತ್ತಾರೆ. ಇದೇ ಒಬ್ಬ ಶ್ರೇಷ್ಠ ನಾಯಕನ ಗುಣ ಎಂಬುದಾಗಿ ಅಬ್ದುಲ್ ಕಲಾಂ ಬಣ್ಣಿಸುತ್ತಾರೆ.

ಪರಿಣಾಮಕಾರಿ ನಾಯಕ ವೈಫಲ್ಯ ಎದುರಾದಾಗ ಅದನ್ನು ತನ್ನ ತಂಡದ ಸದಸ್ಯರ ಮೇಲೆ ಹೊರಿಸಿ ಪಲಾಯನ ಮಾಡದೇ, ಅದರ ಜವಾಬ್ದಾರಿಯನ್ನು ತಾನೇ ಹೊರುತ್ತಾನೆ. ಹಾಗೆಯೇ ಯಶಸ್ಸು ಸಿಕ್ಕಾಗ ಅದು ತನ್ನಿಂದ ಮಾತ್ರ ಲಭಿಸಿದ್ದು ಎಂಬ ಸ್ವಾರ್ಥ ಭಾವನೆಯಿಂದ ಯೋಚಿಸದೇ ಯಶಸ್ಸಿನ ಶ್ರೇಯವನ್ನು ತನ್ನ ಇಡೀ ತಂಡಕ್ಕೆ ಹಂಚುತ್ತಾನೆ. ನಾಯಕತ್ವವೆಂದರೆ ಅದು ಅಧಿಕಾರ ಹಾಗೂ ಅದರ ಬಲದಿಂದ ತನ್ನ ಕೈಕೆಳಗಿನವರನ್ನು ನಿಯಂತ್ರಣ ಮಾಡುವುದಕ್ಕೆ ಸೀಮಿತವಲ್ಲ. ಸೋಲು ಗೆಲುವುಗಳೆರಡಕ್ಕೂ ಸರಿ ಸಮಾನವಾಗಿ ಹೆಗಲೊಡ್ಡುವವನೇ ನಿಜವಾದ ನಾಯಕ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಅಕ್ಟೋಬರ್ 16, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ದ್ವಿತೀಯ ಗಂ. 25-14 ನಕ್ಷತ್ರ: ಸ್ವಾತಿ ಗಂ. 19-35 ಯೋಗ: ವಿಷ್ಕಂಭ ಗಂ 10-03 ಕರಣ: ಬಾಲವ ಗಂ. 12-57, ಕನ್ಯಾ ಮಾಸದ 29 ನೇ ದಿನ, ಮಳೆನಕ್ಷತ್ರ: ಚಿತ್ರ 2. ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-25 ಸೂರ್ಯಾಸ್ತ : 06-08, ಮುಸ್ಲಿಂ ದಿನಾಂಕ : 30 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 3, 5

ಮೇಷ: ವಿವಾಹದ ವಿಚಾರದಲ್ಲಿ ಇನ್ನೊಮ್ಮೆ ಯೋಚಿಸಿ ತೀರ್ಮಾನಿಸಿರಿ. ಖರ್ಚು ವೆಚ್ಚಗಳಲ್ಲಿ ಮಿತ ವ್ಯಯ ಸಾಧಿಸಲು ಪ್ರಯತ್ನಿಸಿ. ಋಣ ಮುಕ್ತರಾಗಲು ಶ್ರಮಿಸಿ. ಬಹು ದಿನದ ನಂತರ ಆರೋಗ್ಯ ಸುಧಾರಿಸಿ ಮನಸ್ಸಿಗೆ ನೆಮ್ಮದಿ ಸಿಗುವುದು.

ವೃಷಭ: ಪೋಷಕರಿಂದ ಅಥವಾ ಹಿರಿಯರಿಂದ ಯಾವುದೇ ವಿಷಯಗಳನ್ನು ಮುಚ್ಚಿಡುವುದು ಸರಿಯಲ್ಲ. ಇನ್ನೊಬ್ಬರಿಗೆ ಉಪಕಾರ ಮಾಡಲು ಹೋಗಿ ನೀವು ಸಮಸ್ಯೆಯಲ್ಲಿ ಸಿಲುಕುವಂತೆ ಆಗಬಹುದು. ಜೋಪಾನವಾಗಿರಿ.

ಮಿಥುನ: ದೇವರ ದಯೆಯಿಂದ ಕುಟುಂಬದಲ್ಲಿ ಸಾಮರಸ್ಯ ಅಧಿಕವಾಗಿ ಇರುತ್ತದೆ. ಸಾಮಾಜಿಕ ಕಾರ್ಯದಲ್ಲಿ ಆಸಕ್ತಿ ಹೆಚ್ಚುವುದು. ಹೀಯಾಳಿಸುವ ಬುದ್ಧಿಗೆ ಪೂರ್ಣವಿರಾಮ ಹೇಳುವುದು ಅಭಿವೃದ್ಧಿಗೆ ಕಾರಣವಾಗುತ್ತದೆ.

ಕರ್ಕಾಟಕ: ಉತ್ತಮ ಸಂಧಾನಕಾರರಾಗಿರುವ ನಿಮಗೆ ಇಂದಿನ ಸಮಸ್ಯೆ ಕಬ್ಬಿಣದ ಕಡಲೆಯಾಗಬಹುದು. ಅಂಥ ಪ್ರಸಂಗದಲ್ಲಿ ತಾಳ್ಮೆ ಕಳೆದುಕೊಳ್ಳಬೇಡಿ. ವ್ಯಾಪಾರಸ್ಥರಿಗೆ ಗುಣಮಟ್ಟಕ್ಕೆ ಪ್ರಾಮುಖ್ಯತೆ ಕೊಡುವ ಬಗ್ಗೆ ಗಮನವಿರಲಿ.

ಸಿಂಹ: ಕಾರ್ಯಗಳಲ್ಲಿ ಪ್ರಾಮಾಣಿಕತೆ, ಸತ್ಯ ನುಡಿಯನ್ನು ಅಳವಡಿಸಿಕೊಳ್ಳಿರಿ. ಭಾವನೆಗಳಿಗೆ ಬೆಲೆ ಕೊಡುವ ಸಂಗಾತಿ ಸಿಕ್ಕಿರುವುದರಿಂದ ಸಂತೋಷ ಇಮ್ಮಡಿ. ಕೌಟುಂಬಿಕ ವಿಷಯದಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ ಭೀತಿ ದೂರಾಗುತ್ತದೆ.

ಕನ್ಯಾ: ನೂತನ ವ್ಯವಹಾರ ಪ್ರಾರಂಭದ ಬಗ್ಗೆ ತಿಳಿದವರಲ್ಲಿ ಸಲಹೆ ಪಡೆಯುವುದು ಸನ್ಮಾರ್ಗವನ್ನು ತೋರಿಸಿಕೊಡುತ್ತದೆ.ಸಹಚರರ, ಕುಟುಂಬದ ಸದಸ್ಯರ ಹಿತಾಸಕ್ತಿಗೆ ಆದ್ಯತೆ ಇರಲಿ. ಮಹಾಗಣಪತಿಯನ್ನು ಆರಾಧಿಸಿ.

ತುಲಾ: ಹಿರಿಯರ ಆರೋಗ್ಯ ಸುಧಾರಿಸುವುದರಿಂದ ಹೆಚ್ಚಿನ ಸಂತಸ. ಈ ದಿನ ಸ್ನೇಹಿತರೊಂದಿಗೆ ಭೂಮಿ ಖರೀದಿಯ ಪ್ರಯತ್ನ ನಡೆಸುವುದು ನಷ್ಟ ತಪ್ಪಿಸುತ್ತದೆ. ಮನೆಯಲ್ಲಿ ಹೊಂದಾಣಿಕೆ ಅಗತ್ಯ ಎನಿಸಲಿದೆ.

ವೃಶ್ಚಿಕ: ಕೆಲಸಕ್ಕೆ ಪುನಃ ಪುನಃ ವಿಘ್ನ ಉಂಟಾಗುವುದು ತಯಾರಿಕೆಯ ಕೊರತೆಯನ್ನು ಸೂಚಿಸುತ್ತದೆ. ಮೇಲಧಿಕಾರಿಗಳಿಂದ ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ. ದೇಹಾಯಾಸ ನಿರಾಸಕ್ತಿ ಮೂಡಿಸುತ್ತದೆ.

ಧನು: ತುಮಲಗಳನ್ನು ನಿಮ್ಮ ಮನಸ್ಸಿಗೆ ಹತ್ತಿರವಾದವರಲ್ಲಿ ಹೇಳಿಕೊಳ್ಳುವುದರಿಂದ ಕಡಿಮೆಯಾಗುವುದು. ಆಪ್ತರ ಹಿತಾಸಕ್ತಿಗಳಿಗೆ ಒತ್ತಾಸೆಯೂ ಇರಲಿ. ಮಾನಸಿಕವಾದ ಕೊರಗುಗಳಿಗೆ ಅಂತಿಮ ಹಾಡಿ.

ಮಕರ: ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಸಂಗಾತಿಯಲ್ಲಿ ಒಪ್ಪಿಗೆ ಪಡೆಯಿರಿ. ಯಾವುದಾದರೂ ವಿಷಯಗಳನ್ನು ಗೌಪ್ಯವಾಗಿ ಇರಿಸಿದಲ್ಲಿ ಭವಿಷ್ಯದಲ್ಲಿ ತೊಂದರೆ ಅನುಭವಿಸುವಂತೆ ಆಗುವುದು.

ಕುಂಭ: ಇಂದು ನಡೆಯುವ ಕೆಲವು ಸೂಕ್ಷ್ಮವಾದ ಸನ್ನಿವೇಶಗಳು ಸಂಕುಚಿತ ಮನೋಭಾವನೆಯನ್ನು ದೂರಮಾಡಿ ಎಲ್ಲವನ್ನು ಹಾಗೂ ಎಲ್ಲರನ್ನು ಸಹ ಎದುರಿಸುವ ಮನೋಸ್ಥೈರ್ಯ ತಂದು ಕೊಡುವುದು.

ಮೀನ: ಒಂದೇ ವಿಷಯದಲ್ಲಿ ಹಲವರ ಸಲಹೆಯನ್ನು ಕೇಳುವುದು ಸರಿಯಾದರೂ ಅದು ಹಲವು ಗೊಂದಲಗಳನ್ನು ಸೃಷ್ಟಿ ಮಾಡಬಹುದು. ತಪ್ಪುಗಳ ಬಗ್ಗೆ ಬೇರೆಯವರು ಹೇಳುವ ಮೊದಲು ನೀವೇ ಸರಿಪಡಿಸಿಕೊಳ್ಳಿರಿ.

ಪದಬಂಧ 5472 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವರ ನೀಡಿದ ವಿಸ್ತಾರ ಹೇಳಿಕೆ (3)
5.ಗಂಡೂ ಅಲ್ಲ ಹೆಣ್ಣು ಅಲ್ಲದ ವ್ಯಕ್ತಿ (4)
6.ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆಸೇರುವುದು (4)
8.ರಾತ್ರಿಗೊಂದು ಪರ್ಯಾಯ ಪದ (3)
11.ಏರು ತಗ್ಗಿಲ್ಲದಿರುವುದು (3)
13.ಕಾಡಿನ ಅರಸನಿವನು (4)
17.ಬೇರೆಯ ರೂಪ (4)
18.ಸ್ಪರ್ಧೆಗೆ ಕರೆಯುವುದು (3)

ಮೇಲಿಂದ ಕೆಳಕ್ಕೆ
1.ಚೈತ್ರ ವೈಶಾಖ ಮಾಸಗಳಲ್ಲಿ ಬರುವ ಋತು (3)
2.ಸೂರ್ಯನ ಇನ್ನೊಂದು ಹೆಸರು (4)
3.ಹೂವಿನ ದಳವಿಲ್ಲಿ ಉಲ್ಟಾ ಆಗಿದೆ (3)
4.ಕನ್ನಡಿಗನಿಗೆ ಸಿಕ್ಕಿರುವ ಡಿಸ್ಕೌಂಟ್! (3)
7.ಮಣಿಧರಿಸಿದ ಚಲುವೆ (3)
9.ಯಮನು ಕೊನೆಗಿದ್ದಾಗಿನ ಸೂತ್ರ (3)
10.ಸ್ವಂತ ಭಾವನ ಗುಣ! (3)
12.ಸಮನಾಗಿ ಬೆರೆಯುವಿಕೆ (4)
14.ಕ್ಷತ್ರಿಯನು ನೋಡುತ್ತಿರುವ ತಾರೆ! (3)
15.ಬಹು ಹೆಚ್ಚಿನ ಅವಶ್ಯಕತೆ (3)
16.ಬಯ್ಯಲು ಸೂಕ್ತವಾದ ವಿಸ್ತಾರ ಜಾಗ! (3)



5471ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರವ 3.ಪ್ರವಾಸ
6.ರಸಿಕ 8.ಪರಿಕರ
10.ಕುವರ 11.ಕಲ್ಯಾಣ
12.ರಸಾಭಾಸ 15.ಮಕರ
17.ವಕ್ತಾರ 18.ನೆರೆ

ಮೇಲಿಂದ ಕೆಳಕ್ಕೆ:
2.ವಠಾರ 3.ಪ್ರತೀಕ
4.ಸಮೀಪ 5.ಶತಕ
7.ಸಿತಾರ 9.ರಮಣ
10.ಕುಬೇರ 11.ಕನಕ
13.ಸಾತ್ವಿಕ 14.ಸಚಿವ
15.ಮಧುರ 16.ರವಾನೆ

ಸುಡೊಕು 5858

	3		4			2		7
7	8	4		3			5	
			1			8		3
		7		4				
3		2	9		1			
				6				2
1		8	3		4			5
	2					9	7	8
6		9		2			3	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5857 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ತೆಲಂಗಾಣ: ಬಿಆರ್‌ಎಸ್ ಪ್ರಣಾಳಿಕೆ ಬಿಡುಗಡೆ ಮಾಡಿದ ಮುಖ್ಯಮಂತ್ರಿ ಚಂದ್ರಶೇಖರ ರಾವ್

₹400ಕ್ಕೆ ಸಿಲಿಂಡರ್, ಪಿಂಚಣಿ ಮೊತ್ತ ಹೆಚ್ಚಳ



ಹೈದರಾಬಾದ್‌ನಲ್ಲಿ ಹಮ್ಮಿಕೊಂಡಿದ್ದ ಬಿಆರ್‌ಎಸ್ ಪಕ್ಷದ ಪ್ರಣಾಳಿಕೆ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ಪಕ್ಷದ ಮುಖಂಡರಿಗೆ ನಮಸ್ಕರಿಸಿದರು – ಪಿಟಿಐ ಚಿತ್ರ

ಹೈದರಾಬಾದ್ (ಪಿಟಿಐ): ಸಾಮಾಜಿಕ ಭದ್ರತಾ ಪಿಂಚಣಿ ಮೊತ್ತ ಹೆಚ್ಚಳ, 'ರೈತ ಬಂಧು' ಹೂಡಿಕೆ ಬೆಂಬಲ ಯೋಜನೆಯಡಿ ನೀಡಲಾಗುವ ಆರ್ಥಿಕ ಸಹಾಯ ಹೆಚ್ಚಿಸುವುದು ಮತ್ತು ₹400ಕ್ಕೆ ಎಲ್‌ಪಿಜಿ ಸಿಲಿಂಡರ್...

ಇದು ತೆಲಂಗಾಣದಲ್ಲಿ ಆಡಳಿತಾರೂಢ ಬಿಆರ್‌ಎಸ್ ನೀಡಿರುವ ಭರವಸೆಗಳು. ನವೆಂಬರ್ 30ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಿದ ಬಿಆರ್‌ಎಸ್ ಮುಖ್ಯಸ್ಥ ಮತ್ತು ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್, ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) 93 ಲಕ್ಷ ಕುಟುಂಬಗಳಿಗೆ ₹5 ಲಕ್ಷ ರೂಪಾಯಿಗಳ ಜೀವ ವಿಮಾ ರಕ್ಷಣೆ ನೀಡಲಾಗುವುದು ಮತ್ತು ಪ್ರೀಮಿಯಂ ಮೊತ್ತವನ್ನು ಸರ್ಕಾರ ಭರಿಸುತ್ತದೆ ಎಂದು ಹೇಳಿದರು.

ಪ್ರಸ್ತುತ ₹2,016 ಇರುವ ಸಾಮಾಜಿಕ ಭದ್ರತಾ ಪಿಂಚಣಿಯ ಮೊತ್ತವನ್ನು ಮುಂದಿನ ಐದು ವರ್ಷಗಳಲ್ಲಿ ತಿಂಗಳಿಗೆ ₹5,000ಕ್ಕೆ ಹಂತ ಹಂತವಾಗಿ ಹೆಚ್ಚಿಸಲಾಗುವುದು. ಅದೇ ರೀತಿ ಅಂಗವಿಕಲರ ಪಿಂಚಣಿಯನ್ನು ಮುಂದಿನ ಐದು ವರ್ಷಗಳಲ್ಲಿ ಈಗಿರುವ ₹4,016ರಿಂದ ₹6,016ಕ್ಕೆ ಏರಿಕೆ ಮಾಡಲಾಗುವುದು ಎಂದರು.

'ರೈತ ಬಂಧು' ಯೋಜನೆಯ ಅಡಿ ರೈತರಿಗೆ ಎಕರೆಗೆ ವಾರ್ಷಿಕ ₹10,000 ನೀಡುತ್ತಿರುವುದನ್ನು, ಮುಂದಿನ ಐದು ವರ್ಷಗಳಲ್ಲಿ ಹಂತ ಹಂತವಾಗಿ ₹16,000ಕ್ಕೆ ಹೆಚ್ಚಿಸಲಾಗುವುದು. ಗ್ಯಾಸ್ ಸಿಲಿಂಡರ್ ಅನ್ನು ಅರ್ಹ ಫಲಾನುಭವಿಗಳಿಗೆ ₹400ಕ್ಕೆ ನೀಡಲಾಗುವುದು ಎಂದು ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ತಮ್ಮ ಪಕ್ಷ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ರಾವ್, ಘೋಷಿಸಿದ ಭರವಸೆಗಳನ್ನು ಸರ್ಕಾರ ರಚಿಸಿದ 6ರಿಂದ 7 ತಿಂಗಳಲ್ಲಿ ಜಾರಿಗೆ ತರಲಾಗುವುದು ಎಂದರು. ತಮ್ಮ ಸರ್ಕಾರವು ಶೇಕಡ 90ರಷ್ಟು ಕಲ್ಯಾಣ ಯೋಜನೆಗಳನ್ನು ಹಿಂದಿನ ಚುನಾವಣೆಯ ಪ್ರಣಾಳಿಕೆಯಲ್ಲಿ ಉಲ್ಲೇಖಿಸದಿದ್ದರೂ ಜಾರಿಗೆ ತಂದಿದೆ ಎಂದು ಹೇಳಿದರು.

ಪ್ರಚಾರಕ್ಕೆ ಚಾಲನೆ

ಹೈದರಾಬಾದ್ (ಪಿಟಿಐ): ವಿಧಾನಸಭಾ ಚುನಾವಣಾ ಪ್ರಚಾರಕ್ಕೆ ಭಾನುವಾರ ಚಾಲನೆ ನೀಡಿದ ಬಿಆರ್‌ಎಸ್ ಮುಖ್ಯಸ್ಥ, ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ರಾಜ್ಯದಲ್ಲಿ ಅಭಿವೃದ್ಧಿ ವೇಗ ಮುಂದುವರಿಯಬೇಕಾದರೆ ಪಕ್ಷ ಮತ್ತೆ ಅಧಿಕಾರಕ್ಕೆ ಬರಬೇಕು ಎಂದು ಭಾನುವಾರ ಹೇಳಿದರು.

ಹುಸ್ನಾಬಾದ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ತಮ್ಮ ಸರ್ಕಾರದ ಸಾಧನೆಗಳನ್ನು ವಿವರಿಸಿದ ರಾವ್, ಕಳೆದ ಒಂಬತ್ತೂವರೆ ವರ್ಷಗಳ ಬಿಆರ್‌ಎಸ್ ಆಡಳಿತದಲ್ಲಿ ತಲಾ ಆದಾಯ, ವಿದ್ಯುತ್ ಬಳಕೆ ಮತ್ತು ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದಂತೆ ತೆಲಂಗಾಣವು ನಂಬರ್ ಒನ್ ರಾಜ್ಯವಾಗಿದೆ ಎಂದರು.

2018ರ ವಿಧಾನಸಭಾ ಚುನಾವಣೆಗೆ ಹುಸ್ನಾಬಾದ್‌ನಲ್ಲಿ ತಮ್ಮ ಪ್ರಚಾರ ಪ್ರಾರಂಭಿಸಿ ವಿಜಯಶಾಲಿಯಾಗಿದ್ದನ್ನು ನೆನಪಿಸಿಕೊಂಡ ಕೆಸಿಆರ್, ಮುಂಬರುವ ಚುನಾವಣೆಯಲ್ಲಿ ತಮ್ಮ ಪಕ್ಷವು 95ರಿಂದ 105 ಸ್ಥಾನ ಪಡೆಯುವ ವಿಶ್ವಾಸ ಇದೆ ಎಂದರು.

ಕಾಂಗ್ರೆಸ್ ಹೆಸರನ್ನು ಉಲ್ಲೇಖಿಸದೆ ವಾಗ್ದಾಳಿ ನಡೆಸಿದ ಕೆಸಿಆರ್, ಈ ಹಿಂದೆ ನೀಡಿದ 10 ಅವಕಾಶಗಳಲ್ಲಿ ಅಭಿವೃದ್ಧಿ ಮಾಡದೇ ಮತ್ತೆ ಅವಕಾಶ ಕೇಳುತ್ತಿದೆ ಎಂದು ವ್ಯಂಗ್ಯವಾಡಿದರು.

ತೆಲಂಗಾಣ ವಿಧಾನಸಭಾ ಸ್ಪೀಕರ್ ಪೋಚರಾಮ್ ಶ್ರೀನಿವಾಸ್ ರೆಡ್ಡಿ, ಸಚಿವರಾದ ಕೆ.ಟಿ.ರಾಮರಾವ್, ಟಿ.ಹರೀಶ್ ರಾವ್ ಮತ್ತು ವಿ.ಪ್ರಶಾಂತ್ ರೆಡ್ಡಿ ಸೇರಿದಂತೆ 51 ಅಭ್ಯರ್ಥಿಗಳಿಗೆ ಬಿ ಫಾರಂ ಅನ್ನು ಬಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ ರಾವ್ ಭಾನುವಾರ ನೀಡಿದರು.

ಅ.18ರಿಂದ ಬಸ್ ಯಾತ್ರೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಅಕ್ಟೋಬರ್ 18ರಂದು ಜಗ್ತಿಯಾಲದಲ್ಲಿ ಪಕ್ಷದ 'ವಿಜಯಭೇರಿ' ಬಸ್ ಯಾತ್ರೆಗೆ ಚಾಲನೆ ನೀಡಲಿದ್ದಾರೆ.

ತೆಲಂಗಾಣಕ್ಕೆ ಸೋನಿಯಾ ಗಾಂಧಿ ಘೋಷಿಸಿದ 'ಆರು ಗ್ಯಾರಂಟಿ'ಗಳ ಸಂದೇಶವನ್ನು ಜನರಿಗೆ ತಲುಪಿಸುವ ಗುರಿ ಹೊಂದಿರುವ ಬಸ್ ಯಾತ್ರೆಯು 12 ದಿನಗಳಲ್ಲಿ 35 ವಿಧಾನಸಭಾ ಕ್ಷೇತ್ರಗಳಿಗೆ ತೆರಳಲಿದೆ.

ದಿನಕ್ಕೆ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಸಂವಾದ, ಸಾರ್ವಜನಿಕ ಸಭೆಗಳು ನಡೆಯುವ ನಿರೀಕ್ಷೆಯಿದೆ. ಮುಂದಿನ ದಿನಗಳಲ್ಲಿ ಪಕ್ಷದ ಇತರ ಹಿರಿಯ ನಾಯಕರು ಸಹ ಯಾತ್ರೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಮುಲುಗು ರಾಮಯ್ಯ ಮಂದಿರದಿಂದ ರಾಹುಲ್ ಗಾಂಧಿ ಬಸ್ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ಮರುದಿನ ಅವರು ಸಿಂಗರೇಣಿಯಲ್ಲಿ ಕಲ್ಲಿದ್ದಲು ಗಣಿ ಕಾರ್ಮಿಕರೊಂದಿಗೆ ಸಂವಾದ ನಡೆಸಲಿದ್ದಾರೆ. ಕರೀಂನಗರ ಪಟ್ಟಣದಲ್ಲಿ ಎರಡನೇ ದಿನ ಪಾದಯಾತ್ರೆ ಮತ್ತು ಸಾರ್ವಜನಿಕ ಸಭೆ ನಡೆಯಲಿದೆ. ಮೂರನೇ ದಿನ ಬೋಧನ್, ಅರ್ಮೂರ್ ಮತ್ತು ನಿಜಾಮಾಬಾದ್‌ನಲ್ಲಿ ಸಾರ್ವಜನಿಕ ಸಭೆಗಳು ನಡೆಯಲಿವೆ.

₹7 ಕೋಟಿ ನಗದು, ಚಿನ್ನಾಭರಣ ವಶ

ಜೈಪುರ (ಪಿಟಿಐ): ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಾಗಿನಿಂದ ₹63 ಕೋಟಿಗೂ ಅಧಿಕ ಮೌಲ್ಯದ ಡ್ರಗ್ಸ್, ಮದ್ಯ, ಚಿನ್ನ ಮತ್ತು ನಗದು ವಶಪಡಿಸಿಕೊಳ್ಳಲಾಗಿದೆ.

ಅಕ್ಟೋಬರ್ 9ರಿಂದ ನೀತಿ ಸಂಹಿತೆ ಜಾರಿಗೆ ಬಂದಿದೆ. ₹7.48 ಕೋಟಿ ನಗದು, ₹28.61 ಕೋಟಿ ಮೌಲ್ಯದ ಡ್ರಗ್ಸ್, ₹4.75 ಕೋಟಿ ಮೌಲ್ಯದ ಮದ್ಯ ಮತ್ತು ₹5.76 ಕೋಟಿ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಪ್ರವೀಣ್ ಗುಪ್ತಾ ಹೇಳಿದ್ದಾರೆ. ₹16.72 ಕೋಟಿ ಮೌಲ್ಯದ ಉಚಿತ ಕೊಡುಗೆಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ.

'ಕೈ'ಗೆ ವಲಸೆ: ಬಿಜೆಪಿಗೆ ತಲೆನೋವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಯ ಹೊಸ್ತಿಲಲ್ಲೇ ರಾಜ್ಯದಲ್ಲಿ ನಡೆಯುತ್ತಿರುವ 'ಆಪರೇಷನ್ ಹಸ್ತ' ಬಿಜೆಪಿ ನಾಯಕರಿಗೆ ತಲೆನೋವು ತಂದೊಡ್ಡಿದೆ. ಬಿಜೆಪಿಯ ಮಾಜಿ ಶಾಸಕರು, ಕಳೆದ ಚುನಾವಣೆಯಲ್ಲಿ ಟಿಕೆಟ್ ಸಿಗದ ಕಾರಣಕ್ಕೆ ಪಕ್ಷ ತೊರೆದು ಅನ್ಯ ಪಕ್ಷಗಳಿಂದ ಕಣಕ್ಕಿಳಿದು ಸೋಲು ಕಂಡವರು 'ಕೈ' ಹಿಡಿಯಲು ಮುಂದಾಗಿದ್ದಾರೆ.


ಶಿರಹಟ್ಟಿ ಕ್ಷೇತ್ರದ ಬಿಜೆಪಿ ಮಾಜಿ ಶಾಸಕ ರಾಮಪ್ಪ ಲಮಾಣಿ 'ಕೈ' ಹಿಡಿದ ಬೆನ್ನಲ್ಲೆ, ಹಿರಿಯೂರು ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಕೂಡಾ ಕಾಂಗ್ರೆಸ್ ಸೇರಲು ಮುಹೂರ್ತ ನಿಗದಿಯಾಗಿದೆ. ಇದೇ 20ರಂದು ಅವರು ಕಾಂಗ್ರೆಸ್ ಸೇರಲಿದ್ದಾರೆ. ಬಿಜೆಪಿಯಿಂದ ಟಿಕೆಟ್ ಸಿಗದ ಕಾರಣಕ್ಕೆ ಜೆಡಿಎಸ್‌ಗೆ ಜಿಗಿದು ಮೂಡಿಗೆರೆಯಲ್ಲಿ ಕಣಕ್ಕಿಳಿದಿದ್ದ ಎಂ.ಪಿ. ಕುಮಾರಸ್ವಾಮಿ ಕೂಡಾ ಅದೇ ದಿನ ಕಾಂಗ್ರೆಸ್ ಸೇರಲಿದ್ದಾರೆ.

ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ನಿರಾಕರಿಸಿದ್ದ ಕಾರಣಕ್ಕೆ ಅಸಮಾಧಾನಗೊಂಡು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿ ವಿಧಾನ ಪರಿಷತ್ ಸದಸ್ಯರಾಗಿರುವ ಜಗದೀಶ ಶೆಟ್ಟರ್ ಅವರು ಇದೀಗ ಬಿಜೆಪಿ ಪಾಲಿಗೆ ದುಬಾರಿಯಾಗಿ ಪರಿಣಮಿಸುತ್ತಿದ್ದಾರೆ. ಕಾಂಗ್ರೆಸ್ ನಡೆಸುತ್ತಿರುವ ಬಿಜೆಪಿಗರ 'ಆಪರೇಷನ್ ಹಸ್ತ'ದಲ್ಲಿ ಶೆಟ್ಟರ್ ಅವರ ಪಾತ್ರ ಪ್ರಮುಖವಾಗಿದೆ ಎಂದು ಮೂಲಗಳು ಹೇಳಿವೆ.

ಟಿಕೆಟ್ ತಪ್ಪಿಸಿ ತಮ್ಮ ಸೋಲಿಗೆ ಕಾರಣರಾದವರ ವಿರುದ್ಧ ಸೇಡು ತೀರಿಸಿಕೊಳ್ಳಲು ನಿಂತಿರುವ ಶೆಟ್ಟರ್, ಉತ್ತರ ಕರ್ನಾಟಕ ಭಾಗದ ಹಲವು ಬಿಜೆಪಿ ನಾಯಕರನ್ನು ಕಾಂಗ್ರೆಸ್‌ನತ್ತ ಸೆಳೆಯಲು ಗಾಳ ಹಾಕಿದ್ದಾರೆ. ಈಗಾಗಲೇ ಕೆಲವು ನಾಯಕರ ಪಟ್ಟಿ ಸಹಿತ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಚರ್ಚೆಯನ್ನೂ ನಡೆಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕಾಂಗ್ರೆಸ್‌ನತ್ತ ಬಿಜೆಪಿ ಮಾಜಿ ಶಾಸಕರ ವಲಸೆ ಲೋಕಸಭೆ ಚುನಾವಣೆಯಲ್ಲಿ ಕಮಲ ಪಕ್ಷಕ್ಕೆ ದುಬಾರಿ ಆಗುವ ಸಾಧ್ಯತೆಯಿದೆ. ಬಿಜೆಪಿಯ ಕೆಲವು ನಾಯಕರು ಪಕ್ಷದ ರಾಜ್ಯ ಹಾಗೂ ರಾಷ್ಟ್ರೀಯ ನಾಯಕತ್ವದ ಬಗ್ಗೆಯೂ ಅಸಮಾಧಾನಗೊಂಡಿದ್ದಾರೆ. ತಮ್ಮ ರಾಜಕೀಯ ಭವಿಷ್ಯಕ್ಕಾಗಿ ಅವರೂ ಕಾಂಗ್ರೆಸ್ ಕಡೆಗೆ ಮುಖ ಮಾಡುತ್ತಿದ್ದಾರೆ. ಮತ್ತೊಂದು ಕಡೆ ಜೆಡಿಎಸ್ ಜೊತೆಗಿನ ಮೈತ್ರಿಯೂ ಇದಕ್ಕೆ ಕಾರಣವಾಗಿದೆ ಎಂಬ ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

'ರೇಣುಕಾಚಾರ್ಯ ಸೇರಿದಂತೆ ಹಲವು ನಾಯಕರು ಸಂಪರ್ಕದಲ್ಲಿ'



ಮಡಿಕೇರಿ: 'ರೇಣುಕಾಚಾರ್ಯ ಸೇರಿದಂತೆ ಹಲವು ಬಿಜೆಪಿ ನಾಯಕರು ಸಂಪರ್ಕದಲ್ಲಿದ್ದಾರೆ' ಎಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ತಿಳಿಸಿದರು.

'ರೇಣುಕಾಚಾರ್ಯ ನನ್ನೊಂದಿಗೆ ಈಗಾಗಲೇ ಮಾತನಾಡಿದ್ದಾರೆ. ಎಷ್ಟು ಮಂದಿ ನಾಯಕರು ಮಾತನಾಡಿದ್ದಾರೆ. ಎಷ್ಟು ಮಂದಿ ಪಕ್ಷ ಸೇರಲಿದ್ದಾರೆ ಎಂದು ಈಗಲೇ ಹೇಳುವುದಿಲ್ಲ' ಎಂದು ಅವರು ಇಲ್ಲಿ ಭಾನುವಾರ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

'ಬಿಜೆಪಿ ಖಾಲಿ ಕುಳಿತಿರುವುದರಿಂದ ಆದಾಯ ತೆರಿಗೆ ದಾಳಿ ಕುರಿತು ಇಲ್ಲಸಲ್ಲದ ಆರೋಪಗಳನ್ನು ಮಾಡಿ ಜನರ ದಾರಿ ತಪ್ಪಿಸುತ್ತಿದೆ. ರಾಜ್ಯದಲ್ಲಿ ಆವರಿಸಿರುವ ಬರಗಾಲದ ಬಗ್ಗೆ ಮಾತನಾಡದೇ, ಸುಮ್ಮನೇ ಆರೋಪ ಮಾಡುತ್ತಿದೆ. ಬಿಜೆಪಿ ಮುಖಂಡರು ಈ ಹಿಂದೆ ತಾವು ಮಾಡಿದ್ದನ್ನೇ ನಮ್ಮ ಮೇಲೆ ಆರೋಪಿಸುತ್ತಿದ್ದಾರೆ' ಎಂದರು.

ಹಲವು ಶಾಸಕರಿಗೆ ತಪ್ಪಿದ ಟಿಕೆಟ್

ಒಂದನೇ ಪುಟದಿಂದ...

ತೆಲಂಗಾಣದ ಐದು ಮಂದಿ ಶಾಸಕರು, ಮೂವರು ಸಂಸದರು (ರೇವಂತ್ ರೆಡ್ಡಿ, ಎನ್. ಉತ್ತಮ್ ಕುಮಾರ್ ಮತ್ತು ಕೋಮಟಿರೆಡ್ಡಿ ವೆಂಕಟ್ ರೆಡ್ಡಿ) ಕಣದಲ್ಲಿದ್ದಾರೆ. ಆಯಾ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಕಮಲ್ ನಾಥ್ (ಮಧ್ಯಪ್ರದೇಶ), ರೇವಂತ್ ರೆಡ್ಡಿ (ತೆಲಂಗಾಣ) ಮತ್ತು ಬೈಜ್ (ಛತ್ತೀಸಗಢ) ಕಣದಲ್ಲಿದ್ದಾರೆ.

ಮಧ್ಯಪ್ರದೇಶದಲ್ಲಿ 69 ಶಾಸಕರಿಗೆ ಟಿಕೆಟ್ ನೀಡಲಾಗಿದ್ದು, ಏಳು ಕಾಂಗ್ರೆಸ್ ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿದೆ. ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಕಮಲ್ ನಾಥ್ ಅವರು ತವರು ಕ್ಷೇತ್ರ ಛಿಂದವಾಡದಿಂದ ಸ್ಪರ್ಧಿಸಲಿದ್ದು, ಸಂಸದ ದಿಗ್ವಿಜಯ ಸಿಂಗ್ ಅವರ ಪುತ್ರ ಜೈವರ್ಧನ್ ಸಿಂಗ್ ಅವರನ್ನು ರಘೋಗಢದಿಂದ ಮತ್ತು ಸಹೋದರ ಲಕ್ಷ್ಮಣ್ ಸಿಂಗ್ ಅವರನ್ನು ಚಚೌರಾದಿಂದ ಪಕ್ಷ ಕಣಕ್ಕಿಳಿಸಿದೆ. ವಿರೋಧ ಪಕ್ಷದ ನಾಯಕ ಡಾ.ಗೋವಿಂದ್ ಸಿಂಗ್ ಅವರನ್ನು ಲಾಹರ್‌ನಿಂದ ಕಣಕ್ಕಿಳಿಸಲಾಗಿದೆ.

ಟಿ.ವಿ. ಧಾರಾವಾಹಿಯಲ್ಲಿ ಹನುಮಂತನ ಪಾತ್ರ ನಿರ್ವಹಿಸಿ ಪ್ರಸಿದ್ಧಿ ಪಡೆದಿರುವ ವಿಕ್ರಮ್ ಮಸ್ತಲ್ ಅವರು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ವಿರುದ್ಧ ಸ್ಪರ್ಧಿಸಲಿದ್ದಾರೆ. ಪಕ್ಷಾಂತರಗೊಂಡ ಬಿಜೆಪಿಯ ಮಾಜಿ ಸಂಸದ ಬೋಧ್ ಸಿಂಗ್ ಭಗತ್ ಕಟಂಗಿಯಿಂದ ಸ್ಪರ್ಧಿಸಲಿದ್ದಾರೆ. ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆದ ಪ್ರಮುಖ ಕಾಂಗ್ರೆಸ್ ನಾಯಕರಲ್ಲಿ ಅಜಯ್ ಸಿಂಗ್ , ವಿಜಯ್ ಲಕ್ಷ್ಮಿ ಸಾಧೋ ಸೇರಿದ್ದಾರೆ.

ಛತ್ತೀಸಗಢದಲ್ಲಿ ಎಲ್ಲಾ 12 ಸಚಿವರು ಸೇರಿದಂತೆ 22 ಶಾಸಕರು ಮತ್ತು ಒಬ್ಬ ಸಂಸದ ಟಿಕೆಟ್ ಪಡೆದಿದ್ದರೆ, ಎಂಟು ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿದೆ. ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಪಾಟನ್ ಕ್ಷೇತ್ರದಿಂದ ಸ್ಪರ್ಧಿಸಿದರೆ, ಉಪಮುಖ್ಯಮಂತ್ರಿ ಟಿ.ಎಸ್. ಸಿಂಗ್ ದೇವ್ ಅವರು ಅಂಬಿಕಾಪುರ ಹಾಗೂ ಸ್ಪೀಕರ್ ಚರಣ್ ದಾಸ್ ಮಹಂತ್ ಶಕ್ತಿ ಕ್ಷೇತ್ರದಿಂದ ಕಣಕ್ಕಿಳಿಯುವರು.

ತೆಲಂಗಾಣದಲ್ಲಿ ಉತ್ತಮ ಸಾಧನೆಯ ನಿರೀಕ್ಷೆಯಲ್ಲಿರುವ ಕಾಂಗ್ರೆಸ್, ಶಾಸಕಾಂಗ ಪಕ್ಷದ ನಾಯಕ ಮಲ್ಲು ಭಟ್ಟಿ ವಿಕ್ರಮಾರ್ಕ ಸೇರಿದಂತೆ ಎಲ್ಲಾ ಶಾಸಕರಿಗೆ ಟಿಕೆಟ್ ನೀಡಿದೆ. ಸಂಸದ ರೇವಂತ್, ವೆಂಕಟ್ ರೆಡ್ಡಿ ಅವರು ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಜಯಗಳಿಸಿದ ನಂತರ ಹೂಜೂರ್‌ನಗರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ಉತ್ತಮ್ ಕುಮಾರ್, ತಮ್ಮ ಹಳೆಯ ಕ್ಷೇತ್ರಕ್ಕೆ ಮರಳಿದರೆ, ಅವರ ಪತ್ನಿ ಪದ್ಮಾವತಿ ರೆಡ್ಡಿ ಅವರು ಕೋದಾಡದಿಂದ ಸ್ಪರ್ಧಿಸಲಿದ್ದಾರೆ.

ಪಕ್ಷಾಂತರಗೊಂಡಿರುವ ಬಿಆರ್‌ಎಸ್ ಶಾಸಕ ಮೈನಂಪಲ್ಲಿ ಹನುಮಂತ ರಾವ್ ಅವರು ಮಲ್ಕಾಜಿಗಿರಿಯಿಂದ ಸ್ಪರ್ಧಿಸಲಿದ್ದು, ಅವರ ಪುತ್ರ ಎಂ. ರೋಹಿತ್ ಕೂಡ ಮೆದಕ್‌ನಿಂದ ಟಿಕೆಟ್ ಪಡೆದಿದ್ದಾರೆ.

ಬಂಧನ ಭೀತಿ: ಡಿವೈಎಸ್‌ಪಿ ಪರಾರಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ದಾವಣಗೆರೆಯಲ್ಲಿ ಮದ್ಯದ ಅಂಗಡಿ ತೆರೆಯಲು ಪರವಾನಗಿ ನೀಡಲು ಲಂಚ ಪಡೆಯುತ್ತಿದ್ದ ಪ್ರಕರಣದ ಆರೋಪಿ ಡಿವೈಎಸ್‌ಪಿ ರವಿ ಮರಿಗೌಡರ ಅವರನ್ನು ವಶಕ್ಕೆ ಪಡೆಯಲು ಲೋಕಾಯುಕ್ತ ಪೊಲೀಸರು ಭಾನುವಾರ ಬಂದಾಗ ತಮ್ಮ ಸ್ವಗ್ರಾಮ ಇಂಗಳಹಳ್ಳಿಯಲ್ಲಿ ಅವರು ತಪ್ಪಿಸಿಕೊಂಡಿದ್ದಾರೆ.

ಲೋಕಾಯುಕ್ತ ಪೊಲೀಸರು ದಾವಣಗೆರೆಯಲ್ಲಿ ನಾಲ್ವರು ಅಧಿಕಾರಿಗಳನ್ನು ಶನಿವಾರವೇ ಬಂಧಿಸಿದ್ದು, ಡಿವೈಎಸ್‌ಪಿ ರವಿ ಮರಿಗೌಡರ ಕೂಡ ಇದರಲ್ಲಿ ಭಾಗಿಯಾದ ಆರೋಪಿಯಾಗಿದ್ದರು. ಆದರೆ, ನಾಪತ್ತೆಯಾಗಿದ್ದ ರವಿ ಮರಿಗೌಡ ಅವರನ್ನು ವಶಕ್ಕೆ ಪಡೆಯಲು ಬರುವುದು ತಿಳಿಯುತ್ತಿದ್ದಂತೆ, ಸ್ವಗ್ರಾಮಕ್ಕೆ ಬಂದಿದ್ದ ರವಿ ಅವರು ತಮ್ಮ ಕಾರನ್ನು ಸ್ಥಳದಲ್ಲಿಯೇ ಬಿಟ್ಟು, ಬೈಕ್‌ನಲ್ಲಿ ತಪ್ಪಿಸಿಕೊಂಡು ಬೇರೆ ಕಡೆ ತೆರಳಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಲೋಕಾಯುಕ್ತ ಪೊಲೀಸರು ಶೋಧ ಮುಂದುವರಿಸಿದ್ದಾರೆ.

ಜಾಮದಾರಗೆ ರಾಷ್ಟ್ರೀಯ ಪ್ರಶಸ್ತಿ



ಗದಗ: 'ತೋಂಟದಾರ್ಯ ಸಿದ್ಧಲಿಂಗ ಶ್ರೀಗಳ ಸ್ಮರಣಾರ್ಥ ನೀಡುವ 'ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ'ಗೆ ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ತೋಂಟದಾರ್ಯ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಎಸ್.ಪಟ್ಟಣಶೆಟ್ಟರ ತಿಳಿಸಿದರು.

'ಅ.25ರಂದು ನಗರದ ತೋಂಟದಾರ್ಯ ಮಠದ ಶಿವಾನುಭವ ಮಂಟಪದಲ್ಲಿ ನಡೆಯುವ ಸಿದ್ಧಲಿಂಗ ಶ್ರೀಗಳ ಐದನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಪ್ರಶಸ್ತಿ ಪ್ರದಾನ ಮಾಡುವರು. ಪ್ರಶಸ್ತಿಯು ₹5 ಲಕ್ಷ ನಗದು, ಫಲಕವನ್ನು ಒಳಗೊಂಡಿದೆ' ಎಂದು ಅವರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪಂಚ ರಾಜ್ಯಗಳ ಚುನಾವಣೆಗೆ ರಾಜ್ಯ ಸರ್ಕಾರದಿಂದ ₹1 ಸಾವಿರ ಕೋಟಿ



ಹುಬ್ಬಳ್ಳಿ: 'ಲೋಕಸಭೆ ಚುನಾವಣೆ ಮತ್ತು ಪಂಚರಾಜ್ಯಗಳ ಚುನಾವಣೆಗೆ ಕಾಂಗ್ರೆಸ್ ಸರ್ಕಾರ ಅನೈತಿಕ ಮಾರ್ಗಗಳಿಂದ ₹1 ಸಾವಿರ ಕೋಟಿ ಸಂಗ್ರಹಿಸಲು ಮುಂದಾಗಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

'ರಾಜಸ್ಥಾನ ಸರ್ಕಾರ ಮಧ್ಯಪ್ರದೇಶಕ್ಕೆ ಮತ್ತು ಕರ್ನಾಟಕ ಸರ್ಕಾರ ತೆಲಂಗಾಣಕ್ಕೆ ಹಣ ಕೊಡುತ್ತಿದೆ' ಎಂದು ಭಾನುವಾರ ಸುದ್ದಿಗಾರರಿಗೆ ಹೇಳಿದರು.

'ಬೆಂಗಳೂರಿನಲ್ಲಿ ಐಟಿ ದಾಳಿ ನಡೆದಿದೆ. ಕಾಂಗ್ರೆಸ್ ಸರ್ಕಾರ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ಹಣದಲ್ಲಿ ವಸೂಲಿ ಮಾಡಿರುವ ಕಮಿಷನ್ ಹಣ ಐಟಿ ದಾಳಿಯಲ್ಲಿ ಸಿಕ್ಕಿದೆ. ಈ ಪ್ರಕರಣದ ಸಮಗ್ರ ತನಿಖೆಯನ್ನು ಇಡಿ, ಸಿಬಿಐ ನಡೆಸಬೇಕು. ಇದರಲ್ಲಿ ಹಣ ಅಕ್ರಮ ವರ್ಗಾವಣೆ ನಡೆದಿರುವ ಶಂಕೆ ಇದೆ' ಎಂದರು.'ಕಾಂಗ್ರೆಸ್ ಪಕ್ಷದ ಕರಾಳ ಮುಖ ನಾಲ್ಕೈದು ತಿಂಗಳಲ್ಲಿ ಗೊತ್ತಾಗಿದೆ. ಕಾಂಗ್ರೆಸ್ ಪಕ್ಷ ನೈತಿಕ ಅಧಃಪತನಕ್ಕಿಳಿದಿದೆ. ಇದು ಕಮಿಷನ್ ಸರ್ಕಾರ. ಜನರ ಕಲ್ಯಾಣದ ಬಗ್ಗೆ ಯಾವುದೇ ಕಾಳಜಿ ಇಲ್ಲ. ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡರು ಭಾಗಿಯಾಗಿದ್ದಾರೆ' ಎಂದು ಆರೋಪಿಸಿದರು.

'ವಿದ್ಯುತ್ ನಿಗಮಗಳಿಗೆ ರಾಜ್ಯ ಸರ್ಕಾರದಿಂದ ಹಣ ಬಿಡುಗಡೆ ಆಗುತ್ತಿಲ್ಲ. ಕೇಂದ್ರದಿಂದ ಗುಣಮಟ್ಟದ ಕಲ್ಲಿದ್ದಲು ಸಿಗುತ್ತಿಲ್ಲ ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಆದರೆ, ಭರವಸೆ ನೀಡಿದ್ದಕ್ಕಿಂತ ಹೆಚ್ಚು ಪೂರೈಕೆ ಮಾಡಲಾಗುತ್ತಿದ್ದು, ಕಳೆದ ಏಳು ದಿನಗಳಲ್ಲಿ ಪ್ರತಿ ದಿನ 39 ಸಾವಿರ ಟನ್ ಪೂರೈಕೆ ಮಾಡಲಾಗಿದೆ. ರಾಜ್ಯ ಸರ್ಕಾರ ಕಲ್ಲಿದ್ದಲು ಸಚಿವಾಲಯಕ್ಕೆ ₹683 ಕೋಟಿ ಬಾಕಿ ಉಳಿಸಿಕೊಂಡಿದೆ. ನಾವು ಒಪ್ಪಂದದ ಪ್ರಕಾರ 2,698 ಲಕ್ಷ ಟನ್ ಪೂರೈಸಬೇಕು. ಆದರೆ, 3,153 ಲಕ್ಷ ಟನ್ ಪೂರೈಕೆ ಮಾಡುತ್ತಿದ್ದೇವೆ' ಎಂದರು.

'ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಹಿಂದೂಗಳಿಗೆ ಭಯ ಇದೆ ಎಂದು ಹೇಳಿದ್ದಕ್ಕೆ ಚಕ್ರವರ್ತಿ ಸೂಲಿಬೆಲೆ ಅವರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಇದು ಖಂಡನೀಯ. ಕೂಡಲೇ ಅದನ್ನು ಹಿಂಪಡೆಯಬೇಕು. ತಾಕತ್ತಿದ್ದರೆ ಭಗವಾನ್ ಅವರನ್ನು ಬಂಧಿಸಲಿ ನೋಡೋಣ. ಇದು ಹಿಂದೂ ವಿರೋಧಿ ಸರ್ಕಾರ' ಎಂದು ದೂರಿದರು.

ಹೆಗಲು ಮುಟ್ಟಿಕೊಳ್ಳುವುದೇಕೆ: ಎಚ್‌ಡಿಕೆ ಪ್ರಶ್ನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕುಂಬಳಕಾಯಿ ಕಳ್ಳ ಎಂದರೆ ಇವರು ಹೆಗಲು ಮುಟ್ಟಿಕೊಳ್ಳುವುದೇಕೆ? ಗುತ್ತಿಗೆದಾರನ ಮನೆಯಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಸಿಕ್ಕ ಇಡುಗಂಟು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರದ್ದು ಎಂದು ನಾನೆಲ್ಲಿ ಹೇಳಿದ್ದೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

'ಕುಮಾರಸ್ವಾಮಿ ಅವರೇನು ಆದಾಯ ತೆರಿಗೆ ಇಲಾಖೆ ಪ್ರತಿನಿಧಿಯೆ' ಎಂಬ ಶಿವಕುಮಾರ್ ಪ್ರಶ್ನೆಗೆ ಪತ್ರಿಕಾ ಹೇಳಿಕೆ ಮೂಲಕ ಭಾನುವಾರ ಪ್ರತಿಕ್ರಿಯಿಸಿರುವ ಅವರು, 'ರಾಜ್ಯದ ಕಾಂಗ್ರೆಸ್ ಸರ್ಕಾರ ಪರ್ಸಂಟೇಜ್ ಪಟಾಲಂ ಆಗಿದೆ. 'ಕಳ್ಳನ ಮನಸ್ಸು ಹುಳ್ಳುಳ್ಳಗೆ' ಎಂಬ ಗಾದೆ ಮಾತು ಡಿ.ಕೆ. ಸಹೋದರರಿಗೆ ಕರಾರುವಾಕ್ಕಾಗಿ ಅನ್ವಯಿಸುತ್ತದೆ' ಎಂದು ವಾಗ್ದಾಳಿ ನಡೆಸಿದ್ದಾರೆ.

'ನಗದು ಅಭಿವೃದ್ಧಿ ಇಲಾಖೆ ಎಂದರೆ ಡಿ.ಕೆ. ಶಿವಕುಮಾರ್ ಅವರದ್ದಾ? ಅವರು ತಿಹಾರ್ ಜೈಲಿನ ವಿಷಯವನ್ನೂ ಪ್ರಸ್ತಾಪ ಮಾಡಿದ್ದಾರೆ. ತಿಹಾರ್ ಜೈಲಿಗೆ ಹೋಗುವ ಭಯ ಅಥವಾ ಗ್ಯಾರಂಟಿ ಅವರಿಗೆ ಇರಬಹುದು ಎನ್ನುವುದು ನನ್ನ ಅನುಮಾನ. ನನ್ನ ಹೇಳಿಕೆಯ ಬಗ್ಗೆ ಅವರು ತೀವ್ರವಾಗಿ ಪ್ರತಿಕ್ರಿಯಿಸುವುದಕ್ಕೆ ಅದೇ ಕಾರಣ ಇರಬಹುದು. ನಾನು ಐ.ಟಿ ಇಲಾಖೆ ಪ್ರತಿನಿಧಿಯೂ ಅಲ್ಲ, ಜಾರಿ ನಿರ್ದೇಶನಾಲಯದ ಉದ್ಯೋಗಿಯೂ ಅಲ್ಲ. ಒಬ್ಬ ಹುಲು ಮಾನವ ಅಷ್ಟೇ. ಕೆಲವರ ಭ್ರಮೆಗಳಿಗೆ ನಾನು ಏನು ಮಾಡಲಿ' ಎಂದು ಕೇಳಿದ್ದಾರೆ.

ಹಿಂದೆ ಇದ್ದ ಬಿಜೆಪಿ ಸರ್ಕಾರದ ವಿರುದ್ಧ ಶೇಕಡ 40ರಷ್ಟು ಕಮಿಷನ್ ಆರೋಪ ಮಾಡಿ ಇವರು ಅಧಿಕಾರಕ್ಕೆ ಬಂದರು. ಇವರ ಕಾಲದ ಪರ್ಸಂಟೇಜ್ ಬಗ್ಗೆ ಹೇಳಿದರೆ ಕೋಪ ಬರುತ್ತದೆ. ಗುತ್ತಿಗೆದಾರನ ಮನೆಯಲ್ಲಿ ಪತ್ತೆಯಾದ ಕಪ್ಪು ಹಣ ಯಾರದ್ದು? ಆ ಗುತ್ತಿಗೆದಾರ ಯಾರ ಪರಮಾಪ್ತ ಎನ್ನುವುದು ಜಗಜ್ಜಾಹೀರಾಗಿದೆ. ಸತ್ಯ ಮುಚ್ಚಿಟ್ಟರೆ ಶಿವ ಮೆಚ್ಚುತ್ತಾನೆಯೆ ಎಂದು ಶಿವಕುಮಾರ್ ಅವರನ್ನು ಪ್ರಶ್ನಿಸಿದ್ದಾರೆ.

ಇಂದು ಬಿಜೆಪಿ ರಾಜ್ಯ ವ್ಯಾಪಿ ಹೋರಾಟ

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಭ್ರಷ್ಟ ಆಡಳಿತವನ್ನು ವಿರೋಧಿಸಿ ಸೋಮವಾರ ಮತ್ತು ಮಂಗಳವಾರ ರಾಜ್ಯ ವ್ಯಾಪಿ ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಿಳಿಸಿದರು.

ಪಕ್ಷದ ಕಚೇರಿಯಲ್ಲಿ ಭಾನುವಾರ ಪ್ರಧಾನ ಕಾರ್ಯದರ್ಶಿಗಳ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರ ರಾಜೀನಾಮೆಗೆ ಆಗ್ರಹಿಸಿ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರ ನೇತೃತ್ವದಲ್ಲಿ ಸೋಮವಾರದಂದು ಜಿಲ್ಲೆ ಕೇಂದ್ರಗಳಲ್ಲಿ, ಮಂಡಲಗಳ ಅಧ್ಯಕ್ಷರ ನೇತೃತ್ವದಲ್ಲಿ ಮಂಗಳವಾರ ಮಂಡಲಗಳ ಮಟ್ಟದಲ್ಲಿ ಹೋರಾಟ ನಡೆಸಲು ಸೂಚಿಸಲಾಗಿದೆ ಎಂದರು ಹೇಳಿದರು.

'ಅಧಿಕಾರಿಗಳಿಗೇ ರೇಟ್ ಫಿಕ್ಸ್ ಮಾಡಿದ ಸರ್ಕಾರವಿದು. ಅಧಿಕಾರಿಗಳಿಂದ ಭ್ರಷ್ಟಾಚಾರ ಆರಂಭಿಸಿದ ಈ ಸರ್ಕಾರದ ಕಾರ್ಯವು ಕಲಾವಿದರನ್ನೂ ಬಿಟ್ಟಿಲ್ಲ. ತಮ್ಮ ಬಳಿ ಲಂಚ ಕೇಳಿದ್ದಾಗಿ ಕಲಾವಿದರೇ ಆರೋಪ ಮಾಡುತ್ತಿದ್ದಾರೆ. ಹಿಂದೆ ಎಟಿಎಂ ಸರ್ಕಾರ ಬರುತ್ತದೆ ಎಂದು ಹೇಳಿದಾಗ, ಸಾಕ್ಷ್ಯ ಕೊಡಿ ಎಂದಿದ್ದರು. ಇವತ್ತು ಸಾಕ್ಷ್ಯ, ಆಧಾರಗಳನ್ನು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರೇ ಜನರ ಮುಂದಿಟ್ಟಿದ್ದಾರೆ' ಎಂದು ಹೇಳಿದರು.

ಗುತ್ತಿಗೆದಾರರಿಗೆ ₹600 ಕೋಟಿ ಬಿಡುಗಡೆ ಮಾಡಿದ ಎರಡೇ ದಿನಗಳಲ್ಲಿ ಗುತ್ತಿಗೆದಾರನೊಬ್ಬನ ಮನೆಯಲ್ಲಿ ₹42 ಕೋಟಿ ಸಿಕ್ಕಿದೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಇದರ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ನಳಿನ್ ಕುಮಾರ್ ಆಗ್ರಹಿಸಿದರು.


₹45 ಕೋಟಿ ನಗದು ವಶ

ಒಂದನೇ ಪುಟದಿಂದ...

ಆ ಕಾರ್ಯಾಚರಣೆಯಲ್ಲಿ ಲಭಿಸಿದ ಸುಳಿವನ್ನು ಆಧರಿಸಿ ಕೇತಮಾರನಹಳ್ಳಿಯ ಫ್ಲ್ಯಾಟ್ ಮೇಲೆ ದಾಳಿ ನಡೆಸಲಾಗಿತ್ತು. ಮತ್ತಷ್ಟು ಕಡೆ ಶೋಧ: ಗುತ್ತಿಗೆದಾರರು, ರಿಯಲ್ ಎಸ್ಟೇಟ್ ಉದ್ಯಮಿಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದ ವಹಿವಾಟು ನಡೆಸುತ್ತಿರುವವರ ಮನೆ, ಕಚೇರಿಗಳ ಮೇಲೆ ಆದಾಯ ತೆರಿಗೆ ಅಧಿಕಾರಿಗಳು ಸರಣಿಯೋಪಾದಿಯಲ್ಲಿ ದಾಳಿ ನಡೆಸುತ್ತಿದ್ದಾರೆ. ಗುರುವಾರ ಆರಂಭವಾದ ದಾಳಿಯಲ್ಲಿ ಸಿಕ್ಕ ಸುಳಿವುಗಳನ್ನು ಆಧರಿಸಿ ಕಾರ್ಯಾಚರಣೆ ಮುಂದುವರಿಯುತ್ತಲೇ ಇದೆ.

ದೆಹಲಿ, ಮುಂಬೈ, ಚೆನ್ನೈ, ಗೋವಾ ಸೇರಿದಂತೆ ದೇಶದ ವಿವಿಧೆಡೆಯಿಂದ ಆದಾಯ ತೆರಿಗೆ ಇಲಾಖೆಯ ನೂರಾರು ಅಧಿಕಾರಿಗಳು ಬುಧವಾರವೇ ಬೆಂಗಳೂರು ತಲುಪಿದ್ದರು. ಗುರುವಾರ ಬೆಳಿಗ್ಗೆಯಿಂದ ಕಾರ್ಯಾಚರಣೆ ಆರಂಭಿಸಿದ್ದರು. ಇನ್ನೂ ಅವರೆಲ್ಲರೂ ನಗರದಲ್ಲೇ ಬೀಡುಬಿಟ್ಟಿದ್ದಾರೆ.

'ಶ್ರೀ ಶಿವಕುಮಾರ ಪ್ರಶಸ್ತಿ'ಗೆ ಶಶಿಧರ ಅಡಪ ಆಯ್ಕೆ




ಹೊಸದುರ್ಗ: ಇಲ್ಲಿನ ಶಿವಕುಮಾರ ಕಲಾಸಂಘವು ರಂಗಭೂಮಿಗೆ ಸಲ್ಲಿಸಿದ ಕೊಡುಗೆ ಪರಿಗಣಿಸಿ ಕೊಡಮಾಡುವ 2023ನೇ ಸಾಲಿನ 'ಶ್ರೀ ಶಿವಕುಮಾರ ಪ್ರಶಸ್ತಿ'ಗೆ ಬೆಂಗಳೂರಿನ ರಂಗಕರ್ಮಿ ಶಶಿಧರ ಅಡಪ ಆಯ್ಕೆಯಾಗಿದ್ದಾರೆ.

ರಂಗಕರ್ಮಿ, ರಂಗಸಂಘಟಕ, ಕಲಾವಿದ, ಕಲಾನಿರ್ದೇಶಕರಾಗಿರುವ ಶಶಿಧರ ಅಡಪ ಅವರು ರಂಗಭೂಮಿಗೆ ನೀಡಿರುವ ಕೊಡುಗೆ ಪರಿಗಣಿಸಿ ಆಯ್ಕೆ ಮಾಡಲಾಗಿದೆ.

ರಂಗಭೂಮಿ, ರಂಗ ಚಟುವಟಿಕೆಗಳಲ್ಲಿ ಮಹತ್ವದ ಸಾಧನೆ ಮಾಡಿದ ಸಾಧಕರಿಗೆ 2004ರಿಂದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ ಹೆಸರಿನಲ್ಲಿ ಕಲಾಸಂಘ ನೀಡುತ್ತಿರುವ ಪ್ರಶಸ್ತಿಯು ₹50,000 ನಗದು ಮತ್ತು ಫಲಕ ಒಳಗೊಂಡಿದೆ. ನವೆಂಬರ್ 2ರಿಂದ 8ರವರೆಗೆ ಸಾಣೇಹಳ್ಳಿಯಲ್ಲಿ ನಡೆಯುವ 'ರಾಷ್ಟ್ರೀಯ ನಾಟಕೋತ್ಸವ'ದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಆಹಾರ ತಜ್ಞ ಕೆ.ಸಿ.ರಘು ನಿಧನ



ಬೆಂಗಳೂರು: ಶ್ವಾಸಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಖ್ಯಾತ ಆಹಾರ ತಜ್ಞ, ಉದ್ಯಮಿ ಕೆ.ಸಿ. ರಘು (58) ಅವರು ಭಾನುವಾರ ಬೆಳಿಗ್ಗೆ ನಗರದ ಸ್ವಗೃಹದಲ್ಲಿ ನಿಧನರಾದರು.

ಪಾರ್ಥಿವ ಶರೀರವನ್ನು ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ದಾನ ಮಾಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಲ್ಮನೆಯ ಕೆ.ಸಿ.ರಘು ಅವರು, ಹಲವು ವರ್ಷಗಳ ಕಾಲ ಫುಡ್ ಅಂಡ್ ನ್ಯೂಟ್ರೀಷನ್ ವರ್ಲ್ಡ್ ಎಂಬ ಆಂಗ್ಲ ನಿಯತಕಾಲಿಕದ ಸಂಪಾದಕರಾಗಿದ್ದರು. ಅನೇಕ ದಿನಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆಯುತ್ತಿದ್ದರು. ಸಾಮಾನ್ಯ ವಿಜ್ಞಾನ ಮತ್ತು ಆರ್ಥಿಕತೆಯ ವಿಷಯಗಳನ್ನು ಅತಿಥಿ ಉಪನ್ಯಾಸಕರಾಗಿ ನಿರ್ವಹಿಸಿದ್ದಾರೆ.

ಅವರು ಸ್ಥಾಪಿಸಿದ ಪ್ರಿಸ್ಟೀನ್ ಆರ್ಗ್ಯಾನಿಕ್ಸ್ ಎಂಬ ಸಂಸ್ಥೆಯಲ್ಲಿ ನವಜಾತ ಶಿಶುಗಳಲ್ಲಿ ಕಂಡುಬರುವ ಮಾರಕ ಕಾಯಿಲೆಗಳಿಗೆ ಸಂಶೋಧನೆಯಿಂದ ಪೌಷ್ಟಿಕಾಂಶದ ಪರಿಹಾರವನ್ನು ಕಂಡುಹಿಡಿದು, ದೇಶದಾದ್ಯಂತ ಹಾಗೂ ವಿದೇಶಗಳಿಗೂ ಪೂರೈಸುತ್ತಿದ್ದರು. ಈ ಕಾರ್ಯದಿಂದ ಸುಮಾರು 5 ಸಾವಿರ ನವಜಾತ ಶಿಶುಗಳನ್ನು ಸಾವಿನ ದವಡೆಯಿಂದ ಪಾರು ಮಾಡಲಾಗಿತ್ತು.

ರಘು ಅವರಿಗೆ ಅನೇಕ ವಿಷಯಗಳಲ್ಲಿ ಆಳವಾದ ಜ್ಞಾನವಿತ್ತು. ಹೊಸ ವಿಷಯಗಳನ್ನು ಹುಡುಕುತ್ತಾ ಸದಾ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದರು. ಅಧ್ಯಯನಕ್ಕಾಗಿ ಒಂದು ಬೃಹತ್ ಲೈಬ್ರರಿಯನ್ನೇ ತೆರೆದಿದ್ದರು. ಅಧ್ಯಯನದ ಜೊತೆಗೆ 'ತುತ್ತು ತತ್ವ', 'ಆಹಾರ ರಾಜಕೀಯ', 'ರಸ ತತ್ವ' ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ.

ಎಸ್‌ಸಿ ಮಾನ್ಯತೆ ಒತ್ತಾಯಿಸಿ ರ್‍ಯಾಲಿ

ಲಖನೌ (ಪಿಟಿಐ): ಮೀನುಗಾರ ಸಮುದಾಯಕ್ಕೆ ಪರಿಶಿಷ್ಟ ಜಾತಿ (ಎಸ್‌ಸಿ) ಮಾನ್ಯತೆ ಕಲ್ಪಿಸುವಂತೆ ಒತ್ತಾಯಿಸಿ ಉತ್ತರ ಪ್ರದೇಶದ ನಿಶಾದ್ ಪಕ್ಷದ ಅಧ್ಯಕ್ಷ ಸಂಜಯ್ ನಿಶಾದ್ ಅವರು ಭಾನುವಾರ ಪಾದಯಾತ್ರೆ ಆರಂಭಿಸಿದರು ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ರಾಜ್ಯದ ಸಚಿವರೂ ಆಗಿರುವ ಸಂಜಯ್ ಅವರ ಅಧಿಕೃತ ನಿವಾಸದಿಂದ ಪಾದಯಾತ್ರೆ ಆರಂಭವಾಯಿತು. ಸಂತ ಕಬೀರ್ ನಗರ ಜಿಲ್ಲೆಯಲ್ಲಿ ಕೊನೆಗೊಳ್ಳಲಿದೆ.

ಕೃತಿ ಬಿಡುಗಡೆ ಸಮಾರಂಭದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಬೇಸರ

'ಮನುವಾದಿಗಳ ನಿಂದನೆಯಲ್ಲೇ ಕಾಲಹರಣ'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ (ಎಡದಿಂದ ಮೂರನೆಯವರು) ಅವರು 'ಬೇಗಂಪುರ' ಹಾಗೂ 'ಅಂಬೇಡ್ಕರ್ ಜಗತ್ತು' ಕೃತಿ ಬಿಡುಗಡೆ ಮಾಡಿದರು. ಬಂಜಗೆರೆ ಜಯಪ್ರಕಾಶ, ಮಾವಳ್ಳಿ ಶಂಕರ್, ಶ್ವೇತಾರಾಣಿ ಎಚ್.ಕೆ., ಸಾಹಿತಿ ದು ಸರಸ್ವತಿ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಮನುವಾದಿಗಳನ್ನು ನಿಂದಿಸುವ ಕೆಲಸದಲ್ಲಿ ಕಾಲಹರಣ ಮಾಡುವ ಬದಲಿಗೆ ನಮ್ಮ ಸಮುದಾಯದಲ್ಲಿರುವ ಗೊಂದಲಗಳಿಗೆ ಮೊದಲು ಪರಿಹಾರ ಕಂಡುಕೊಳ್ಳಬೇಕಿದೆ' ಎಂದು ಸಚಿವ ಸತೀಶ್ ಜಾರಕಿಹೊಳಿ ಮನವಿ ಮಾಡಿದರು.

ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಬಂಜಗೆರೆ ಜಯಪ್ರಕಾಶ ಅವರು ಅನುವಾದಿಸಿದ 'ಬೇಗಂಪುರ' (ಇಂಗ್ಲಿಷ್: ಗೇಲ್ ಓಮ್ವೆಟ್) ಹಾಗೂ ವಿಕಾಸ್ ಆರ್. ಮೌರ್ಯ ಅವರು ಅನುವಾದಿಸಿದ 'ಅಂಬೇಡ್ಕರ್ ಜಗತ್ತು' (ಇಂಗ್ಲಿಷ್: ಎಲೀನರ್ ಜೆಲಿಯಟ್) ಕೃತಿಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಭಾಷಣಗಳಲ್ಲಿ ಬೇರೆಯರನ್ನೇ ನಿಂದಿಸುವುದಕ್ಕೇ ಹೆಚ್ಚಿನ ಸಮಯ ಮೀಸಲಿಡುತ್ತಿದ್ದೇವೆ. ನಿಂದಿಸಿದಾಗ ಅವರು ಇನ್ನೂ ಎಚ್ಚರಗೊಳ್ಳುತ್ತಾರೆ. ರಾಜಕೀಯವಾಗಿ, ಶೈಕ್ಷಣಿಕವಾಗಿ ಹೆಚ್ಚು ಲಾಭ ಪಡೆಯುತ್ತಾರೆ' ಎಂದರು.

'ಬಿ.ಆರ್.ಅಂಬೇಡ್ಕರ್ ನೀಡಿರುವ ಸಂವಿಧಾನದಿಂದ ವಿರೋಧಿಗಳೇ ಹೆಚ್ಚು ಲಾಭ ಪಡೆದುಕೊಳ್ಳುತ್ತಿದ್ದಾರೆ. ವಕೀಲರು, ಲೆಕ್ಕಪರಿಶೋಧಕರೂ ಆಗಿದ್ದಾರೆ. ಇದೇ ಸಂವಿಧಾನದಿಂದ ವಕೀಲರಾದವರು ಹೆಚ್ಚು ಹಣ ಸಂಪಾದನೆ ಮಾಡುತ್ತಿದ್ದಾರೆ. ನಮ್ಮ ಸಮುದಾಯಕ್ಕೆ ಅರ್ಥವೇ ಆಗುತ್ತಿಲ್ಲ. ಮೊದಲು ನಮ್ಮಲ್ಲಿರುವ ನ್ಯೂನತೆ ಸರಿ ಪಡಿಸಿಕೊಳ್ಳಬೇಕಿದೆ' ಎಂದು ಹೇಳಿದರು.

'ನಮ್ಮ ಸಮುದಾಯದಲ್ಲಿ ವೈದ್ಯರಾಗಿ ವಿದೇಶಕ್ಕೆ ತೆರಳುವವರ ಸಂಖ್ಯೆ ತೀರಾ ಕಡಿಮೆಯಿದೆ. ಸಮುದಾಯದ ಯುವಕರು ಸೈನಿಕರಾಗಿದ್ದಾರೆಯೇ ಹೊರತು, ಬ್ರಿಗೇಡಿಯರ್ ಹಂತಕ್ಕೆ ಹೋಗುವ ಪ್ರಯತ್ನವನ್ನೂ ಮಾಡಿಲ್ಲ' ಎಂದರು

'ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ದ್ವೇಷ, ಅಸೂಯೆ ತಾಂಡವವಾಡುತ್ತಿದೆ. ದೆಹಲಿಯಲ್ಲಿ ಒಂದು ಸಂದೇಶ ಮೊಳಗಿದರೆ ಅದನ್ನು ಹಳ್ಳಿಯವರೂ ಪಾಲಿಸಬೇಕು. ಆ ಪರಿಸ್ಥಿತಿ ಇಲ್ಲ. ಸಮಾಜದಲ್ಲಿ ಒಗ್ಗಟ್ಟು ಮೂಡುತ್ತಿಲ್ಲ' ಎಂದು ಹೇಳಿದರು.

'ವೀರಾವೇಶದ ಭಾಷಣ ಮಾಡಿ ಮನೆಯಲ್ಲಿ ಕೂರುವ ವ್ಯಕ್ತಿಯನ್ನೇ ಮುಖಂಡನೆಂದು ಒಪ್ಪಿಕೊಳ್ಳುತ್ತಿದ್ದೇವೆ. ಬರೀ ಭಾಷಣದಿಂದ ಸಮುದಾಯ ಕಟ್ಟಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಜಾತಿ, ಧರ್ಮಗಳ ನಡುವೆ ಸಂಘರ್ಷ ಹೆಚ್ಚುತ್ತಲೇ ಇದೆ. ಪರಿಶಿಷ್ಟ ಜಾತಿ, ಪಂಗಡದ ಶಿಕ್ಷಣಕ್ಕೆ ನೆರವಾಗುತ್ತಿದ್ದ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ' ಎಂದರು.

'ಮೀಸಲಾತಿ ಬಗ್ಗೆ ಸಮಾಜದಲ್ಲಿ ತಪ್ಪು ಕಲ್ಪನೆಯಿದೆ. ಮೀಸಲಾತಿಯಿಂದ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ರಾಜಕೀಯ ಅಧಿಕಾರ ಮಾತ್ರ ಸಿಕ್ಕಿದೆ. ಆ ಅಧಿಕಾರದಿಂದ ಸಮುದಾಯದ ಅಭ್ಯುದಯಕ್ಕೆ ಕೊಡುಗೆ ನೀಡಲು ಸಾಧ್ಯವಾಗಿಲ್ಲ. ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಇನ್ನೂ ಹಿಂದುಳಿದಿದ್ದೇವೆ' ಎಂದು ತಿಳಿಸಿದರು.

'ಅಂಬೇಡ್ಕರ್ ಜಗತ್ತು' ಕೃತಿ ಕುರಿತು ಸಾಹಿತಿ ದು ಸರಸ್ವತಿ ಮಾತನಾಡಿ, 'ಮತ್ತೆ ಸಮಾಜ ಮನುವಾದಕ್ಕೆ ಮರುಳುತ್ತಿದ್ದೆಯೇ ಎಂಬ ಆತಂಕ ನನ್ನನ್ನು ಕಾಡುತ್ತಿದೆ. ಅಂಬೇಡ್ಕರ್ ಅವರ ಆಶಯ ಉಳಿಸುವ ಬದಲಿಗೆ ಅವರ ಫೋಟೊ ಪೂಜಿಸಿ, ಪುತ್ಥಳಿ ನಿರ್ಮಿಸಿ ಗುಡಿಕಟ್ಟುವ ಸಂಸ್ಕೃತಿ ಹೆಚ್ಚುತ್ತಿದೆ' ಎಂದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಮಾವಳ್ಳಿ ಶಂಕರ್, ರಂಗಭೂಮಿ ಕಲಾವಿದೆ ಎಚ್.ಕೆ. ಶ್ವೇತಾರಾಣಿ, ಬಂಜಗೆರೆ ಜಯಪ್ರಕಾಶ್, ವಿಕಾಸ್ ಆರ್. ಮೌರ್ಯ ಇದ್ದರು.

ಕೃತಿ ಪರಿಚಯ

ಕೃತಿ: ಬೇಗಂಪುರ
ಅನುವಾದ: ಬಂಜಗೆರೆ ಜಯಪ್ರಕಾಶ
ಬೆಲೆ: ₹345
ಪುಟಗಳು: 252
ಪ್ರಕಾಶನ:ಜೀರುಂಡೆ

ಕೃತಿ: ಅಂಬೇಡ್ಕರ್ ಜಗತ್ತು
ಅನುವಾದಕರು: ವಿಕಾಸ್ ಆರ್. ಮೌರ್ಯ
ಬೆಲೆ: ₹395
ಪುಟಗಳು: 288
ಪ್ರಕಾಶನ: ಜೀರುಂಡೆ

ಭೂದಾಳಿ ಆರಂಭಿಸಲು ಅನುಮತಿಗೆ ಕಾಯುತ್ತಿರುವ ಇಸ್ರೇಲ್ ಸೇನೆ • ಇಸ್ರೇಲ್ ಕ್ರಮಕ್ಕೆ ಚೀನಾ ಆಕ್ರೋಶ

ಸಂತ್ರಸ್ತರ ಸಂಖ್ಯೆ 10 ಲಕ್ಷ: ವಿಶ್ವಸಂಸ್ಥೆ

ಗಾಜಾ ಪಟ್ಟಿ (ಎಎಫ್‌ಪಿ): ಹಮಾಸ್ ಬಂಡುಕೋರ ಸಂಘಟನೆ ನಡೆಸಿದ ದಾಳಿಗೆ ಪ್ರತಿಯಾಗಿ ಇಸ್ರೇಲ್ ವಾಯುದಾಳಿ ಆರಂಭಿಸಿದ ಒಂದು ವಾರದಲ್ಲಿ ಗಾಜಾ ಪಟ್ಟಿಯಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಮಂದಿ ನೆಲೆ ಕಳೆದುಕೊಂಡಿದ್ದಾರೆ ಎಂದು ವಿಶ್ವಸಂಸ್ಥೆ ಭಾನುವಾರ ಹೇಳಿದೆ.

ಇಸ್ರೇಲ್ ಸರ್ಕಾರವು ಹಮಾಸ್ ಸಂಘಟನೆಯ ವಿರುದ್ಧ ಅಕ್ಟೋಬರ್ 8ರಂದು (ಭಾನುವಾರ) ಯುದ್ಧ ಘೋಷಣೆ ಮಾಡಿದೆ. ಆ ನಂತರದಲ್ಲಿ ಇಸ್ರೇಲ್ ಸೇನೆಯು ಹಮಾಸ್ ದಾಳಿಯ ಸೂತ್ರಧಾರರನ್ನು ಗುರಿಯಾಗಿಸಿಕೊಂಡು ಬಾಂಬ್ ದಾಳಿ ನಡೆಸುತ್ತಿದೆ. ಈ ದಾಳಿಯಲ್ಲಿ 2,300ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಇವರಲ್ಲಿ ಪ್ಯಾಲೆಸ್ಟೀನ್‌ನ ಜನಸಾಮಾನ್ಯರೇ ಹೆಚ್ಚು. ಹಮಾಸ್ ನಡೆಸಿದ ದಾಳಿಯಲ್ಲಿ ಇಸ್ರೇಲ್‌ನ 1,400ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಗಾಜಾ ಮೇಲೆ ಭೂಧಾಳಿ ನಡೆಸಲು ಇಸ್ರೇಲ್ ಸಜ್ಜಾಗಿದೆ. ದೇಶದ ದಕ್ಷಿಣ ಭಾಗದಲ್ಲಿ ಸಹಸ್ರಾರು ಯೋಧರನ್ನು, ಭಾರಿ ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಸೇನೆ ನಿಯೋಜಿಸಿದೆ. ಭೂಧಾಳಿ ನಡೆಸಲು ಅದು ರಾಜಕೀಯ ನಾಯಕತ್ವದ ಹಸಿರು ನಿಶಾನೆಗೆ ಕಾಯುತ್ತಿದೆ. ಅಲ್ಲದೆ, ಗಡಿಗೆ ಸನಿಹದಲ್ಲಿ ಇದ್ದ ತನ್ನ ಪ್ರಜೆಗಳನ್ನು ಇಸ್ರೇಲ್ ಸುರಕ್ಷಿತ ಪ್ರದೇಶಗಳಿಗೆ ಕಳುಹಿಸಿದೆ.

'ಪ್ಯಾಲೆಸ್ಟೀನಿಯನ್ನರು ತಮ್ಮ ಮನೆಗಳನ್ನು ತೊರೆಯುತ್ತಿರುವುದು ಇನ್ನೂ ನಿಂತಿಲ್ಲ. ಹೀಗಾಗಿ ನೆಲೆ ಕಳೆದುಕೊಳ್ಳಲಿರುವ ಜನರ ಸಂಖ್ಯೆಯು ಇನ್ನೂ ಹೆಚ್ಚಾಗಬಹುದು' ಎಂದು ಪ್ಯಾಲೆಸ್ಟೀನ್ ನಾಗರಿಕರಿಗೆ ಪರಿಹಾರ ಕಲ್ಪಿಸಲು ಕೆಲಸ ಮಾಡುತ್ತಿರುವ ವಿಶ್ವಸಂಸ್ಥೆಯ ಏಜೆನ್ಸಿ ಯುಎನ್‌ಆರ್‌ಡಬ್ಲ್ಯುಎ ಹೇಳಿದೆ.

ಪ್ಯಾಲೆಸ್ಟೀನ್ ಜನ ವಸ್ತುಗಳನ್ನು, ಬಟ್ಟೆಗಳನ್ನು ಕಾರು, ವ್ಯಾನುಗಳಲ್ಲಿ ತುಂಬಿಸಿಕೊಂಡು ಸುರಕ್ಷಿತ ನೆಲೆ ಅರಸಿ ಹೋಗುತ್ತಿರುವುದು ಈಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಆದರೆ ಅವರು ಬೀದಿ ಬದಿಗಳಲ್ಲಿ ಮತ್ತು ವಿಶ್ವಸಂಸ್ಥೆ ನಡೆಸುತ್ತಿರುವ ಶಾಲೆಗಳಲ್ಲಿ ನೆಲೆ ಹುಡುಕಿಕೊಳ್ಳಬೇಕಾಗಿದೆ. ಅವರಿಗೆ ಗಾಜಾ ಪಟ್ಟಿಯಿಂದ ಹೊರ ನಡೆಯಲು ಅವಕಾಶಗಳು ಇಲ್ಲವಾಗಿವೆ. ಇಸ್ರೇಲ್‌ನಲ್ಲಿ, ಹಮಾಸ್ ಬಂಡುಕೋರರು ಒತ್ತೆಯಾಳುಗಳಾಗಿ ಇರಿಸಿಕೊಂಡಿರುವ ಜನರ ಸುರಕ್ಷತೆಯ ಬಗ್ಗೆ ಆತಂಕ ಹೆಚ್ಚಾಗಿದೆ. 'ಅವರನ್ನು ವಾಪಸ್ ಕರೆದುಕೊಂಡು ಬರಬೇಕು' ಎಂದು ಸಂಬಂಧಿಕರು ಹೇಳಿದ್ದಾರೆ.



ಗಾಜಾ ಪಟ್ಟಿಯ ದಕ್ಷಿಣ ಭಾಗದಲ್ಲಿ ಇರುವ ರಫಾ ನಿರಾಶ್ರಿತರ ಶಿಬಿರವು ಇಸ್ರೇಲ್ ದಾಳಿಯ ಪರಿಣಾಮವಾಗಿ ಹಾನಿಗೊಂಡಿದೆ. (ಎಎಫ್‌ಪಿ ಚಿತ್ರ)

ಬಿಕ್ಕಟ್ಟು ತೀವ್ರಗೊಳ್ಳುವ ಅಪಾಯ: ಇರಾನ್ ಎಚ್ಚರಿಕೆ

ದೋಹಾ (ಎಎಫ್‌ಪಿ): ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ಪಡೆಗಳು ಭೂಧಾಳಿ ನಡೆಸಿದರೆ ಮಧ್ಯಪ್ರಾಚ್ಯದ ಇತರ ಕಡೆಗಳಿಗೂ ಬಿಕ್ಕಟ್ಟು ವ್ಯಾಪಿಸಬಹುದು ಎಂದು ಇರಾನ್ ಭಾನುವಾರ ಎಚ್ಚರಿಸಿದೆ.

ಇರಾನ್‌ನ ವಿದೇಶಾಂಗ ಸಚಿವ ಹುಸೇನ್ ಅಮಿರ್–ಅಬ್ದುಲ್ಲಾಹಿಯಾನ್ ಅವರು ಕತಾರ್‌ನ ಅಮೀರ್ ಶೇಖ್ ತಮೀನ್ ಬಿನ್ ಹಮದ್ ಅಲ್–ಥನಿ ಅವರ ಜೊತೆ ಮಾತುಕತೆ ನಡೆಸಿದ್ದಾರೆ. 'ಪರಿಸ್ಥಿತಿಯು ನಿಯಂತ್ರಣದಲ್ಲಿ ಇರುತ್ತದೆ ಎಂಬ ಖಾತರಿ ನೀಡಲು ಯಾರಿಂದಲೂ ಸಾಧ್ಯವಿಲ್ಲ, ಬಿಕ್ಕಟ್ಟು ಇತರೆಡೆಗಳಿಗೆ ಹಬ್ಬುವುದಿಲ್ಲ ಎಂಬ ಖಾತರಿ ನೀಡಲೂ ಸಾಧ್ಯವಿಲ್ಲ' ಎಂದು ಅವರು ಎಚ್ಚರಿಸಿದ್ದಾರೆ.

'ಈಗಿನ ಯುದ್ಧ ಹಾಗೂ ಬಿಕ್ಕಟ್ಟು ಇತರ ಕಡೆಗಳಿಗೆ ಹರಡುವುದನ್ನು ತಡೆಯುವಲ್ಲಿ ಆಸಕ್ತಿ ಇರುವವರು ಗಾಜಾದ ನಾಗರಿಕರ ಮೇಲಿನ ಈಗಿನ ಬರ್ಬರ ದಾಳಿಯನ್ನು ತಡೆಯಬೇಕು' ಎಂದು ಅವರು ಹೇಳಿದ್ದಾರೆ. ಇಸ್ರೇಲ್‌ಗೆ ಬೆಂಬಲ ಸೂಚಿಸಿರುವ ಅಮೆರಿಕದ ಕ್ರಮವನ್ನು ಕೂಡ ಅವರು ಟೀಕಿಸಿದ್ದಾರೆ.

ಇತ್ತ ಅಮೆರಿಕದ ವಾಷಿಂಗ್ಟನ್‌ನಲ್ಲಿ ಮಾತನಾಡಿರುವ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲುವಾನ್ ಅವರು, ಇಸ್ರೇಲ್‌ನ ಬಹುಕಾಲದ ಶತ್ರು, ಹಮಾಸ್‌ನ ಬೆಂಬಲಿಗ ಇರಾನ್ ಈ ಯುದ್ಧದಲ್ಲಿ 'ನೇರವಾಗಿ ಭಾಗಿಯಾಗುವ' ಆತಂಕ ಇದೆ ಎಂದು ಹೇಳಿದ್ದಾರೆ. ಅಲ್ಲದೆ, ಯುದ್ಧವು ತೀವ್ರಗೊಳ್ಳಬಹುದು ಎಂಬ ಭೀತಿಯನ್ನೂ ಅವರು ವ್ಯಕ್ತಪಡಿಸಿದ್ದಾರೆ.

ಆಸ್ಪತ್ರೆಗಳಲ್ಲಿ ಅಗತ್ಯ ವಸ್ತುಗಳ ಕೊರತೆ

ಖಾನ್ ಯೂನಿಸ್ (ಎಪಿ): ಆಸ್ಪತ್ರೆಗಳಲ್ಲಿ ಇಂಧನ ಹಾಗೂ ಇತರ ಅಗತ್ಯ ವಸ್ತುಗಳು ಖಾಲಿಯಾದಲ್ಲಿ ಸಹಸ್ರಾರು ಮಂದಿ ರೋಗಿಗಳು, ಗಾಯಾಳುಗಳು ಪ್ರಾಣ ಕಳೆದುಕೊಳ್ಳಬಹುದು ಎಂದು ಗಾಜಾದ ವೈದ್ಯರು ಎಚ್ಚರಿಸಿದ್ದಾರೆ.

ಇಸ್ರೇಲ್ ಸುತ್ತಲಿನ ಪ್ರದೇಶದಲ್ಲಿ ಅಮೆರಿಕ ಹೆಚ್ಚಿನ ಸಂಖ್ಯೆಯಲ್ಲಿ ಯುದ್ಧನೌಕೆಗಳನ್ನು ನಿಯೋಜಿಸುತ್ತಿದೆ. ಇತ್ತ ಇಸ್ರೇಲ್ ಯೋಧರು ಗಾಜಾ ಗಡಿಯಲ್ಲಿ ತಾಲೀಮು ನಡೆಸಿದ್ದಾರೆ. ಗಾಜಾ ಮೇಲೆ ಇಸ್ರೇಲ್ ನಡೆಸುತ್ತಿರುವ ವೈಮಾನಿಕ ದಾಳಿಯು ಅಲ್ಲಿನ ಪ್ರದೇಶಗಳನ್ನು ಧ್ವಂಸಗೊಳಿಸಿದೆ. ಆದರೆ ಹಮಾಸ್ ಬಂಡುಕೋರರು ಇಸ್ರೇಲ್‌ನತ್ತ ರಾಕೆಟ್ ದಾಳಿ ನಡೆಸುವುದು ನಿಂತಿಲ್ಲ.

ಗಾಜಾ ಪಟ್ಟಿಯ ಉತ್ತರ ಭಾಗದಲ್ಲಿರುವ ಆಸ್ಪತ್ರೆಗಳಲ್ಲಿ ಇರುವ ರೋಗಿಗಳು, ಇನ್‌ಕ್ಯುಬೇಟರ್‌ಗಳಲ್ಲಿ ಇರುವ ನವಜಾತ ಶಿಶುಗಳು ಮತ್ತು ಐಸಿಯುಗಳಲ್ಲಿ ಇರುವವರ ಪಾಲಿಗೆ 'ಸ್ಥಳಾಂತರ ಪ್ರಕ್ರಿಯೆಯೇ ಮರಣದಂಡನೆಯಾಗಬಹುದು' ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಸಿದೆ.

ಗಾಜಾದಲ್ಲಿನ ಆಸ್ಪತ್ರೆಗಳಲ್ಲಿ ಇರುವ ಇಂಧನವು ಇನ್ನು ಎರಡು ದಿನಗಳಲ್ಲಿ ಖಾಲಿಯಾಗುವ ಅಂದಾಜು ಇದೆ. ಇಂಧನ ಖಾಲಿಯಾದರೆ ಕೃತಕ ಉಸಿರಾಟದ ವ್ಯವಸ್ಥೆ, ಡಯಾಲಿಸಿಸ್ ಸೌಲಭ್ಯ ನೀಡಲು ಆಗದು, ಈ ಆರೋಗ್ಯಸೇವೆಗಳ ಅಗತ್ಯ ಇರುವವರಿಗೆ ಸಾವೇ ಗತಿಯಾಗಬಹುದು ಎಂದು ವೈದ್ಯರು ತಿಳಿಸಿದ್ದಾರೆ.

ಅಗತ್ಯ ವಸ್ತು ಪೂರೈಸಲು ಪೋಪ್ ಕರೆ

ವ್ಯಾಟಿಕನ್ ಸಿಟಿ (ಎಎಫ್‌ಪಿ): ಗಾಜಾ ಪಟ್ಟಿ ಪ್ರದೇಶಕ್ಕೆ ಜೀವನಾವಶ್ಯಕ ವಸ್ತುಗಳನ್ನು ಪೂರೈಸಲು ಅಗತ್ಯವಿರುವ ಮಾರ್ಗವನ್ನು ಮುಕ್ತವಾಗಿಸಬೇಕು ಎಂದು ಪೋಪ್ ಫ್ರಾನ್ಸಿಸ್ ಕರೆ ನೀಡಿದ್ದಾರೆ.

'ಕಾನೂನಿಗೆ ಗೌರವ ನೀಡಬೇಕು. ಅಲ್ಲಿನ ಜನರಿಗೆ ಅಗತ್ಯ ವಸ್ತುಗಳನ್ನು ತಲುಪಿಸಲು ಮಾರ್ಗವೊಂದನ್ನು ಮುಕ್ತವಾಗಿ ಇರಿಸುವ ತುರ್ತು ಅಗತ್ಯ ಇದೆ' ಎಂದು ಪೋಪ್ ಅವರು ಹೇಳಿದ್ದಾರೆ. 'ಮಕ್ಕಳು, ರೋಗಿಗಳು, ವೃದ್ಧರು, ಮಹಿಳೆಯರು ಹಾಗೂ ನಾಗರಿಕರು ಈ ಬಿಕ್ಕಟ್ಟಿನ ಬಲಿ ಆಗಬಾರದು ಎಂದು ನಾನು ಒತ್ತಾಯಿಸುತ್ತಿದ್ದೇನೆ' ಎಂದು ಕೂಡ ಅವರು ಹೇಳಿದ್ದಾರೆ.

ನೀರಿನ ಸಂಪರ್ಕ ಮರುಸ್ಥಾಪನೆ

ವಾಷಿಂಗ್ಟನ್ (ರಾಯಿಟರ್ಸ್): ಸಿಎನ್‌ಎನ್ ವಾಹಿನಿಗೆ ಸಂದರ್ಶನ ನೀಡಿರುವ ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲುವಾನ್ ಅವರು, 'ದಕ್ಷಿಣ ಗಾಜಾದಲ್ಲಿ ನೀರಿನ ಸಂಪರ್ಕವನ್ನು ಪುನರಾರಂಭಿಸಿರುವುದಾಗಿ ಇಸ್ರೇಲ್ ಅಧಿಕಾರಿಗಳು ತಿಳಿಸಿದ್ದಾರೆ' ಎಂದು ಹೇಳಿದ್ದಾರೆ.

ಇಸ್ರೇಲ್–ಹಮಾಸ್ ಯುದ್ಧದ ಬಗ್ಗೆ ಭಾನುವಾರ ಪ್ರತಿಕ್ರಿಯಿಸಿರುವ ಚೀನಾದ ವಿದೇಶಾಂಗಸ ಸಚಿವ ವಾಂಗ್ ಯಿ ಅವರು, 'ಇಸ್ರೇಲ್ ನೀಡುತ್ತಿರುವ ಪ್ರತ್ಯುತ್ತರವು ಆತ್ಮರಕ್ಷಣೆಗೆ ಅಗತ್ಯವಿರುವ ಮಿತಿಯನ್ನು ದಾಟಿ ಹೋಗಿದೆ' ಎಂದು ಹೇಳಿದ್ದಾರೆ. ಗಾಜಾದಲ್ಲಿನ ಜನರಿಗೆ ಸಾಮೂಹಿಕವಾಗಿ ಶಿಕ್ಷೆ ಕೊಡುವ ಕ್ರಮವನ್ನು ಕೈಬಿಡಬೇಕು ಎಂದು ಅವರು ಇಸ್ರೇಲ್ ಪ್ರಧಾನಿಯನ್ನು ಆಗ್ರಹಿಸಿದ್ದಾರೆ.

'ತಮ್ಮ ದೇಶದ ಅಲ್ಪಸಂಖ್ಯಾತರ ಬಗ್ಗೆ ಮರುಕ ಪಡಬೇಕಲ್ಲವೇ?'

ಕೋಲ್ಕತ್ತ (ಪಿಟಿಐ): ಪ್ಯಾಲೆಸ್ಟೀನಿಯನ್ನರ ವಿರುದ್ಧದ ದೌರ್ಜನ್ಯದ ಬಗ್ಗೆ ಮರುಕ ಪಡುವವರು ತಮ್ಮದೇ ದೇಶದಲ್ಲಿ ಅಲ್ಪಸಂಖ್ಯಾತರ ಮೇಲಾಗುತ್ತಿರುವ ದೌರ್ಜನ್ಯದ ಬಗ್ಗೆಯೂ ಮರುಕಪಡಬೇಕು ಎಂದು ಲೇಖಕಿ ತಸ್ಲೀಮಾ ನಸ್ರೀನ್ ಹೇಳಿದ್ದಾರೆ.



ತಸ್ಲೀಮಾ ನಸ್ರೀನ್

'ಪ್ಯಾಲೆಸ್ಟೀನಿಯನ್ನರ ಮೇಲಾಗುತ್ತಿರುವ ದೌರ್ಜನ್ಯದ ಬಗ್ಗೆ ಬಾಂಗ್ಲಾದೇಶಿಗರು ಆತಂಕಿತರಾಗಿದ್ದಾರೆ. ಅವರಿಗೆ ಸಹಾಯ ಮಾಡಲು ಕೆಲವರು ಪ್ಯಾಲೆಸ್ಟೀನ್‌ಗೆ ತೆರಳಲೂ ಬಯಸಿದ್ದಾರೆ ಎಂದು ಕೇಳ್ಪಟ್ಟೆ. ವೈಯಕ್ತಿಕವಾಗಿ ಜಗತ್ತಿನಲ್ಲಿ ನಡೆಯುವ ಎಲ್ಲಾ ರೀತಿಯ ದೌರ್ಜನ್ಯವನ್ನು ನಾನು ಖಂಡಿಸುತ್ತೇನೆ. ಆದರೆ ಪ್ಯಾಲೆಸ್ಟೀನಿಯನ್ನರ ಬಗ್ಗೆ ಮರುಕ ಪಡುತ್ತಿರುವವರು ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲಾಗುತ್ತಿರುವ ಆಕ್ರಮಣದ ಬಗ್ಗೆಯೂ ಚಿಂತಿಸಬೇಕು' ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

'ಬಾಂಗ್ಲಾದೇಶವು ಆರ್ಥಿಕ ಬೆಳವಣಿಗೆಯ ಹಾದಿಯಲ್ಲಿ ಸಾಗುತ್ತಿದ್ದರೂ ಮೂಲಭೂತವಾದ ಹೆಚ್ಚುತ್ತಿದೆ. ಲಿಂಗ ಅಸಮಾನತೆ ಪ್ರಮುಖ ಸಮಸ್ಯೆಯಾಗಿ ಮುಂದುವರಿದಿದೆ' ಎಂದು ಅವರು ಹೇಳಿದ್ದಾರೆ.

'ಜೈ ಶ್ರೀರಾಮ್' ಘೋಷಣೆ: ಖಂಡನೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನ ನಡುವಿನ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಪಾಕ್ ತಂಡದ ವಿಕೆಟ್ ಕೀಪರ್–ಬ್ಯಾಟ್ಸ್‌ಮನ್ ಮೊಹಮದ್ ರಿಜ್ವಾನ್ 49 ರನ್‌ಗಳಿಗೆ ವಿಕೆಟ್ ಒಪ್ಪಿಸಿ, ಡ್ರೆಸ್ಸಿಂಗ್ ಕೊಠಡಿಗೆ ಹಿಂತಿರುಗುವಾಗ ಕ್ರಿಕೆಟ್ ಅಭಿಮಾನಿಗಳು 'ಜೈ ಶ್ರೀರಾಮ್' ಘೋಷಣೆ ಕೂಗಿರುವುದನ್ನು ತಮಿಳುನಾಡು ಕ್ರೀಡಾ ಸಚಿವ ಉದಯನಿಧಿ ಸ್ಟಾಲಿನ್ ಖಂಡಿಸಿದ್ದಾರೆ.

ಕ್ರಿಕೆಟ್ ಅಭಿಮಾನಿಗಳ ಈ ನಡೆಯುವ 'ಸ್ವೀಕಾರಾರ್ಹವಲ್ಲ ಮತ್ತು ಕೆಳಮಟ್ಟದ ವರ್ತನೆ' ಎಂದು ಟೀಕಿಸಿ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.



ಉದಯನಿಧಿ

'ಭಾರತವು ತನ್ನ ಕ್ರೀಡಾ ಮನೋಭಾವ ಮತ್ತು ಆತಿಥ್ಯಕ್ಕೆ ಹೆಸರುವಾಸಿಯಾಗಿದೆ. ಆದಾಗ್ಯೂ, ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಪಾಕಿಸ್ತಾನದ ಆಟಗಾರರೊಂದಿಗೆ ಪ್ರೇಕ್ಷಕರು ನಡೆದುಕೊಂಡ ರೀತಿ ಸ್ವೀಕಾರಾರ್ಹವಲ್ಲ ಮತ್ತು ಇದು ಕೆಳಮಟ್ಟದ ವರ್ತನೆ. ಕ್ರೀಡೆಗಳು ದೇಶಗಳ ನಡುವೆ ಮನಸುಗಳನ್ನು ಒಗ್ಗೂಡಿಸುವ ಶಕ್ತಿಯಾಗಬೇಕು. ನಿಜವಾದ ಸಹೋದರತ್ವ ಬೆಳೆಸಬೇಕು. ದ್ವೇಷವನ್ನು ಹರಡುವ ಸಾಧನವಾಗಿ ಬಳಸುತ್ತಿರುವುದು ಖಂಡನೀಯ' ಎಂದು ಅವರು ಪೋಸ್ಟ್ ಮಾಡಿದ್ದಾರೆ.



ಸನ್ನದ್ಧತೆ

ಭಾರತೀಯ ನೌಕಾಪಡೆಯ ಯುದ್ಧವಿಮಾನ ನಿರೋಧಕ ವ್ಯವಸ್ಥೆಯ ಕಾರ್ಯಾಚರಣೆ ಸನ್ನದ್ಧತೆಯನ್ನು ಮುಂಬೈನಲ್ಲಿ ಭಾನುವಾರ ಪರಿಶೀಲನೆ ನಡೆಸಲಾಗಿದ್ದು, ಚಿತ್ರವನ್ನು ರಕ್ಷಣಾ ಸಚಿವಾಲಯ ಬಿಡುಗಡೆ ಮಾಡಿದೆ

ಮಹುವಾ ಮೊಯಿತ್ರಾ ವಿರುದ್ಧ ಸ್ಪೀಕರ್‌ಗೆ ದೂರು

ಪ್ರಜಾವಾಣಿ ವಾರ್ತೆ

ನವದೆಹಲಿ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದೆ ಮಹುವಾ ಮೊಯಿತ್ರಾ ಅವರು ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಹಣ ಹಾಗೂ ಉಡುಗೊರೆಗಳನ್ನು ಪಡೆದಿದ್ದಾರೆ ಎಂದು ಆರೋಪಿಸಿ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಭಾನುವಾರ ದೂರು ನೀಡಿದ್ದಾರೆ.

ಮೊಯಿತ್ರಾ ಅವರನ್ನು ಕೂಡಲೇ ಅಮಾನತು ಮಾಡಿ, ಅವರ ವಿರುದ್ಧ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಮೊಯಿತ್ರಾ ಅವರ ವಿರುದ್ಧ ವಕೀಲ ಅನಂತ್ ದೇಹದ್ರಾಯ್ ಎಂಬವರು ಸಿಬಿಐಗೆ ಶನಿವಾರ ನೀಡಿದ್ದ ದೂರಿನಲ್ಲಿರುವ ಮಾಹಿತಿಯನ್ನು ಆಧರಿಸಿ ಸ್ಪೀಕರ್‌ಗೆ ದೂರು ನೀಡಿರುವುದಾಗಿ ದುಬೆ ತಿಳಿಸಿದ್ದಾರೆ.

ತಮ್ಮ ಉದ್ದೇಶಗಳನ್ನು ಮರೆಮಾಚಲು ಮೊಯಿತ್ರಾ ಅವರು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಜಾಣತನದಿಂದ ಟೀಕೆಗಳನ್ನು ಮಾಡುತ್ತಿದ್ದಾರೆ ಎಂದು ದುಬೆ ಅವರು ದೂರಿನಲ್ಲಿ ಆರೋಪಿಸಿದ್ದಾರೆ.

ಈ ಕುರಿತು ಎಕ್ಸ್ (ಟ್ವಿಟರ್) ವೇದಿಕೆಯಲ್ಲಿ ಪ್ರತಿಕ್ರಿಯಿಸಿರುವ ಮೊಯಿತ್ರಾ ಅವರು, 'ನನ್ನ ವಿರುದ್ಧ ದುರುದ್ದೇಶಪೂರಿತ ಆರೋಪಗಳನ್ನು ಮಾಡಿ, ಅದನ್ನು ನಕಲಿ ಪದವೀಧರರ ಮೂಲಕ ಪ್ರಚಾರ ಮಾಡುವ ಮೂಲಕ ಅದಾನಿ ಸಮೂಹಕ್ಕೆ ನನ್ನ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

ಕೇರಳ: ಮಳೆ, ಭೂಕುಸಿತ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಹಲವು ಜಿಲ್ಲೆಗಳಲ್ಲಿ ಎರಡು ದಿನಗಳಿಂದ ಸತತ ಭಾರಿ ಮಳೆಯಾಗುತ್ತಿದ್ದು, ರಾಜ್ಯದ ಅನೇಕ ಭಾಗಗಳಲ್ಲಿ ಭಾನುವಾರ ಭೂಕುಸಿತ ಮತ್ತು ಪ್ರವಾಹ ಉಂಟಾಗಿದೆ.

ರಾಜ್ಯದ ದಕ್ಷಿಣ ಭಾಗದ ತಿರುವನಂತಪುರದಲ್ಲಿ ಹಲವು ಪ್ರದೇಶಗಳು ಜಲಾವೃತವಾಗಿವೆ. ಜನಜೀವನ ಅಸ್ತವ್ಯಸ್ತಗೊಂಡಿದೆ. ಎರ್ನಾಕುಳಂ ಜಿಲ್ಲೆಯ ಹಲವು ಭಾಗಗಳಲ್ಲಿ ರಸ್ತೆಗಳು ಜಲಾವೃತವಾಗಿವೆ. ಮನೆಗಳಿಗೆ ನೀರು ನುಗ್ಗಿದೆ.

ಶನಿವಾರ ಸಂಜೆಯಿಂದ ಸುರಿಯುತ್ತಿರುವ ಭಾರಿ ಮಳೆಗೆ ರಾಜಧಾನಿ ತಿರುವನಂತಪುರ ನಗರದ ವಿವಿಧೆಡೆ ಹಾಗೂ ಉಪನಗರಗಳಲ್ಲಿ ನೂರಾರು ಮನೆಗಳು ಜಲಾವೃತವಾಗಿವೆ. ನೂರಾರು ಮನೆಗಳಿಗೆ ಹಾನಿಯಾಗಿದೆ. ಸುಮಾರು 500 ಕುಟುಂಬಗಳನ್ನು ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ. ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ನಗರದ ಪ್ರಮುಖ ಖಾಸಗಿ ಆಸ್ಪತ್ರೆಯೊಂದರ ನೆಲ ಮಹಡಿ ಕೂಡ ಜಲಾವೃತವಾಗಿದೆ. ಕಳಕೂಟಂ ಕಾಲೊನಿಯ ಟೆಕ್ನೋ ಪಾರ್ಕ್ ಪಾರ್ಕ್ ಪ್ರದೇಶವೂ ಜಲಾವೃತವಾಗಿದೆ. ಭಾನುವಾರ ಬೆಳ್ಳಂಬೆಳಿಗ್ಗೆಯೇ ಮಳೆ ನೀರು ಹಲವು ಮನೆಗಳಿಗೆ ನುಗ್ಗಿದಾಗ ನಿಗರ ನಿವಾಸಿಗಳು ಬೆಚ್ಚಿಬಿದ್ದರು. ರಾಜಕಾಲುವೆಗಳ ಅಸಮರ್ಪಕ ನಿರ್ವಹಣೆಯೇ ನೀರು ನುಗ್ಗಲು ಕಾರಣವೆಂದು ನಿವಾಸಿಗಳು ಸ್ಥಳೀಯಾಡಳಿತವನ್ನು ದೂರಿದ್ದಾರೆ.

'2018ರ ಪ್ರವಾಹದ ವೇಳೆಯೂ ಇಂತಹ ಪರಿಸ್ಥಿತಿ ಉಂಟಾಗಿರಲಿಲ್ಲ. ಮಧ್ಯರಾತ್ರಿಯ ನಂತರ ಹಠಾತ್ತನೆ ಮನೆಗಳಿಗೆ ನೀರು ನುಗ್ಗಲಾರಂಭಿಸಿತು. ಇದು ಅನಿರೀಕ್ಷಿತವಾಗಿತ್ತು' ಎಂದು ರಾಜಧಾನಿಯ ನಿವಾಸಿಗಳು ಹೇಳಿದ್ದಾರೆ.

ರಕ್ಷಣಾ ಸಿಬ್ಬಂದಿ, ತಿರುವನಂತಪುರದಲ್ಲಿ ಜಲಾವೃತ ಪ್ರದೇಶಗಳಿಂದ ಜನರನ್ನು ಗಾಳಿ ತುಂಬಿದ ದೋಣಿಗಳಲ್ಲಿ ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸುತ್ತಿರುವ ದೃಶ್ಯಗಳನ್ನು ಟಿ.ವಿ ವಾಹಿನಿಯೊಂದು ಪ್ರಸಾರ ಮಾಡಿದೆ.

ರಾಜಧಾನಿಯಲ್ಲಿ ಪರಿಸ್ಥಿತಿ ಗಂಭೀರ

ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ, ತಿರುವನಂತಪುರ ನಗರದಲ್ಲಿ ಮಳೆಯು ಅಸಾಮಾನ್ಯ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಹಲವೆಡೆ ಜಲಾವೃತವಾಗಿರುವುದು ಮತ್ತು ಹೆಚ್ಚುತ್ತಿರುವ ಸಮುದ್ರದ ನೀರಿನಮಟ್ಟದಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಪ್ರವಾಹಪೀಡಿತ ಪ್ರದೇಶದಲ್ಲಿ ಜಿಲ್ಲಾಡಳಿತವು ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ನಡೆಸುತ್ತಿದೆ ಎಂದು ಫೇಸ್‌ಬುಕ್‌ನಲ್ಲಿ ತಿಳಿಸಿದ್ದಾರೆ.

ಪ್ರವಾಹ ಪರಿಸ್ಥಿತಿ ಕುರಿತು ನಡೆದ ಸಚಿವರ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಕೆ.ರಾಜನ್, ತಿರುವನಂತಪುರದಲ್ಲಿ ಹಲವು ಭಾಗಗಳಲ್ಲಿ ಗಂಭೀರ ಹಾನಿ ಆಗಿದೆ. ಶನಿವಾರ ರಾತ್ರಿಯಿಂದ ರಾಜಧಾನಿಯಲ್ಲಿ 10 ಸೆಂ.ಮೀ ನಷ್ಟು ಮಳೆಯಾಗಿದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ದುಪ್ಪಟ್ಟು ಮಳೆಯಾಗಿದೆ. ಇದು ಕೂಡ ತಗ್ಗುಪ್ರದೇಶಗಳು ಜಲಾವೃತವಾಗಿ, ಪ್ರವಾಹ ಸೃಷ್ಟಿಗೆ ಕಾರಣವಾಗಿದೆ ಎಂದು ತಿಳಿಸಿದರು.

ನಾಲ್ಕು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್

ತಿರುವನಂತಪುರ, ಕೊಲ್ಲಂ, ಪತ್ತನಂತಿಟ್ಟ ಮತ್ತು ಆಲಪ್ಪುಳ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಮತ್ತು ಎಂಟು ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್ ಅನ್ನು ಭಾರತೀಯ ಹವಾಮಾನ ಇಲಾಖೆ ಘೋಷಿಸಿದೆ. ಹವಾಮಾನ ಮುನ್ಸೂಚನೆಯ ಪ್ರಕಾರ, ಐದು ದಿನಗಳವರೆಗೆ ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದೆ.

ಎಂ.ಎಸ್. ಗಿಲ್ ನಿಧನ



ಎಂ.ಎಸ್.ಗಿಲ್

ನವದೆಹಲಿ (ಪಿಟಿಐ): ಅಲ್ಪಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಭಾರತ ಚುನಾವಣಾ ಆಯೋಗದ ನಿವೃತ್ತ ಮುಖ್ಯ ಚುನಾವಣಾ ಆಯುಕ್ತ ಹಾಗೂ ಕಾಂಗ್ರೆಸ್ ನಾಯಕ ಎಂ.ಎಸ್. ಗಿಲ್ (86) ಭಾನುವಾರ ದಕ್ಷಿಣ ದೆಹಲಿಯ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪತ್ನಿ , ಮೂವರು ಪುತ್ರಿಯರು ಇದ್ದಾರೆ. 1996ರ ಡಿಸೆಂಬರ್‌ನಿಂದ 2001ರ ಜೂನ್‌ವರೆಗೆ ಗಿಲ್, ಆಯೋಗದ ಮುಖ್ಯಸ್ಥರಾಗಿದ್ದರು. ನಿವೃತ್ತಿ ನಂತರ ಕಾಂಗ್ರೆಸ್‌ನಿಂದ ರಾಜ್ಯಸಭೆ ಸದಸ್ಯರಾದ ಅವರು, 2008ರಲ್ಲಿ ಕೇಂದ್ರ ಕ್ರೀಡಾ ಸಚಿವರಾಗಿದ್ದರು. . ಸೋಮವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

'ತಂತ್ರಜ್ಞಾನ ಹಂಚಿಕೆ: ಅಮೆರಿಕ ಕೋರಿಕೆ'

ರಾಮೇಶ್ವರ (ತಮಿಳುನಾಡು) (ಪಿಟಿಐ): 'ಚಂದ್ರಯಾನ–3'ರ ಯಶಸ್ಸಿನ ಬಳಿಕ ದೇಶದ ಬಾಹ್ಯಾಕಾಶ ಕ್ಷೇತ್ರದ ಆಯಾಮವೂ ಬದಲಾಗಿದೆ. ಅಮೆರಿಕದಲ್ಲಿ ಅಂತರಿಕ್ಷ ನೌಕೆಯ ಅಭಿವೃದ್ಧಿಯಲ್ಲಿ ತೊಡಗಿರುವ ಪರಿಣತರು ಬಾಹ್ಯಾಕಾಶ ತಂತ್ರಜ್ಞಾನ ಹಂಚಿಕೊಳ್ಳುವಂತೆ ಭಾರತಕ್ಕೆ ಕೋರಿದ್ದಾರೆ' ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.



ಸೋಮನಾಥ್

ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಫೌಂಡೇಷನ್‌ನಿಂದ ಭಾನುವಾರ ಇಲ್ಲಿ ಹಮ್ಮಿಕೊಂಡಿದ್ದ ಕಲಾಂ ಅವರ 92ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಭಾರತವು ಜ್ಞಾನ ಮತ್ತು ಬುದ್ಧಿಶಕ್ತಿಯು ಇಡೀ ವಿಶ್ವದಲ್ಲಿಯೇ ಶ್ರೇಷ್ಠ ಸ್ಥಾನ ಪಡೆದಿದೆ' ಎಂದ ಅವರು, 'ಚಂದ್ರಯಾನ–3'ರ ಗಗನನೌಕೆಯ ಉಡ್ಡಯನಕ್ಕೂ ಮೊದಲು ನಾಸಾ ವಿಜ್ಞಾನಿಗಳನ್ನು ಪರಿಶೀಲನೆಗೆ ಆಹ್ವಾನಿಸಿದಾಗಿನ ಪ್ರಸಂಗಗಳನ್ನು ಮೆಲುಕು ಹಾಕಿದರು. 'ಜೆಟ್ ನೋದನಾ ಪ್ರಯೋಗಾಲಯದಲ್ಲಿ ರಾಕೆಟ್ ನಿರ್ಮಾಣದಲ್ಲಿ ತೊಡಗಿರುವ ನಾಸಾ–ಜೆಪಿಎಲ್‌ನ 5ರಿಂದ 6 ವಿಜ್ಞಾನಿಗಳನ್ನು ಇಸ್ರೊ ಕೇಂದ್ರ ಕಚೇರಿಗೆ ಆಹ್ವಾನಿಸಲಾಗಿತ್ತು. ಅವರಿಗೆ 'ಚಂದ್ರಯಾನ–3' ಯೋಜನೆ, ನೌಕೆಯ ವಿನ್ಯಾಸ ಕುರಿತು ವಿವರಿಸಿದೆವು. ಆಗ 'ನಾವು ಹೇಳುವುದು ಏನೂ ಇಲ್ಲ. ಎಲ್ಲವೂ ಸರಿಯಾಗಿದೆ' ಎಂದಷ್ಟೇ ಅವರು ಉತ್ತರಿಸಿದರು' ಎಂದರು.

ರಿಲಯನ್ಸ್ ಮೌಲ್ಯ ₹22 ಸಾವಿರ ಕೋಟಿ ಹೆಚ್ಚಳ

ನವದೆಹಲಿ(ಪಿಟಿಐ): ಪ್ರಮುಖ 10 ಸಂಸ್ಥೆಗಳ 6 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ ಕಳೆದ ವಾರ ₹70,527 ಕೋಟಿಗೆ ಏರಿಕೆಯಾಗಿದ್ದು, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅತಿ ಹೆಚ್ಚು ಲಾಭಗಳಿಸಿದೆ.

ಹಿಂದೂಸ್ತಾನ್ ಯೂನಿಲಿವರ್ ಲಿಮಿಟೆಡ್, ಭಾರ್ತಿ ಏರ್‌ಟೆಲ್, ಐಟಿಸಿ, ಐಸಿಐಸಿಐ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭಗಳಿಸಿದ್ದರೆ, ಇನ್ಫೊಸಿಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸ್ (ಟಿಸಿಎಸ್), ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬಜಾಜ್ ಫೈನಾನ್ಸ್ ಹಿಂದುಳಿದಿವೆ.

ರಿಲಯನ್ಸ್ ಇಂಡಸ್ಟ್ರೀಸ್ ಮಾರುಕಟ್ಟೆ ಮೌಲ್ಯ ₹22,191 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಮೌಲ್ಯವು ₹15.9 ಲಕ್ಷ ಕೋಟಿ ಕೋಟಿಗೆ ಏರಿಕೆಯಾಗಿದೆ. ಇದು 10 ಪ್ರಮುಖ ಸಂಸ್ಥೆಗಳಲ್ಲಿಯೇ ಅತಿ ಹೆಚ್ಚಿನ ಏರಿಕೆ ಎನಿಸಿಕೊಂಡಿದೆ.

ಹಿಂದೂಸ್ತಾನ್ ಯೂನಿಲಿವರ್ ₹17,225 ಕೋಟಿ, ಭಾರ್ತಿ ಏರ್‌ಟೆಲ್ ₹16,953 ಕೋಟಿ, ಐಟಿಸಿ ₹7,607 ಕೋಟಿ, ಐಸಿಐಸಿಐ ಬ್ಯಾಂಕ್ ₹4,581 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹1,971 ಕೋಟಿ ಹೆಚ್ಚಾಗಿದೆ. ಇನ್ಫೊಸಿಸ್ ₹19,403 ಕೋಟಿ, ಟಾಟಾ ಕನ್ಸಲ್ಟೆನ್ಸಿ ಸರ್ವಿಸ್ ₹18,258, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ₹16,019 ಕೋಟಿ ಮತ್ತು ಬಜಾಜ್ ಫೈನಾನ್ಸ್ ₹7,137 ಕೋಟಿ ಇಳಿಕೆ ಆಗಿದೆ.

ಮಾರುಕಟ್ಟೆ ಮೇಲೆ ವಿವಿಧ ವಿದ್ಯಮಾನಗಳ ಪ್ರಭಾವ?

ನವದೆಹಲಿ (ಪಿಟಿಐ): ಎರಡನೇ ತ್ರೈಮಾಸಿಕದ ವರಮಾನ, ಕಚ್ಚಾ ತೈಲದ ಪೂರೈಕೆ, ಮಧ್ಯ ಪ್ರಾಚ್ಯದ ಅನಿಶ್ಚಿತ ಸ್ಥಿತಿಯು ದೇಶೀಯ ಮಾರುಕಟ್ಟೆಯ ವಹಿವಾಟಿನ ಮೇಲೆ ಪರಿಣಾಮ ಬೀರಲಿದೆ ಎಂದು ತಜ್ಞರು ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರ (ಎಫ್‌ಐಐ) ಚಟುವಟಿಕೆಗಳು ಕೂಡ ಷೇರು ಮಾರುಕಟ್ಟೆಯ ಮೇಲೆ ಪ್ರಭಾವ ಬೀರಬಹುದು. ವಿದೇಶಿ ಹೂಡಿಕೆದಾರರು ಈ ತಿಂಗಳಲ್ಲಿ ಷೇರು ಮಾರುಕಟ್ಟೆಯಿಂದ ₹9,800 ಕೋಟಿಯನ್ನು ಹಿಂದಕ್ಕೆ ಪಡೆದಿದ್ದಾರೆ. ಅಮೆರಿಕದ ಬಾಂಡ್ ಲಾಭದಲ್ಲಿ ಆಗಿರುವ ಹೆಚ್ಚಳ ಮತ್ತು ಇಸ್ರೇಲ್–ಹಮಾಸ್ ಸಂಘರ್ಷವು ವಿದೇಶಿ ಹೂಡಿಕೆದಾರರು ಹೂಡಿಕೆ ಹಿಂದಕ್ಕೆ ಪಡೆಯಲು ಮುಖ್ಯ ಕಾರಣವಾಗಿವೆ.

ಮಾರುಕಟ್ಟೆಯು ಕಳೆದ ವಾರದಲ್ಲಿ ಹೆಚ್ಚಿನ ಏರಿಳಿತ ಕಂಡಿದೆ ಮತ್ತು ಅತಿಯಾಗಿ ಚಂಚಲವಾಗಿಯೂ ಇತ್ತು. ಹಾಗಿದ್ದರೂ ವಾರದ ಕೊನೆಯ ಹೊತ್ತಿಗೆ ಸಕಾರಾತ್ಮಕವಾಗಿತ್ತು. ದೇಶೀಯ ಮಾರುಕಟ್ಟೆಯಲ್ಲಿ ನಗದು ಹರಿವು ಹೆಚ್ಚಳವು ಇದಕ್ಕೆ ಕಾರಣವಾಗಿತ್ತು. ಮುಂಬೈ ಷೇರು ಮಾರುಕಟ್ಟೆಯು ಕಳೆದ ವಾರ ಶೆ 287.11 ಅಂಶ ಅಥವಾ ಶೇ 0.43ರಷ್ಟು ಏರಿಕೆ ಕಂಡಿದೆ.

ಸಕ್ಕರೆ ದಾಸ್ತಾನು ವಿವರ ಸಲ್ಲಿಕೆಗೆ ಕೊನೆ ದಿನ ನಾಳೆ

ನವದೆಹಲಿ(ಪಿಟಿಐ): ಸಕ್ಕರೆ ವ್ಯಾಪಾರದಲ್ಲಿ ತೊಡಗಿರುವ ಎಲ್ಲರೂ ತಮ್ಮಲ್ಲಿರುವ ಸಕ್ಕರೆ ದಾಸ್ತಾನು ವಿವರವನ್ನು ಅಕ್ಟೋಬರ್ 17ರೊಳಗೆ ಆಹಾರ ಸಚಿವಾಲಯದ ವೆಬ್‌ಸೈಟ್‌ನಲ್ಲಿ ದಾಖಲಿಸಬೇಕು. ಈ ಆದೇಶ ಉಲ್ಲಂಘನೆ ಮಾಡಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ವ್ಯಾಪಾರಿಗಳಿಗೆ ಸರ್ಕಾರ ಎಚ್ಚರಿಕೆ ನೀಡಿದೆ.

ಆಹಾರ ಸಚಿವಾಲಯವು ಸೆಪ್ಟೆಂಬರ್ 23ರಂದು ಆದೇಶ ಜಾರಿ ಮಾಡಿ, ಸಕ್ಕರೆ ದಾಸ್ತಾನು ವ್ಯಾಪಾರದಲ್ಲಿ ತೊಡಗಿರುವ ಎಲ್ಲ ಮಾರಾಟಗಾರರು ಪ್ರತಿ ವಾರ ತಮ್ಮಲ್ಲಿರುವ ಸಕ್ಕರೆ ದಾಸ್ತಾನು ವಿವರವನ್ನು ವೆಬ್‌ಸೈಟ್‌ನಲ್ಲಿ ದಾಖಲೆ ಮಾಡುವಂತೆ ತಿಳಿಸಿತ್ತು. ಆದರೆ ಹೆಚ್ಚಿನ ವ್ಯಾಪಾರಿಗಳು ಇದುವರೆಗೂ ಸಕ್ಕರೆ ದಾಸ್ತಾನು ಮಾಹಿತಿ ಸಲ್ಲಿಸಿಲ್ಲ. ಮಾರಾಟಗಾರರು ದಾಸ್ತಾನು ಮಾಹಿತಿ ನೀಡದೆ ಇರುವುದು ಸಕ್ಕರೆ ಮಾರುಕಟ್ಟೆಯ ಸಮತೋಲನಕ್ಕೆ ಅಡ್ಡಿಯಾಗುತ್ತಿದೆ. ವ್ಯಾಪಾರಿಗಳು ಅಕ್ಟೋಬರ್ 17ರೊಳಗೆ ಸಕ್ಕರೆ ದಾಸ್ತಾನು ಮಾಹಿತಿ ನೀಡಬೇಕು. ಇದು ಅವರಿಗೆ ಕೊನೆಯ ಅವಕಾಶ. ನಿಯಮ ಉಲ್ಲಂಘಿಸಿದರೆ ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಆಹಾರ ಸಚಿವಾಲಯ ತಿಳಿಸಿದೆ.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹295-476
ದ್ವಿತಳಿ (ಬಿ.ವಿ)
₹301-590

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹555
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹562

ಅಫ್ಗಾನಿಸ್ತಾನ: ಮತ್ತೆ ಭೂಕಂಪ, 2 ಸಾವು

ಇಸ್ಲಾಮಾಬಾದ್ (ಎಪಿ): ಕಳೆದ ವಾರ ಸಂಭವಿಸಿದ ಪ್ರಬಲ ಭೂಕಂಪದಿಂದ ಎರಡು ಸಾವಿರಕ್ಕೂ ಹೆಚ್ಚು ಜನರ ಜೀವಹಾನಿಯಾದ ಅಫ್ಗಾನಿಸ್ತಾನದ ಪಶ್ಚಿಮ ಭಾಗದಲ್ಲಿ ಭಾನುವಾರ ಮತ್ತೆ ಭೂಮಿ ಕಂಪಿಸಿದೆ. ರಿಕ್ಟರ್ ಮಾಪಕದಲ್ಲಿ 6.3 ತೀವ್ರತೆ ದಾಖಲಾಗಿದೆ.

ಈವರೆಗೆ ಒಬ್ಬರು ಸಾವನ್ನಪ್ಪಿದ್ದು, ಸುಮಾರು 150 ಜನರು ಗಾಯಗೊಂಡಿದ್ದಾರೆ. ಸಾವು–ನೋವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎಂದು ಹೆರಾತ್ ಪ್ರಾಂತ್ಯದ ತುರ್ತು ಪರಿಹಾರ ತಂಡದ ಮುಖ್ಯಸ್ಥ ಮೊಹಮ್ಮದ್ ಜಹೀರ್ ನೂರ್ಝೈ ಹೇಳಿದ್ದಾರೆ.

ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆಯು, ಭೂಕಂಪದ ಕೇಂದ್ರ ಬಿಂದುವು ಪ್ರಾಂತೀಯ ರಾಜಧಾನಿ ಹೆರಾತ್‌ನ ಹೊರಗೆ ಸುಮಾರು 34 ಕಿಲೋಮೀಟರ್ ಮತ್ತು ಮೇಲ್ಮೈಯಿಂದ ಎಂಟು ಕಿಲೋಮೀಟರ್ ಆಳದಲ್ಲಿತ್ತು ಎಂದು ಹೇಳಿದೆ. ಅ.7 ರಂದು ಸಂಭವಿಸಿದ ಭೂಕಂಪ ಮತ್ತು ನಂತರದ ಕಂಪನಗಳಿಂದ ಹೆರಾತ್‌ನ ಹಲವು ಹಳ್ಳಿಗಳು ನೆಲಸಮಗೊಂಡಿದ್ದವು.

ತೆರಿಗೆ ಉಳಿಸಲು ಇಎಲ್‌ಎಸ್‌ಎಸ್ ಫಂಡ್



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಸಂಪತ್ತು ಗಳಿಕೆಯ ಜೊತೆಜೊತೆಗೆ ತೆರಿಗೆಯನ್ನೂ ಉಳಿಸಬೇಕು ಎನ್ನುವವರಿಗೆ ಉತ್ತಮ ಆಯ್ಕೆ ಇಎಲ್‌ಎಸ್‌ಎಸ್ ಮ್ಯೂಚುಯಲ್ ಫಂಡ್. ಈಕ್ವಿಟಿ ಆಧಾರಿತ ಇಎಲ್‌ಎಸ್‌ಎಸ್ ಫಂಡ್‌ಗಳು ಹೇಗೆ ಕೆಲಸ ಮಾಡುತ್ತವೆ? ಈ ಫಂಡ್‌ಗಳು ಯಾವ ಕಂಪನಿಗಳ ಮೇಲೆ ಹಣ ತೊಡಗಿಸುತ್ತವೆ? ತೆರಿಗೆ ನಿಯಮ ಏನು..ಲಾಭಾಂಶ ಎಷ್ಟು? ಎಲ್ಲವನ್ನು ಈ ಲೇಖನದಲ್ಲಿ ತಿಳಿಯೋಣ ಬನ್ನಿ.

ಏನಿದು ಇಎಲ್‌ಎಸ್‌ಎಸ್ ಫಂಡ್: ಇಎಲ್‌ಎಸ್‌ಎಸ್ ಅಂದ್ರೆ ಈಕ್ವಿಟಿ ಲಿಂಕ್ಡ್ ಸೇವಿಂಗ್ಸ್ ಸ್ಕೀಂ ಅಂತ. ಇದೊಂದು ಹೂಡಿಕೆ ವೈವಿಧ್ಯತೆ ಹೊಂದಿರುವ ಫಂಡ್. ಈ ಫಂಡ್‌ಗಳು ಹೂಡಿಕೆದಾರರ ಶೇ 80 ರಷ್ಟು ಹಣವನ್ನು ಷೇರು ಮಾರುಕಟ್ಟೆಯಲ್ಲಿ (ಈಕ್ವಿಟಿ) ತೊಡಗಿಸಬೇಕು. ಆದರೆ ಇಂತದ್ದೇ ಗಾತ್ರದ ಕಂಪನಿಯಲ್ಲಿ ಹೂಡಿಕೆ ಮಾಡಬೇಕು ಎಂಬ ಯಾವುದೇ ನಿಯಮವಿಲ್ಲ. ಲಾರ್ಜ್, ಮಿಡ್ ಅಥವಾ ಸ್ಮಾಲ್ ಕ್ಯಾಪ್ ಅಂದ್ರೆ ದೊಡ್ಡ, ಮಧ್ಯಮ ಅಥವಾ ಸಣ್ಣ ಗಾತ್ರದ ಕಂಪನಿಗಳಲ್ಲಿ ಹೂಡಿಕೆದಾರರ ಹಣವನ್ನು ತೊಡಗಿಸಬಹುದು. ಇಷ್ಟೇ ಅಲ್ಲ, ಇಂತದ್ದೇ ವಲಯದಲ್ಲಿ ಹೂಡಿಕೆ ಮಾಡಬೇಕು ಎಂಬ ಕಟ್ಟುಪಾಡು ಸಹ ಇಲ್ಲ; ಅಂದರೆ ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್, ವಾಹನ ನಿರ್ಮಾಣ ಹೀಗೆ ಫಂಡ್ ಮ್ಯಾನೇಜರ್‌ಗೆ ಯಾವ ವಲಯದಲ್ಲಿ ದೀರ್ಘಾವಧಿಯಲ್ಲಿ ಹೆಚ್ಚು ಲಾಭ ಗಳಿಸುವ ಅವಕಾಶ ಇದೆ ಎನಿಸುತ್ತದೆಯೋ ಅಲ್ಲಿ ಹೂಡಿಕೆ ಮಾಡಬಹುದು.

ಹೂಡಿಕೆದಾರರ ಹಣವನ್ನು ಎಲ್ಲಿ ತೊಡಗಿಸಬೇಕು ಎಂದು ನಿರ್ಧಾರ ಮಾಡುವ ಸಂಪೂರ್ಣ ಸ್ವಾತಂತ್ರ್ಯ ಫಂಡ್ ಮ್ಯಾನೇಜರ್‌ಗೆ ಇದ್ದರೂ ಬಹುತೇಕ ಇಎಲ್‌ಎಸ್‌ಎಸ್ ಮ್ಯೂಚುಯಲ್ ಫಂಡ್‌ಗಳು ಭಾರತದ 100 ಅಗ್ರಮಾನ್ಯ ಲಾರ್ಜ್ ಕ್ಯಾಪ್ ಕಂಪನಿಗಳ ಮೇಲೆ ಹೆಚ್ಚು ಹೂಡಿಕೆ ಮಾಡುತ್ತವೆ. ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಕಂಪನಿಗಳಲ್ಲಿ ಸಣ್ಣ ಪ್ರಮಾಣದ ಹೂಡಿಕೆ ಮಾಡುತ್ತವೆ.

ಈ ಫಂಡ್ ಯಾರಿಗೆ ಸೂಕ್ತ: ತಿಂಗಳ ಸಂಬಳ ಪಡೆಯುವವರ ಒಂದಷ್ಟು ಹಣವು ಕಾರ್ಮಿಕ ಭವಿಷ್ಯ ನಿಧಿಗೆ (ಇಪಿಎಫ್) ಹೋಗುತ್ತದೆ. ಇಪಿಎಫ್ ನಿಶ್ಚಿತ ಬಡ್ಡಿ ಆದಾಯವನ್ನು ತಂದುಕೊಡುತ್ತದೆ. ನಿಶ್ಚಿತ ಆದಾಯದ ಜೊತೆಗೆ ಕೊಂಚ ರಿಸ್ಕ್ ಇದ್ದರೂ ಪರವಾಗಿಲ್ಲ ಹೆಚ್ಚಿನ ಆದಾಯ ಗಳಿಸಬೇಕು ಎನ್ನುವವರಿಗೆ ಇಎಲ್‌ಎಸ್‌ಎಸ್ ಮ್ಯೂಚುಯಲ್ ಫಂಡ್ ಸರಿ ಹೊಂದುತ್ತದೆ. 3 ವರ್ಷಗಳ ಲಾಕಿನ್ ಅವಧಿ ಇರುವ ಈ ಫಂಡ್‌ನ ಹೂಡಿಕೆಗೆ ಆದಾಯ ತೆರಿಗೆಯ ಸೆಕ್ಷನ್ 80 ಸಿ ಅಡಿ ₹ 1.5 ಲಕ್ಷದ ವರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಒಟ್ಟಾರೆಯಾಗಿ ಇದರಲ್ಲಿ ಹೂಡಿಕೆ ಮಾಡುವುದರಿಂದ ಸುಮಾರು ₹46,800 ರವರೆಗೆ ತೆರಿಗೆ ಉಳಿತಾಯವಾಗುತ್ತದೆ.



ಯುಲಿಪ್‌ಗಳು (ಯುನಿಟ್ ಲಿಂಕ್ಡ್ ಇನ್ಶುರೆನ್ಸ್ ಪ್ಲಾನ್) ಮತ್ತು ಪಿಪಿಎಫ್ ಹೂಡಿಕೆಗಳು ತೆರಿಗೆ ವಿನಾಯಿತಿಯ ಅವಕಾಶ ಕಲ್ಪಿಸಿದರೂ ಆ ಎರಡೂ ಹೂಡಿಕೆಗಳಲ್ಲಿ ಲಾಕಿನ್ ಪೀರಿಯಡ್ ಹೆಚ್ಚು. ಯುಲಿಪ್‌ಗಳ ಲಾಕಿನ್ ಅವಧಿ 5 ವರ್ಷಗಳಾದರೆ ಪಿಪಿಎಫ್ ಅಂದ್ರೆ ಸಾರ್ವಜನಿಕ ಭವಿಷ್ಯ ನಿಧಿಯ ಲಾಕಿನ್ ಪೀರಿಯಡ್ 15 ವರ್ಷ. ಹಾಗಾಗಿ ತೆರಿಗೆ ಉಳಿತಾಯದ ಜೊತೆಗೆ ಹೆಚ್ಚು ಲಾಭದ ಸಾಧ್ಯತೆ ಮತ್ತು ಲಾಕಿನ್ ಅವಧಿ ಕಡಿಮೆ ಇರುವ ಕಾರಣಕ್ಕೆ ಇಎಲ್‌ಎಸ್‌ಎಸ್ ಫಂಡ್ ಉತ್ತಮ ಎನಿಸಿಕೊಳ್ಳುತ್ತದೆ.

ಮೊದಲ ಬಾರಿ ಹೂಡಿಕೆ ಮಾಡುವವರಿಗೆ ಅನುಕೂಲ: ಮೊದಲ ಬಾರಿ ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಲು ಮುಂದಾಗುವವರಿಗೆ ಈ ಫಂಡ್ ಹೆಚ್ಚು ಅನುಕೂಲ ಒದಗಿಸುತ್ತದೆ. ಈ ಫಂಡ್‌ಗಳು ಈಕ್ವಿಟಿ ಆಧಾರಿತ ಫಂಡ್ ಗಳಾಗಿರುವುದರಿಂದ ಹೂಡಿಕೆಗೆ ತಾಳ್ಮೆ ಮತ್ತು ಶಿಸ್ತು ಬಹಳ ಮುಖ್ಯವಾಗುತ್ತದೆ. ಅನೇಕರು ಈಕ್ವಿಟಿ ಫಂಡ್‌ಗಳಲ್ಲಿ ಹೂಡಿಕೆ ಮಾಡಿ ಮಾರುಕಟ್ಟೆ ಏರಿಳಿತದ ಕಾರಣಕ್ಕೆ ತಾತ್ಕಾಲಿಕ ನಷ್ಟವಾದಾಗ ಕೂಡಲೇ ಹೂಡಿಕೆ ಮೊತ್ತವನ್ನು ಹಿಂಪಡೆಯುತ್ತಾರೆ. ಆದರೆ ಇಎಲ್‌ಎಸ್‌ಎಸ್ ಫಂಡ್ ಗಳಲ್ಲಿ 3 ವರ್ಷ ಲಾಕಿನ್ ಇರುವ ಕಾರಣ ಕೂಡಲೇ ಹಣ ವಾಪಸ್ ಪಡೆಯಲು ಆಗುವುದಿಲ್ಲ. ಹಾಗಾಗಿ ದೀರ್ಘಾವಧಿಗೆ ಹೂಡಿಕೆದಾರ ಒಗ್ಗಿಕೊಳ್ಳುತ್ತಾನೆ. ಎಲ್‌ಎಲ್‌ಎಸ್‌ಎಸ್ ಮ್ಯೂಚುಯಲ್ ಫಂಡ್‌ನಲ್ಲಿ ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಮತ್ತು ಲಮ್ ಸಮ್ (ದೊಡ್ಡ ಮೊತ್ತದ ಹೂಡಿಕೆ) ಹೂಡಿಕೆಗೆ ಅವಕಾಶವಿದೆ.

ಲಾಭಾಂಶ ಮತ್ತು ಉತ್ತಮ ಫಂಡ್‌ಗಳು: ಇಎಲ್‌ಎಸ್‌ಎಸ್ ಫಂಡ್‌ಗಳು ಕಳೆದ 5 ವರ್ಷಗಳ ಅವಧಿಯಲ್ಲಿ ವಾರ್ಷಿಕ ಸರಾಸರಿ ಶೇ 16.97 ರಷ್ಟು ಲಾಭ ಕೊಟ್ಟಿವೆ. 10 ವರ್ಷಗಳ ಅವಧಿಯಲ್ಲಿ ವಾರ್ಷಿಕ ಸರಾಸರಿ ಶೇ 17.03 ರಷ್ಟು ಗಳಿಕೆ ಒದಗಿಸಿವೆ. ಯಾವುದೇ ಫಂಡ್‌ಗಳಲ್ಲಿ ಹೂಡಿಕೆ ನಿರ್ಧಾರ ಮಾಡುವ ಮುನ್ನ ನೋಂದಾಯಿತ ಹಣಕಾಸು ತಜ್ಞರ ಸಲಹೆ ಪಡೆಯುವುದು ಅಗತ್ಯ.

ಹೂಡಿಕೆ ಮೇಲಿನ ಗಳಿಕೆಗೆ ತೆರಿಗೆ ಎಷ್ಟು: ಇಎಲ್‌ಎಸ್‌ಎಸ್ ಮ್ಯೂಚುಯಲ್ ಫಂಡ್‌ನ ಲಾಕಿನ್ ಅವಧಿ 3 ವರ್ಷಗಳು ಇರುವ ಕಾರಣ ಅಲ್ಪಾವಧಿ ಬಂಡವಾಳ ಗಳಿಕೆ ತೆರಿಗೆ (ಎಸ್‌ಟಿಸಿಜಿ) ಅನ್ವಯಿಸುವುದಿಲ್ಲ. ಮೂರು ವರ್ಷಗಳ ನಂತರದಲ್ಲಿ ಇಎಲ್‌ಎಸ್‌ಎಸ್ ಹೂಡಿಕೆಯನ್ನು ನಗದೀಕರಣ ಮಾಡಿಕೊಳ್ಳುವಾಗ ಗಳಿಕೆಯು ₹ 1 ಲಕ್ಷಕ್ಕಿಂತ ಹೆಚ್ಚಿಗೆ ಇದ್ದರೆ ಶೇ 10 ರಷ್ಟು ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ (ಎಲ್‌ಟಿಸಿಜಿ) ಕಟ್ಟಬೇಕಾಗುತ್ತದೆ. ಆದರೆ ₹ 1 ಲಕ್ಷದ ವರೆಗಿನ ದೀರ್ಘಾವಧಿ ಗಳಿಕೆಗೆ ತೆರಿಗೆ ಇರುವುದಿಲ್ಲ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಗಳಿಕೆ ದಾಖಲಿಸಿದ ಸೂಚ್ಯಂಕಗಳು

ಅಕ್ಟೋಬರ್ 13ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಮೊತ್ತದ ಗಳಿಕೆ ದಾಖಲಿಸಿವೆ. 66,282 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.43 ರಷ್ಟು ಜಿಗಿದಿದೆ. 19,751 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.49 ರಷ್ಟು ಹೆಚ್ಚಳ ಕಂಡಿದೆ. ಐಟಿ ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳಲ್ಲಿ ಹಿನ್ನಡೆ, ಇಸ್ರೇಲ್ – ಹಮಾಸ್ ಯುದ್ಧ, ಅಮೆರಿಕದಲ್ಲಿ ನಿರೀಕ್ಷಿತ ಪ್ರಮಾಣಕ್ಕಿಂತ ಹೆಚ್ಚಿನ ಹಣದುಬ್ಬರ, ತೈಲ ಬೆಲೆ ಹೆಚ್ಚಳ, ವಿದೇಶಿ ಹೂಡಿಕೆದಾರರಿಂದ ಮಾರಾಟದ ಒತ್ತಡ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಮೇಲೆ ನಕಾರಾತ್ಮಕ ಪರಿಣಾಮ ಬೀರಿವೆ. ಆದರೆ ದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಉತ್ಸಾಹ, ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಭಾರತದ ಜಿಡಿಪಿ ದರ ವೃದ್ಧಿ ಅಂದಾಜು ಮಾರುಕಟ್ಟೆಗೆ ಶಕ್ತಿ ತುಂಬಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4.3, ಆಟೊ ಸೂಚ್ಯಂಕ ಶೇ 2.8, ಎಫ್‌ಎಂಸಿಜಿ ಸೂಚ್ಯಂಕ ಶೇ 2 ಮತ್ತು ಮಾಧ್ಯಮ ಸೂಚ್ಯಂಕ ಶೇ 1.5 ರಷ್ಟು ಜಿಗಿದಿವೆ. ಮತ್ತೊಂದೆಡೆ ನಿಫ್ಟಿ ಸರ್ಕಾರಿ ಬ್ಯಾಂಕ್ ಸೂಚ್ಯಂಕ ಶೇ 3.2 ಮತ್ತು ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1.6 ರಷ್ಟು ಕುಸಿದಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 2,199.99 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 3,937.66 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಟಾಟಾ ಮೋಟರ್ಸ್, ಕೋಲ್ ಇಂಡಿಯಾ, ಬಾಷ್, ಜೊಮಾಟೊ, ಇಂಡಸ್ ಟವರ್ಸ್, ಟಾಟಾ ಮೋಟರ್ಸ್ ಡಿವಿಆರ್, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿ ಗಳಿಕೆ ಕಂಡಿವೆ. ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶುರೆನ್ಸ್ ಕಂಪನಿ, ಅದಾನಿ ಪವರ್, ಬ್ಯಾಂಕ್ ಆಫ್ ಬರೋಡ ಮತ್ತು ಬಂಧನ್ ಬ್ಯಾಂಕ್ ಕುಸಿತ ಕಂಡಿವೆ.

ಮುನ್ನೋಟ: ಈ ವಾರ ಸಿಯಟ್, ಫೆಡರಲ್ ಬ್ಯಾಂಕ್, ಜಿಯೋ ಫೈನಾನ್ಶಿಯಲ್ ಸರ್ವಿಸಸ್, ಬಜಾಜ್ ಫೈನಾನ್ಸ್, ಹ್ಯಾತ್‌ವೇ, ಐಸಿಐಸಿಐ ಪ್ರುಡೆನ್ಶಿಯಲ್‌ಲೈಫ್ ಇನ್ಶೂರೆನ್ಸ್, ಬಜಾಜ್ ಆಟೊ, ಇಂಡಸ್ ಇಂಡ್ ಬ್ಯಾಂಕ್, ಪಾಲಿ ಕ್ಯಾಬ್, ಐಟಿಸಿ, ಪಿವಿಆರ್ ಐನಾಕ್ಸ್, ಐಸಿಐಸಿಐ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ವರದಿ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಮತ್ತು ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಕ್ಯಾಂಪಸ್ ನೇಮಕಾತಿಗೆ ಹಿಂದೇಟು: ಹೊಸಬರಿಗೆ ಕೆಲಸ ಸಿಗದ ಸ್ಥಿತಿ ನಿರ್ಮಾಣ

ಜಾಗತಿಕ ಬಿಕ್ಕಟ್ಟು: ಐ.ಟಿ ನೇಮಕಕ್ಕೆ ಗ್ರಹಣ

ನವದೆಹಲಿ (ಪಿಟಿಐ): ಜಾಗತಿಕ ಬಿಕ್ಕಟ್ಟುಗಳು ಮತ್ತು ಗ್ರಾಹಕರು 'ವಿವೇಚನಾ ವೆಚ್ಚ'ವನ್ನು ಕಡಿತ ಮಾಡುವ ಸಾಧ್ಯತೆ ಇರುವುದರಿಂದ ಮಾಹಿತಿ ತಂತ್ರಜ್ಞಾನ (ಐ.ಟಿ) ಉದ್ಯಮವು ಹೊಸ ನೇಮಕಾತಿ ಮಾಡಿಕೊಳ್ಳದಿರಬಹುದು. ಇನ್ಫೊಸಿಸ್ ಮತ್ತು ಎಚ್‌ಸಿಎಲ್ ಟೆಕ್ ನೇಮಕಾತಿ ಮಾಡದಿರುವ ಸೂಚನೆಯನ್ನು ಈಗಾಗಲೇ ನೀಡಿವೆ. ಹೀಗಾಗಿ ಹೊಸಬರಿಗೆ ಸದ್ಯದ ಮಟ್ಟಿಗೆ ಕೆಲಸ ಸಿಗುವುದು ಕಷ್ಟವಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಎರಡನೇ ತ್ರೈಮಾಸಿಕದ ಆರಂಭದ ವಾರದಲ್ಲಿ, ಉದ್ಯೋಗಿಗಳ ಸಂಖ್ಯೆಯಲ್ಲಿ ಕಡಿಮೆ ಆಗಿರುವುದಾಗಿ ಐ.ಟಿ ಉದ್ಯಮದ ಬೃಹತ್ ಸಂಸ್ಥೆಗಳಾದ ಟಿಸಿಎಸ್, ಇನ್ಫೊಸಿಸ್ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಹೇಳಿವೆ. ಉದ್ಯೋಗಿಗಳ ಸಂಖ್ಯೆಯಲ್ಲಿ ಒಟ್ಟು 15,800 ಕಡಿತ ಆಗಿದೆ. ಪ್ರಮುಖ ಕಂಪನಿಗಳ ವರಮಾನವು ಎರಡನೇ ತ್ರೈಮಾಸಿಕದಲ್ಲಿ ನಿರೀಕ್ಷೆಯ ಮಟ್ಟ ಮುಟ್ಟಿಲ್ಲ.



ಹಿನ್ನಡೆಗೆ ಕಾರಣಗಳು?: ಹಣದುಬ್ಬರ ಮತ್ತು ಬಡ್ಡಿದರ ಏರಿಕೆ, ಕಡಿಮೆಯಾದ ಹೂಡಿಕೆ, ಭೌಗೋಳಿಕ ಮತ್ತು ರಾಜಕೀಯ ಸಂಘರ್ಷಗಳಿಂದಾಗಿ ಅಭಿವೃದ್ಧಿಗೆ ಹೊಡೆತ ಬಿದ್ದಿದೆ. ಗ್ರಾಹಕರು ಹೊಸ ಯೋಜನೆಗಳನ್ನು ಮುಂದೂಡುತ್ತಿದ್ದಾರೆ, ನಿರ್ಣಾಯಕ ಅಲ್ಲದ ವೆಚ್ಚಗಳನ್ನು ಕಡಿಮೆ ಮಾಡುತ್ತಿದ್ದಾರೆ ಮತ್ತು ಇರುವ ಸೌಲಭ್ಯಗಳ ಗರಿಷ್ಠ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಐ.ಟಿ ಕಂಪನಿಗಳು ಹೇಳಿವೆ.

ಈ ವರ್ಷ ಕ್ಯಾಂಪಸ್ ನೇಮಕವು ಇನ್ನೂ ಶೇ 10ರಿಂದ ಶೇ 15ರಷ್ಟು ಕಡಿಮೆಯಾಗಬಹುದು ಎಂದು ಎನ್‌ಎಲ್‌ಬಿ ಸರ್ವಿಸಸ್‌ನ ಸಿಇಒ ಸಚಿನ್ ಅಲುಗ್ ಹೇಳಿದ್ದಾರೆ.

> **ಕಳೆದ ವರ್ಷ ದೊಡ್ಡ ಪ್ರಮಾಣದಲ್ಲಿ ನೇಮಕಾತಿ ಮಾಡಿಕೊಂಡಿರುವ ಐಟಿ ಕಂಪನಿಗಳು ಈ ಬಾರಿ ಕ್ಯಾಂಪಸ್ ನೇಮಕದಿಂದ ದೂರ ಉಳಿದಿವೆ. ಇರುವ ಸಿಬ್ಬಂದಿಯ ಕೌಶಲ ಹೆಚ್ಚಳದಲ್ಲಿ ನಿರತವಾಗಿವೆ**
> **ಕೃಷ್ಣ ವಿಜ್,** ಬ್ಯುಸಿನೆಸ್ ಹೆಡ್, ಟೀಮ್‌ಲೀಸ್ ಡಿಜಿಟಲ್

> **ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೊಸ ನೇಮಕಾತಿಯು ಶೇ 50ರಷ್ಟು ಕಡಿಮೆ ಆಗಬಹುದು. ಇದು ತಾತ್ಕಾಲಿಕ ಸ್ಥಿತಿಯೇ ಹೊರತು ಶಾಶ್ವತ ಅಲ್ಲ.**
> **ಶಿವ ಪ್ರಸಾದ್ ನಂದೂರಿ,** ಸಿಇಒ, ಡೈನ್‌ಸ್ಟೆನ್ ಟೆಕ್ ಲಿ.

ಅಕ್ಟೋಬರ್ ಮೊದಲ ವಾರದ ಮಾಹಿತಿಯ ಪ್ರಕಾರ, ಕ್ಯಾಂಪಸ್ ನೇಮಕಾತಿಯಲ್ಲಿ ಕೆಲಸ ಪಡೆದುಕೊಂಡ ವಿದ್ಯಾರ್ಥಿಗಳ ಪ್ರಮಾಣವು ಕಳೆದ ಅಕ್ಟೋಬರ್‌ಗೆ ಹೋಲಿಸಿದರೆ ಶೇ 20ರಷ್ಟು ಕಡಿಮೆ ಆಗಿತ್ತು ಎಂದು ಸಚಿನ್ ವಿವರಿಸಿದ್ದಾರೆ.

ಇನ್ಫೊಸಿಸ್: ಕಮ್ಮಿಯಾದ ಉದ್ಯೋಗಿಗಳ ಸಂಖ್ಯೆ

ಇನ್ಫೊಸಿಸ್‌ನಲ್ಲಿರುವ ಉದ್ಯೋಗಿಗಳ ಸಂಖ್ಯೆಯು ಸೆಪ್ಟೆಂಬರ್ 30ರ ಮಾಹಿತಿಯ ಪ್ರಕಾರ 3,28,764. ಜೂನ್ ತ್ರೈಮಾಸಿಕದಲ್ಲಿ ಕಂಪನಿಯಲ್ಲಿ 3,36,294 ಉದ್ಯೋಗಿಗಳು ಇದ್ದರು. 7,530 ಉದ್ಯೋಗಿಗಳು ಕೆಲಸ ಕಳೆದುಕೊಂಡಿದ್ದಾರೆ.

ಇನ್ಫೊಸಿಸ್ ಕಳೆದ ವರ್ಷ ಸುಮಾರು 50 ಸಾವಿರ ಹೊಸಬರನ್ನು ನೇಮಕ ಮಾಡಿಕೊಂಡಿತ್ತು. ಈ ಬಾರಿ ಕ್ಯಾಂಪಸ್ ನೇಮಕಕ್ಕೆ ಮುಂದಾಗುವುದಿಲ್ಲ ಎಂದು ಕಂಪನಿಯು ಹೇಳಿದೆ. ಒಟ್ಟು ವಹಿವಾಟು ಶೇ 1ರಿಂದ ಶೇ 2.5ರಷ್ಟು ಕಡಿಮೆ ಆಗಬಹುದು ಎಂದು ಇನ್ಫೊಸಿಸ್ ಅಂದಾಜಿಸಿದೆ.

ಟಿಸಿಎಸ್‌ನ ಉದ್ಯೋಗಿಗಳ ಸಂಖ್ಯೆಯು ಸೆಪ್ಟೆಂಬರ್ ಕೊನೆಯ ಹೊತ್ತಿಗೆ 6,08,985 ಆಗಿತ್ತು. ಅದಕ್ಕಿಂತ ಹಿಂದಿನ ತ್ರೈಮಾಸಿಕಕ್ಕೆ ಹೋಲಿಸಿದರೆ ಉದ್ಯೋಗಿಗಳ ಸಂಖ್ಯೆಯು ಆರು ಸಾವಿರ ಕಡಿಮೆ ಆಗಿದೆ. 2023–24ರ ಹಣಕಾಸು ವರ್ಷದಲ್ಲಿ 40 ಸಾವಿರ ಹೊಸಬರ ನೇಮಕದ ಗುರಿ ಹಾಕಿಕೊಳ್ಳಲಾಗಿದೆ.

ಕಂಪನಿಯು ನೇಮಕಾತಿಯನ್ನು ಸ್ಥಗಿತಗೊಳಿಸಿಲ್ಲ. ಆದರೆ, ನೇಮಕಾತಿ ತ್ವರಿತವಾಗಿ ನಡೆಯುತ್ತಿಲ್ಲ. ಜೊತೆಗೆ, ಹಲವರು ಕಂಪನಿ ಬಿಡುತ್ತಿದ್ದಾರೆ. ಹೀಗಾಗಿ ಉದ್ಯೋಗಿಗಳ ಒಟ್ಟು ಸಂಖ್ಯೆ ಕಡಿಮೆ ಆಗಿದೆ ಎಂದು ಟಿಸಿಎಸ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಮಿಲಿಂದ್ ಲಕ್ಕಡ್ ಅವರು ಹೇಳಿದ್ದಾರೆ.

ಐಒಸಿ: ₹1,660 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಭಾರತದ ಅತ್ಯಂತ ದೊಡ್ಡ ತೈಲ ಕಂಪನಿ ಭಾರತೀಯ ತೈಲ ನಿಗಮವು (ಐಒಸಿ) ನವೀಕರಿಸಬಹುದಾದ ಇಂಧನ ಘಟಕಗಳ ಸ್ಥಾಪನೆಗೆ ₹1,660 ಕೋಟಿ ಹೂಡಿಕೆ ಮಾಡಲಿದೆ. ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮದ (ಎನ್‌ಟಿಪಿಸಿ) ಜೊತೆ ಸೇರಿ ಈ ಯೋಜನೆ ಕಾರ್ಯರೂಪಕ್ಕೆ ಬರಲಿದೆ.

ಐಒಸಿ ಮತ್ತು ಎನ್‌ಟಿಪಿಸಿ ಸೇರಿಕೊಂಡು ಜೂನ್‌ನಲ್ಲಿ 50:50 ಪಾಲುದಾರಿಕೆಯಲ್ಲಿ ಇಂಡಿಯನ್ ಆಯಿಲ್ ಎನ್‌ಟಿಪಿಸಿ ಗ್ರೀನ್ ಎನರ್ಜಿ ಪ್ರೈ. ಲಿ. ಎಂಬ ಕಂಪನಿಯನ್ನು ಸ್ಥಾಪಿಸಿವೆ. ತೈಲ ಕಂಪನಿಗಳ ಸಂಸ್ಕರಣಾಗಾರಗಳಿಗೆ ದಿನದ 24 ತಾಸು ವಿದ್ಯುತ್ ಪೂರೈಸುವುದಕ್ಕೆ ನವೀಕರಿಸಬಹುದಾದ ಇಂಧನ ಘಟಕಗಳನ್ನು ಸ್ಥಾಪಿಸುವುದು ಇದರ ಉದ್ದೇಶ.

ಸೌರಶಕ್ತಿ, ಪವನ ಶಕ್ತಿ ಮತ್ತು ಇತರ ನವೀಕರಿಸಬಹುದಾದ ಇಂಧನ ಘಟಕಗಳನ್ನು ಈ ಕಂಪನಿಯು ಸ್ಥಾಪಿಸಲಿದೆ. ಐಒಸಿಯ ಸಂಸ್ಕರಣಾಗಾರಗಳಿಗಾಗಿ ಕನಿಷ್ಠ 650 ಮೆಗಾವಾಟ್ ಸಾಮರ್ಥ್ಯದ ಘಟಕ ಸ್ಥಾಪನೆಯ ಗುರಿಯನ್ನು ಇರಿಸಿಕೊಳ್ಳಲಾಗಿದೆ.

ಎನ್‌ಟಿಪಿಸಿ ತನ್ನ ಅಂಗಸಂಸ್ಥೆಯಾದ ಎನ್‌ಜಿಇಎಲ್ ಮೂಲಕ ಮುಂದಿನ ಒಂದು ದಶಕದಲ್ಲಿ 60 ಗಿಗಾವಾಟ್ ಸಾಮರ್ಥ್ಯದ ನವೀಕರಿಸಬಹುದಾದ ಘಟಕಗಳ ಸ್ಥಾಪನೆಯ ಗುರಿಯನ್ನು ಹಾಕಿಕೊಂಡಿದೆ.

ಐಒಸಿ ಕೂಡ ಇಂತಹುದೇ ಗುರಿಯನ್ನು ಹೊಂದಿದೆ. 2025ರೊಳಗೆ 3 ಗಿಗಾ ವಾಟ್ ನವೀಕರಿಸಬಹುದಾದ ಇಂಧನ ಘಟಕ ಮತ್ತು 6 ಲಕ್ಷ ಟನ್ ಜೈವಿಕ ಇಂಧನ ಉತ್ಪಾದನೆಯ ಗುರಿ ಇರಿಸಿಕೊಂಡಿದೆ.

ಅಂಕಿ ಅಂಶಗಳು

20,705	ಪೆಟ್ರೋಲ್ ಪಂಪ್‌ಗೆ ಸೌರಶಕ್ತಿ ಅಳವಡಿಕೆ
4700	ಬ್ಯಾಟರಿ ಚಾರ್ಜಿಂಗ್ ಘಟಕಗಳು
66	ಬ್ಯಾಟರಿ ವಿನಿಮಯ ಕೇಂದ್ರಗಳು

ರಷ್ಯಾ ದಾಳಿ: 6 ಉಕ್ರೇನಿಗರ ಸಾವು

ಕೀವ್ (ಎಪಿ): ರಷ್ಯಾ ಪಡೆಗಳು ಕಳೆದ 24 ತಾಸುಗಳಲ್ಲಿ ಉಕ್ರೇನ್ ಮೇಲೆ ನಡೆಸಿದ ದಾಳಿಯಲ್ಲಿ 6 ಮಂದಿ ಉಕ್ರೇನಿಗರು ಮೃತಪಟ್ಟಿದ್ದಾರೆ.

ಕೆರ್ಸಾನ್ ಮೇಲೆ ವಾರಾಂತ್ಯದಲ್ಲಿ ನಡೆದಿರುವ 100ಕ್ಕೂ ಹೆಚ್ಚು ಶೆಲ್ ದಾಳಿಯಲ್ಲಿ ಇಬ್ಬರು ಸಾವನ್ನಪ್ಪಿದ್ದು, ಮೂವರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಗವರ್ನರ್ ಒಲೆಕ್ಸಾಂಡರ್ ಪ್ರೊಕುದಿನ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಹಾರ್ಕಿವ್ ಪ್ರದೇಶದಲ್ಲಿ ನಡೆದ ವೈಮಾನಿಕ ದಾಳಿಯಿಂದ 57 ವರ್ಷದ ವ್ಯಕ್ತಿ ಮತ್ತು 54 ವರ್ಷದ ಮಹಿಳೆ ಸಾವನ್ನಪ್ಪಿದ್ದಾರೆ. ಡೊನೆಟ್‌ಸ್ಕ್ ಪ್ರದೇಶದಲ್ಲಿ ಇನ್ನೂ ಇಬ್ಬರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಕೆರ್ಸಾನ್ ನಗರದ ಮೇಲೆ ಎರಡು ಬಾಂಬ್‌ಗಳ ದಾಳಿಯಿಂದ ಪ್ರಮುಖ ಮೂಲಸೌಕರ್ಯಗಳಿಗೆ ಹಾನಿಯಾಗಿದೆ. ನೀರಿನ ಸರಬರಾಜು ವ್ಯವಸ್ಥೆಗೆ ಧಕ್ಕೆಯಾಗಿದೆ ಎಂದು ನಗರ ಸೇನಾ ಆಡಳಿತದ ಮುಖ್ಯಸ್ಥ ರೋಮನ್ ಮ್ರೊಚ್ಕೊ ತಿಳಿಸಿದರು.

ಅಮೆರಿಕ: ಅಂಬೇಡ್ಕರ್ ಪ್ರತಿಮೆ ಅನಾವರಣ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಮೇರಿಲ್ಯಾಂಡ್‌ನಲ್ಲಿ ಸ್ಥಾಪಿಸಲಾಗಿರುವ ಭಾರತದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಯನ್ನು ಅನಾವರಣ ಮಾಡಲಾಯಿತು. ಇದು ಭಾರತದ ಹೊರಗೆ ನಿರ್ಮಿಸಲಾಗಿರುವ ಅಂಬೇಡ್ಕರ್ ಅವರ ಅತಿ ಎತ್ತರದ ಪ್ರತಿಮೆಯಾಗಿದೆ.

19 ಅಡಿ ಎತ್ತರದ 'ಸಮಾನತೆಯ ಪ್ರತಿಮೆ' ಅನಾವರಣ ಕಾರ್ಯಕ್ರಮದಲ್ಲಿ ಭಾರತ ಮೂಲದ ಅಮೆರಿಕನ್ನರು, ಭಾರತೀಯರು ಮತ್ತು ವಿದೇಶಿಗರು ಸೇರಿದಂತೆ 500ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಜಡಿಮಳೆಯ ನಡುವೆಯೂ 'ಜೈ ಭೀಮ್' ಉದ್ಗಾರದ ನಡುವೆ ಪ್ರತಿಮೆಯನ್ನು ಅನಾವರಣ ಮಾಡಲಾಯಿತು.

ಪ್ರಖ್ಯಾತ ಶಿಲ್ಪಿ ರಾಮ್ ಸುತಾರ್ ಅವರು ಪ್ರತಿಮೆಯನ್ನು ನಿರ್ಮಿಸಿದ್ದಾರೆ.



ಅಮೆರಿಕದ ಮೇರಿಲ್ಯಾಂಡ್‌ನಲ್ಲಿ ಪ್ರತಿಷ್ಠಾಪಿಸಿರುವ ಭಾರತದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ –ಪಿಟಿಐ ಚಿತ್ರ

ವಿಯೆಟ್ನಾಂ: ಟ್ಯಾಗೋರ್ ಪ್ರತಿಮೆ ಅನಾವರಣ

ಹನೋಯ್ (ಪಿಟಿಐ): ವಿಯೆಟ್ನಾಂನ ಬಾಕ್ ನಿನ್ಹ್ ನಗರದಲ್ಲಿ ನಿರ್ಮಿಸಲಾಗಿರುವ, ನೊಬೆಲ್ ಪುರಸ್ಕೃತ ಲೇಖಕ ರವೀಂದ್ರನಾಥ ಟ್ಯಾಗೋರ್ ಅವರ ಪ್ರತಿಮೆಯನ್ನು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಭಾನುವಾರ ಅನಾವರಣಗೊಳಿಸಿದರು.

ನಂತರ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, 'ಭಾರತ ಮತ್ತು ವಿಯೆಟ್ನಾಂ ಸಂಬಂಧವು ಸುಮಾರು 2,000 ವರ್ಷಗಳಷ್ಟು ಹಳೆಯದು. ಇಲ್ಲಿ ಬೌದ್ಧ ಧರ್ಮವನ್ನು ಪರಿಚಯಿಸುವಲ್ಲಿ ಗೌತಮ ಬುದ್ಧನ ಪಾತ್ರ ಪ್ರಮುಖವಾಗಿದೆ ಎಂದು ಐತಿಹಾಸಿಕ ದಾಖಲೆಗಳು ಹೇಳುತ್ತವೆ' ಎಂದರು. ಟ್ಯಾಗೋರ್ ಅವರ ಕಾರ್ಯವನ್ನು ಜಗತ್ತಿನಾದ್ಯಂತ ಗುರುತಿಸುತ್ತಿರುವುದು ಕಂಡು ಸಂತಸವಾಗುತ್ತಿದೆ ಎಂದು ತಿಳಿಸಿದರು. ಜೈಶಂಕರ್ ಅವರು ಭಾನುವಾರ ವಿಯೆಟ್ನಾಂಗೆ ಭೇಟಿ ನೀಡಿದ್ದು, ನಂತರ ಅ.19 ಮತ್ತು 20ರಂದು ಸಿಂಗಪುರಕ್ಕೆ ಭೇಟಿ ನೀಡಲಿದ್ದಾರೆ.

ಹಷ್ಮತ್‌ಉಲ್ಲಾ ಪಡೆಗೆ ಶರಣಾದ ಹಾಲಿ ಚಾಂಪಿಯನ್ನರು • ಅಫ್ಘಾನಿಸ್ತಾನಕ್ಕೆ ಚಾರಿತ್ರಿಕ ಗೆಲುವು

ಇಂಗ್ಲೆಂಡ್‌ಗೆ ಅಫ್ಗನ್ ಆಘಾತ

ನವದೆಹಲಿ (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ಇಂಗ್ಲೆಂಡ್ ತಂಡಕ್ಕೆ ಕ್ರಿಕೆಟ್ ಲೋಕದ 'ಉದಯೋನ್ಮುಖ' ತಂಡ ಅಫ್ಗಾನಿಸ್ತಾನವು ಆಘಾತ ನೀಡಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 69 ರನ್‌ಗಳಿಂದ ಇಂಗ್ಲೆಂಡ್ ತಂಡವನ್ನು ಸೋಲಿಸುವುದರೊಂದಿಗೆ ಐತಿಹಾಸಿಕ ಸಾಧನೆ ಮಾಡಿತು. ವಿಶ್ವಕಪ್ ಟೂರ್ನಿಗಳಲ್ಲಿ ಅಫ್ಗನ್ ತಂಡಕ್ಕೆ ಒಲಿದ ಎರಡನೇ ಗೆಲುವು. 2015ರಲ್ಲಿ ಸ್ಕಾಟ್ಲೆಂಡ್ ವಿರುದ್ಧ ಜಯಿಸಿತ್ತು. ನಂತರದ ವಿಶ್ವಕಪ್ ಟೂರ್ನಿಗಳಲ್ಲಿ ಒಟ್ಟು 14 ಪಂದ್ಯಗಳಲ್ಲಿ ಸೋತಿದ್ದ ಅಫ್ಗನ್ ಬಳಗವು ಈ ಬಾರಿ ಭರ್ಜರಿ ಬೇಟೆಯಾಡಿದೆ.



ಗೆಲುವಿನ ಸಂಭ್ರಮದಲ್ಲಿ ಅಫ್ಗಾನಿಸ್ತಾನ ತಂಡದ ಆಟಗಾರರು –ಪಿಟಿಐ ಚಿತ್ರ

ಟೂರ್ನಿಯಲ್ಲಿ 'ಕಪ್ಪು ಕುದುರೆ' ಎಂದೇ ಕರೆಸಿಕೊಂಡಿರುವ ಅಫ್ಗನ್ ತಂಡವು ಬ್ಯಾಟಿಂಗ್ ಮತ್ತು ಸ್ಪಿನ್ ಬೌಲಿಂಗ್‌ನಲ್ಲಿರುವ ತನ್ನ ಸಾಮರ್ಥ್ಯವನ್ನು ಅಚ್ಚುಕಟ್ಟಾಗಿ ವಿನಿಯೋಗಿಸಿದರು. ಇದರಿಂದಾಗಿ ಜಯ ಒಲಿಯಿತು. ಅತಿಯಾದ ಆತ್ಮವಿಶ್ವಾಸದಿಂದ ಆಡಲು ಹೋದ ಇಂಗ್ಲೆಂಡ್ ಸೋಲಿನ ಕಹಿ ಉಣ್ಣಬೇಕಾಯಿತು. ಬಜ್ ಬಾಲ್ ತಂತ್ರಗಾರಿಕೆ ಕೈಕೊಟ್ಟಿತು. ಸ್ಪಿನ್ನರ್‌ಗಳ ಎಸೆತಗಳ ತಿರುವುಗಳು ಮತ್ತು ಚಲನೆಯನ್ನು ಅಂದಾಜಿಸುವಲ್ಲಿ ಇಂಗ್ಲೆಂಡ್ ಬ್ಯಾಟರ್‌ಗಳು ಎಡವಿದರು.

ಟಾಸ್ ಗೆದ್ದ ಇಂಗ್ಲೆಂಡ್ ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಫ್ಗನ್ ತಂಡವು 49.5 ಓವರ್‌ಗಳಲ್ಲಿ 284 ರನ್ ಗಳಿಸಿತು. ಇಂಗ್ಲೆಂಡ್ ಬೌಲರ್‌ಗಳ ಲೋಪಗಳಿಂದಾಗಿ ಅಫ್ಗನ್ ತಂಡವು ಹೋರಾಟದ ಮೊತ್ತ ಗಳಿಸಲು ಸಾಧ್ಯವಾಯಿತು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡಕ್ಕೆ ಅಫ್ಗನ್ ಸ್ಪಿನ್ನರ್‌ಗಳಾದ ಮುಜೀಬ್ ಉರ್ ರೆಹಮಾನ್ ಮತ್ತು ರಶೀದ್ ಖಾನ್ ಅವರು ಸೋಲಿನ ಹಾದಿ ತೋರಿದರು. ಅದರಲ್ಲೂ ಕೇರಂ ಎಸೆತಗಳ ಮೂಲಕ ಬ್ಯಾಟರ್‌ಗಳನ್ನು ಕಾಡಿದ ಮುಜೀಬ್ ಅವರು ಪ್ರಮುಖ ಬ್ಯಾಟರ್‌ಗಳ ವಿಕೆಟ್ ಗಳಿಸಿದರು. ಇನ್ನೊಂದೆಡೆ ಮಧ್ಯಮವೇಗಿಗಳೂ ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದರು.

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	3	3	0	0	6	1.821
ನ್ಯೂಜಿಲೆಂಡ್	3	3	0	0	6	1.604
ದಕ್ಷಿಣ ಆಫ್ರಿಕಾ	2	2	0	0	4	2.360
ಪಾಕಿಸ್ತಾನ	3	2	1	0	4	-0.137
ಇಂಗ್ಲೆಂಡ್	3	1	2	0	2	-0.084
ಅಫ್ಗಾನಿಸ್ತಾನ	3	1	2	0	2	-0.652
ಬಾಂಗ್ಲಾದೇಶ	3	1	2	0	2	-0.699
ಶ್ರೀಲಂಕಾ	2	0	2	0	0	-1.161
ನೆದರ್ಲೆಂಡ್ಸ್	2	0	2	0	0	-1.438
ಆಸ್ಟ್ರೇಲಿಯಾ	2	0	2	0	0	-1.846

ಹ್ಯಾರಿ ಬ್ರೂಕ್ (66; 61ಎ) ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ದೊಡ್ಡ ಇನಿಂಗ್ಸ್ ಕಟ್ಟಲಿಲ್ಲ. ಇದರಿಂದಾಗಿ ಇಂಗ್ಲೆಂಡ್ ತಂಡವು 40.3 ಓವರ್‌ಗಳಲ್ಲಿ 215 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ತಮ್ಮ ಜಯಕ್ಕೆ ಕೆಲ ಹೊತ್ತು ಸಂಭ್ರಮಿಸಿದ ಅಫ್ಗನ್ ಆಟಗಾರರು ನಂತರ ಎದುರಾಳಿ ಆಟಗಾರರ ಕೈಕುಲುಕಿ ಪೆವಿಲಿಯನ್‌ಗೆ ಹೆಜ್ಜೆಹಾಕಿದರು.

ಗುರ್ಬಾಜ್–ಜದ್ರಾನ್ ಜೊತೆಯಾಟ: ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಅವರು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ನಿರ್ಧಾರವು ಆರಂಭದಲ್ಲಿಯೇ ಕೈಕೊಟ್ಟಿತು.

ಅಫ್ಗನ್ ತಂಡದ ಆರಂಭಿಕ ಜೋಡಿ ರೆಹಮಾನುಲ್ಲಾ ಗುರ್ಬಾಜ್ (80; 57ಎ, 4X8, 6X4) ಮತ್ತು ಇಬ್ರಾಹಿಂ ಜದ್ರಾನ್ (28; 48ಎ, 4X3) ಮೊದಲ ವಿಕೆಟ್ ಜೊತೆಯಾಟದಲ್ಲಿ 114 ರನ್ ಗಳಿಸಿದರು. ಕ್ರಿಸ್ ವೋಕ್ಸ್, ಮಾರ್ಕ್ ವುಡ್, ರೀಸ್ ಟಾಪ್ಲಿ, ಸ್ಯಾಮ್ ಕರನ್ ಅವರ ಸ್ವಿಂಗ್ ದಾಳಿಗೂ ಜಗ್ಗದ ಜೋಡಿಯು ಆದಿಲ್ ರಶೀದ್ ಸ್ಪಿನ್ ಎಸೆತಗಳನ್ನೂ ಚಾಣಾಕ್ಷವಾಗಿ ಎದುರಿಸಿತು. ಆದರೆ 17ನೇ ಓವರ್‌ನಲ್ಲಿ ಇಬ್ರಾಹಿಂ ಜದ್ರಾನ್ ವಿಕೆಟ್ ಗಳಿಸಿದ ಆದಿಲ್ ಅವರು ಜೊತೆಯಾಟ ಮುರಿದರು. 19ನೇ ಓವರ್‌ನಲ್ಲಿ ಆದಿಲ್ ಅವರು ರೆಹಮತ್ ವಿಕೆಟ್ ಕೂಡ ಗಳಿಸಿದರು. ಇದೇ ಓವರ್‌ನಲ್ಲಿ ಗುರ್ಬಾಜ್ ರನ್ ಔಟ್ ಆದರು. ಈ ಹಂತದಲ್ಲಿ ಅಫ್ಗನ್ ತಂಡವನ್ನು ಕಡಿಮೆ ಮೊತ್ತಕ್ಕೆ ಕಟ್ಟಿಹಾಕುವ ಅವಕಾಶ ಇಂಗ್ಲೆಂಡ್‌ಗೆ ಇತ್ತು.

ಆದರೆ ಮಧ್ಯಮ ಕ್ರಮಾಂಕದ ಬ್ಯಾಟರ್ ಇಕ್ರಮ್ ಅಲಿಖಿಲ್ ಅರ್ಧಶತಕ (58; 66ಎ) ಗಳಿಸಿದರು. ರಶೀದ್ ಮತ್ತು ಮುಜೀಬ್ ಕೂಡ ಕ್ರಮವಾಗಿ 23 ಮತ್ತು 28 ರನ್‌ಗಳ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತು. ಬೌಲಿಂಗ್‌ನಲ್ಲಿಯೂ ಮಿಂಚಿದ ಮುಜೀಬ್ ಮತ್ತು ರಶೀದ್ ಗೆಲುವಿನ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 49.5 ಓವರ್‌ಗಳಲ್ಲಿ 284 (ಗುರ್ಬಾಜ್ 80, ಇಬ್ರಾಹಿಂ ಜದ್ರಾನ್ 28, ಅಜ್ಮತ್‌ವುಲ್ಲಾ 19, ಇಕ್ರಂ ಅಲಿಖಿಲ್ 58, ರಶೀದ್ ಖಾನ್ 23, ಮುಜೀಬ್ ಉರ್ ರೆಹಮಾನ್ 28, ಆದಿಲ್ ರಶೀದ್ 42ಕ್ಕೆ3, ಮಾರ್ಕ್ ವುಡ್ 50ಕ್ಕೆ2) **ಇಂಗ್ಲೆಂಡ್;** 40.3 ಓವರ್‌ಗಳಲ್ಲಿ 215 (ಡೇವಿಡ್ ಮಲಾನ್ 32, ಹ್ಯಾರಿ ಬ್ರೂಕ್ 66, ಆದಿಲ್ ರಶೀದ್ 20, ಮುಜೀಬ್ ಉರ್ ರೆಹಮಾನ್ 51ಕ್ಕೆ3, ಮೊಹಮ್ಮದ್ ನಬಿ 16ಕ್ಕೆ2, ರಶೀದ್ ಖಾನ್ 37ಕ್ಕೆ3) **ಫಲಿತಾಂಶ:** ಅಫ್ಗಾನಿಸ್ತಾನಕ್ಕೆ 69 ರನ್‌ಗಳ ಜಯ

ಇಂಗ್ಲೆಂಡ್ ಎಡವಿದ್ದು ಇದೇ ಮೊದಲಲ್ಲ

ಜಗತ್ತಿಗೆ ಕ್ರಿಕೆಟ್ ಪರಿಚಯಿಸಿಕೊಟ್ಟ ಇಂಗ್ಲೆಂಡ್ ತಂಡವು ವಿಶ್ವಕಪ್ ಟೂರ್ನಿಗಳಲ್ಲಿ ಆಘಾತ ಅನುಭವಿಸಿದ್ದು ಇದೇ ಮೊದಲಲ್ಲ. ತನಗಿಂತಲೂ ಕಡಿಮೆ ಸಾಮರ್ಥ್ಯದ ತಂಡಗಳ ಎದುರು ಈ ಹಿಂದೆಯೂ ಸೋತಿದೆ.

2011ರಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ವಿಶ್ವಕಪ್ ಪಂದ್ಯದಲ್ಲಿ ಐರ್ಲೆಂಡ್ ಎದುರು ಪರಾಭವಗೊಂಡಿತ್ತು. 1992ರ ವಿಶ್ವಕಪ್ ಟೂರ್ನಿಯಲ್ಲಿ ಅಲ್ಬರಿಯಲ್ಲಿ ನಡೆದಿದ್ದ ಪಂದ್ಯದಲ್ಲಿ ಜಿಂಬಾಬ್ವೆ ಎದುರು ಪರಾಭವಗೊಂಡಿತ್ತು.

ವಿಶ್ವಕಪ್ ಟೂರ್ನಿಗಳಲ್ಲಿ ದಾಖಲಾದ ಅಚ್ಚರಿಯ ಫಲಿತಾಂಶಗಳು

2023; ಇಂಗ್ಲೆಂಡ್‌ಗೆ ಆಘಾತ ನೀಡಿದ ಅಫ್ಗಾನಿಸ್ತಾನ

2019; ದಕ್ಷಿಣ ಆಫ್ರಿಕಾ ಎದುರು ಬಾಂಗ್ಲಾದೇಶಕ್ಕೆ ಜಯ

2015; ವೆಸ್ಟ್ ಇಂಡೀಸ್ ವಿರುದ್ಧ ಐರ್ಲೆಂಡ್ ಜಯಭೇರಿ

2011; ಇಂಗ್ಲೆಂಡ್ ವಿರುದ್ಧ ಐರ್ಲೆಂಡ್‌ಗೆ ಜಯ

2007; ಪಾಕಿಸ್ತಾನ ವಿರುದ್ಧ ಐರ್ಲೆಂಡ್ ಗೆಲುವು

2007; ಭಾರತದ ಎದುರು ಬಾಂಗ್ಲಾದೇಶಕ್ಕೆ ಜಯ

2003; ಶ್ರೀಲಂಕಾ ವಿರುದ್ಧ ಗೆದ್ದಿದ್ದ ಕೆನ್ಯಾ

1999; ಪಾಕಿಸ್ತಾನ ಎದುರು ಬಾಂಗ್ಲಾದೇಶ ಜಯ

1996; ವೆಸ್ಟ್ ಇಂಡೀಸ್ ವಿರುದ್ಧ ಜಯಿಸಿದ್ದ ಕೆನ್ಯಾ

1992; ಇಂಗ್ಲೆಂಡ್ ಎದುರು ಜಿಂಬಾಬ್ವೆ ಜಯ

1983; ಆಸ್ಟ್ರೇಲಿಯಾ ವಿರುದ್ಧ ಜಿಂಬಾಬ್ವೆಗೆ ಗೆಲುವು

1983; ವೆಸ್ಟ್ ಇಂಡೀಸ್ ಎದುರು ಭಾರತ ಜಯಭೇರಿ

ಊಟ, ಸಂಗೀತ ಮತ್ತು ವಿಶ್ರಾಂತಿ

ಪಾಕ್ ವಿರುದ್ಧ ಗೆದ್ದ ಭಾರತ ತಂಡದ ವಿಜಯೋತ್ಸವ ಹೇಗಿತ್ತು

ಅಹಮದಾಬಾದ್ (ಪಿಟಿಐ): ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾರತ ತಂಡವು ಪಾಕಿಸ್ತಾನ ಎದುರು ಜಯಿಸಿದ ನಂತರ ದೇಶದ ಬಹುತೇಕ ಎಲ್ಲ ನಗರಗಳಲ್ಲಿ ಮಧ್ಯರಾತ್ರಿಯವರೆಗೂ ವಿಜಯೋತ್ಸವ ನಡೆಯಿತು.

ಆದರೆ ವಿಶ್ವಕಪ್ ಟೂರ್ನಿಯ ಈ ಪಂದ್ಯದಲ್ಲಿ ಸುಲಭ ಜಯ ಸಾಧಿಸಿದ ರೋಹಿತ್ ಶರ್ಮಾ ಬಳಗದ ವಿಜಯೋತ್ಸವ ಯಾವ ರೀತಿಯಿತ್ತು ಗೊತ್ತೆ?

ಯಾವುದೇ ವಿಶೇಷ ಉತ್ಸವ ಮಾಡದ ತಂಡದ ಆಟಗಾರರು ಮತ್ತು ನೆರವು ಸಿಬ್ಬಂದಿಯು ಊಟ ಮಾಡಿದರು. ಜನಪ್ರಿಯ ಗೀತೆಗಳ ಸಂಗೀತ ಕೇಳುತ್ತ ಊಟ ಮಾಡಲೂ ಕೆಲವು ಆಟಗಾರರು ಆದ್ಯತೆ ಕೊಟ್ಟರು. ನಂತರ ಎಲ್ಲರೂ ವಿಶ್ರಾಂತಿ ಪಡೆಯಲು ತಮ್ಮ ಕೋಣೆಗಳಿಗೆ ತೆರಳಿದರು.

'ಇವರೆಲ್ಲರೂ ಅತ್ಯಂತ ವೃತ್ತಿಪರರು. ತಮ್ಮ ಯೋಜನೆಯಲ್ಲಿ ಸಫಲರಾದ ಕೂಡಲೇ ಕ್ರೀಡಾಂಗಣದಲ್ಲಿ ಸಂಭ್ರಮ ಆಚರಿಸುತ್ತಾರೆ. ನಂತರ ಎಲ್ಲರೂ ಕೂಡಿ ಸಂತೋಷದಿಂದ ಊಟ ಮಾಡುತ್ತಾರೆ. ಹಾಸ್ಯ ಚಟಾಕಿಗಳನ್ನು ಹೇಳುತ್ತಾ, ಹಾಡು ಹೇಳಿ ಕೆಲವೊಮ್ಮೆ ನರ್ತಿಸಿಯೂ ಖುಷಿಪಡುತ್ತಾರೆ. ತಂಡದಲ್ಲಿ ಪರಸ್ಪರ ಬಾಂಧವ್ಯ ಮೂಡಿಸಲು ಇವೆಲ್ಲವೂ ಸಹಕಾರಿಯಾಗುತ್ತವೆ. ಟೂರ್ನಿಯ ಲೀಗ್ ಹಂತದಲ್ಲಿ ತಂಡವು ಇನ್ನೂ ಆರು ಪಂದ್ಯಗಳಲ್ಲಿ ಆಡಬೇಕಿದೆ. ಆದ್ದರಿಂದ ಪಾಕ್ ಎದುರಿನ ಜಯವನ್ನು ಒಂದು ಪಂದ್ಯದ ಯಶಸ್ಸಿನಂತೆ ಭಾವಿಸಿ ಮುಂದಿನ ಸವಾಲಿನ ಬಗ್ಗೆ ಚಿತ್ತ ನೆಟ್ಟಿದ್ದಾರೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.



ರೋಹಿತ್ ಶರ್ಮಾ

ರೋಹಿತ್ ಬಿಚ್ಚಿಟ್ಟ ಗುಟ್ಟು: ಪಂದ್ಯದ ನಂತರ ಬಿಸಿಸಿಐ ಡಾಟ್ ಟಿವಿಗೆ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರನ್ನು ಸಂದರ್ಶಿಸಿದ ಹಾರ್ದಿಕ್ ಪಾಂಡ್ಯ, 'ಅರ್ಧಶತಕ ಬಾರಿಸಿದ ನಂತರ ನಿಮ್ಮ ರಟ್ಟೆಯನ್ನು ಪ್ರದರ್ಶಿಸಿದ್ದೇಕೆ' ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರೋಹಿತ್, 'ನಾನು ಹೊಡೆದ ಸಿಕ್ಸರ್‌ಗಳ ಬಗ್ಗೆ ಅಂಪೈರ್‌ಗಳು ಕೇಳಿದ್ದರು. ಅಷ್ಟು ಎತ್ತರಕ್ಕೆ ಸಿಕ್ಸರ್ ಎತ್ತಲು ನನ್ನ ಬ್ಯಾಟ್‌ನಲ್ಲಿ ಏನಿಟ್ಟಿದ್ದೇನೆ ಎಂದೂ ಕೇಳಿದ್ದರು. ಅದಕ್ಕೆ ಅವರಿಗೆ ಎಲ್ಲವೂ ನನ್ನ ಮಾಂಸಖಂಡದಲ್ಲಿದ್ದೆ. ಬ್ಯಾಟ್‌ನಲ್ಲಿ ಅಲ್ಲವೆಂದು ಹೇಳಲು ಆ ರೀತಿ ತೋರಿಸಿದ್ದೆ' ಎಂದರು.

ಪಾಕ್ ಬೆಂಬಲಿಗರ ಸುಳಿವೇ ಇಲ್ಲ: ಮಿಕಿ ಅಸಮಾಧಾನ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದ ಸಂದರ್ಭದಲ್ಲಿ ಪಾಕಿಸ್ತಾನದ ಬೆಂಬಲಿಗರೇ ಇರಲಿಲ್ಲ. ಕೇವಲ ಭಾರತೀಯ ಅಭಿಮಾನಿಗಳು ತುಂಬಿದ್ದರು. ಅದರಿಂದಾಗಿ ಈ ಪಂದ್ಯವು ಐಸಿಸಿ ಆಯೋಜಿತ ವೆನಿಸದೇ, ಬಿಸಿಸಿಐ ಕಾರ್ಯಕ್ರಮದಂತೆ ಭಾಸವಾಯಿತು ಎಂದು ಪಾಕಿಸ್ತಾನ ತಂಡದ ನಿರ್ದೇಶಕ ಮಿಕಿ ಆರ್ಥರ್ ವ್ಯಂಗ್ಯವಾಡಿದ್ದಾರೆ.



ಮಿಕಿ ಆರ್ಥರ್

ಶನಿವಾರ ರಾತ್ರಿ ಇಲ್ಲಿ ನಡೆದ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಭಾರತದ ಎದುರು ಹೀನಾಯ ಸೋಲನುಭವಿಸಿತು. ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರು ಕ್ರೀಡಾಂಗಣದಲ್ಲಿ ಸೇರಿದ್ದರು.

ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮಿಕಿ, 'ತಮ್ಮ ದೇಶದ ಅಭಿಮಾನಿಗಳ ಗೈರು ಹಾಜರಿಯು ತಂಡದ ಆಟದ ಮೇಲೆ ಪರಿಣಾಮ ಬೀರಿಲ್ಲ ಎಂದು ನಾನು ಹೇಳಲು ಸಾಧ್ಯ ವಿಲ್ಲ. ಯಾವುದೆ ಮೂಲೆಯಿಂದಲೂ ದಿಲ್ ದಿಲ್ ಪಾಕಿಸ್ತಾನ ಎಂಬ ಘೋಷಣೆ ಕೇಳಿಸಲೇ ಇಲ್ಲ. ಕ್ರೀಡಾಂಗಣದಲ್ಲಿರುವ ವಾತಾವರಣವೂ ಆಟಗಾರರ ಮೇಲೆ ಪರಿಣಾಮ ಬೀರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ' ಎಂದರು.

ನಾಳೆಯಿಂದ ಟಿಕೆಟ್ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯಗಳ ಟಿಕೆಟ್ ಮಾರಾಟ (ಕ್ರೀಡಾಂಗಣದ ಕೌಂಟರ್‌ಗಳಲ್ಲಿ) ಅ.17 ರಂದು ಆರಂಭವಾಗಲಿದೆ.

ನ.12 ರಂದು ನಡೆಯಲಿರುವ ಭಾರತ– ನೆದರ್ಲೆಂಡ್ಸ್ ನಡುವಣ ಪಂದ್ಯ ಹೊರತುಪಡಿಸಿ ಇತರ ನಾಲ್ಕು ಪಂದ್ಯಗಳ ಟಿಕೆಟ್ ಮಾರಾಟದ ದಿನಾಂಕ ಹಾಗೂ ದರದ ವಿವರಗಳನ್ನು ಕೆಎಸ್‌ಸಿಎ ಭಾನುವಾರ ಪ್ರಕಟಿಸಿದೆ.

ಅ.17, 18 ಮತ್ತು 19 ರಂದು ಬೆಳಿಗ್ಗೆ 10 ರಿಂದ ಸಂಜೆ 5ರ ವರೆಗೆ ಕೌಂಟರ್‌ಗಳು ತೆರೆದಿರಲಿವೆ. ಕ್ರೀಡಾಂಗಣದ ಗೇಟ್ ಸಂಖ್ಯೆ 2 ಮತ್ತು 4 (ಕಬ್ಬನ್ ರಸ್ತೆ) ಹಾಗೂ ಗೇಟ್ ಸಂಖ್ಯೆ 16 ಮತ್ತು 18ರಲ್ಲಿ (ಕ್ವೀನ್ಸ್ ರಸ್ತೆ) ತೆರೆಯಲಾಗುವ ಕೌಂಟರ್‌ಗಳಲ್ಲಿ ಟಿಕೆಟ್‌ಗಳನ್ನು ಖರೀದಿಸಬಹುದು.

ಒಬ್ಬರಿಗೆ ಗರಿಷ್ಠ ಎರಡು ಟಿಕೆಟ್‌ಗಳನ್ನು ಮಾತ್ರ ಖರೀದಿಸಬಹುದು. ಕ್ರೆಡಿಟ್ ಕಾರ್ಡ್/ ಡೆಬಿಟ್ ಕಾರ್ಡ್/ ಯುಪಿಐ ಪಾವತಿಗೆ ಮಾತ್ರ ಅವಕಾಶವಿದ್ದು, ನಗದು ಸ್ವೀಕರಿಸುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಕೌಂಟರ್ ಟಿಕೆಟ್ ಮಾರಾಟ ವಿವರ

ಪಂದ್ಯಗಳು	ಆಸ್ಟ್ರೇಲಿಯಾ–ಪಾಕಿಸ್ತಾನ (ಅ.20), ನ್ಯೂಜಿಲೆಂಡ್–ಪಾಕಿಸ್ತಾನ (ನ.4)	ಇಂಗ್ಲೆಂಡ್–ಶ್ರೀಲಂಕಾ (ಅ.26), ನ್ಯೂಜಿಲೆಂಡ್–ಶ್ರೀಲಂಕಾ (ನ.9)
ಸ್ಟ್ಯಾಂಡ್ ಹೆಸರು	ಟಿಕೆಟ್ ದರ (₹ ಗಳಲ್ಲಿ)	
ಪಿ ಟೆರೇಸ್	25,000	20,000
ಎನ್ ಸ್ಟ್ಯಾಂಡ್	15,000	12,000
ಗ್ರಾಂಡ್ ಟೆರೇಸ್	12,000	9,000
ಇ ಎಕ್ಸಿಕ್ಯೂಟಿವ್ ಬಾಕ್ಸ್	9,000	6,500
ಡಿ ಕಾರ್ಪೊರೇಟ್ ಬಾಕ್ಸ್	6,500	5,000
ಸಿ ಸ್ಟ್ಯಾಂಡ್	5,000	4,000
ಎ ಸ್ಟ್ಯಾಂಡ್	3,000	2,500
ಎಚ್ ಅಪ್ಪರ್	3,000	2,500
ಎಚ್ ಲೋವರ್	1,000	750

ದರವನ್ನು ಕನಿಷ್ಠ 750 ರಿಂದ ಗರಿಷ್ಠ ₹ 25 ಸಾವಿರದವರೆಗೆ ನಿಗದಿಪಡಿಸಲಾಗಿದೆ.

ಬೆಂಗಳೂರಿಗೆ ಬಂದಿಳಿದ ಪಾಕ್ ತಂಡ: ವಿಶ್ವಕಪ್ ಟೂರ್ನಿಯ ತನ್ನ ಮುಂದಿನ ಪಂದ್ಯವನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿರುವ ಪಾಕಿಸ್ತಾನ ತಂಡದ ಆಟಗಾರರು ಅಹಮದಾಬಾದ್‌ನಿಂದ ಭಾನುವಾರ ಬೆಂಗಳೂರಿಗೆ ಬಂದಿಳಿದರು.

ಅ.20 ರಂದು ನಡೆಯಲಿರುವ ಪಂದ್ಯದಲ್ಲಿ ಬಾಬರ್ ಅಜಂ ಬಳಗ, ಆಸ್ಟ್ರೇಲಿಯಾ ತಂಡದ ಸವಾಲನ್ನು ಎದುರಿಸಲಿದೆ. ಪಾಕ್ ತಂಡ ತಂಗಿರುವ ಹೋಟೆಲ್‌ಗೆ ಬಿಗಿ ಭದ್ರತೆ ಒದಗಿಸಲಾಗಿದೆ.

ಮೊದಲ ಗೆಲುವಿನ ತವಕದಲ್ಲಿ ಎರಡು ತಂಡಗಳು

ಆಸ್ಟ್ರೇಲಿಯಾ–ಶ್ರೀಲಂಕಾ ಹಣಾಹಣಿ ಇಂದು: ಮೊದಲೆರಡೂ ಪಂದ್ಯಗಳಲ್ಲಿ ಸೋತಿರುವ ಬಳಗಗಳು

ಲಖನೌ (ಪಿಟಿಐ): ಈ ಸಲದ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆಯಲು ಪರದಾಡುತ್ತಿರುವ ಆಸ್ಟ್ರೇಲಿಯಾ ಮತ್ತು ಶ್ರೀಲಂಕಾ ತಂಡಗಳು ಸೋಮವಾರ ಮುಖಾಮುಖಿಯಾಗಲಿವೆ.

ಇಲ್ಲಿಯ ಏಕನಾ ಕ್ರೀಡಾಂಗಣದಲ್ಲಿ ಉಭಯ ತಂಡಗಳು ಆಡಲಿವೆ. ಇದು ಎರಡೂ ತಂಡಗಳಿಗೂ ಈ ಟೂರ್ನಿಯ ಮೂರನೇ ಪಂದ್ಯ. ಮೊದಲೆರಡೂ ಪಂದ್ಯಗಳಲ್ಲಿ ಈ ಬಳಗಗಳು ಸೋತಿವೆ.

ಐದು ಬಾರಿ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಭಾರತ ಮತ್ತು ದಕ್ಷಿಣ ಆಫ್ರಿಕಾದ ಎದುರಿನ ಪಂದ್ಯಗಳಲ್ಲಿ ಸೋತಿದೆ. ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ. ಹತ್ತು ತಂಡಗಳು ಸ್ಪರ್ಧೆಯಲ್ಲಿರುವ ಲೀಗ್‌ನಲ್ಲಿ –1.846 ನೆಟ್ ರನ್ ರೇಟ್ ಹೊಂದಿದೆ.

1996ರ ಚಾಂಪಿಯನ್ ಲಂಕಾ ತಂಡವು ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ಎದುರು ಪರಾಭವಗೊಂಡಿತ್ತು. ಇದರೊಂದಿಗೆ ಅಂಕಪಟ್ಟಿಯಲ್ಲಿ ಎಂಟನೇ ಸ್ಥಾನ (–1.161)ದಲ್ಲಿದೆ.

ಉಭಯ ತಂಡಗಳಿಗೂ ಮುಂದಿನ ಏಳು ಪಂದ್ಯಗಳಲ್ಲಿ ಆದಷ್ಟು ಹೆಚ್ಚು ಗೆಲುವುಗಳನ್ನು ಸಾಧಿಸಿದರೆ ಮಾತ್ರ ಸೆಮಿಫೈನಲ್ ಕನಸು ಕಾಣಲು ಸಾಧ್ಯವಿದೆ. ಆದರೆ ಏಕದಿನ ಕ್ರಿಕೆಟ್‌ನಲ್ಲಿ ಈ ತಂಡವು ಆಡಿದ ಕಳೆದ ಎಂಟು ಪಂದ್ಯಗಳಲ್ಲಿ ಏಳರಲ್ಲಿ ಸೋತಿದೆ.



ಆಸ್ಟ್ರೇಲಿಯಾ ತಂಡದ ಮಿಚೆಲ್ ಸ್ಟಾರ್ಕ್ ಮತ್ತು ಪ್ಯಾಟ್ ಕಮಿನ್ಸ್ ಮಾತುಕತೆ –ಪಿಟಿಐ ಚಿತ್ರ

ಬೌಲಿಂಗ್, ಬ್ಯಾಟಿಂಗ್ ಮತ್ತು ಫೀಲ್ಡಿಂಗ್‌ಗಳಲ್ಲಿ ಲೋಪಗಳು ಮರುಕಳಿಸುತ್ತಿವೆ. ಕಮಿನ್ಸ್, ಜೋಷ್ ಹ್ಯಾಜಲ್‌ವುಡ್ ಮತ್ತು ಮಿಚೆಲ್ ಸ್ಟಾರ್ಕ್ ವೇಗದ ಬೌಲಿಂಗ್ ವಿಭಾಗವನ್ನು ನಿರ್ವಹಿಸುತ್ತಿದ್ದಾರೆ. ಸ್ಪಿನ್‌ನಲ್ಲಿ ಆ್ಯಡಂ ಜಂಪಾ ಅವರೊಂದಿಗೆ ಗ್ಲೆನ್ ಮ್ಯಾಕ್ಸ್‌ವೆಲ್ ಕೂಡ ಹೊಣೆ ಹಂಚಿಕೊಳ್ಳುವರು.



ಕುಶಾಲ ಮೆಂಡಿಸ್

ಡೇವಿಡ್ ವಾರ್ನರ್, ಸ್ಟೀವ್ ಸ್ಮಿತ್, ಅಲೆಕ್ಸ್ ಕ್ಯಾರಿ, ಮಾರ್ಷ್ ಅವರು ಮಿಂಚಿದರೆ ದೊಡ್ಡ ಮೊತ್ತ ಕಲೆಹಾಕಲು ಸಾಧ್ಯವಾಗಲಿದೆ. ಮಾರ್ಕಸ್ ಸ್ಟೊಯಿನಿಸ್ ಗಾಯದಿಂದ ಚೇತರಿಸಿಕೊಂಡು ಮರಳಿದರೆ ಮಧ್ಯಮ ಕ್ರಮಾಂಕ ಬಲಿಷ್ಠಗೊಳ್ಳಲಿದೆ. ಲಂಕಾ ಬೌಲರ್‌ಗಳಾದ ಪಥಿರಾಣ, ತೀಕ್ಷಣ ಮತ್ತು ದುನಿತ್ ವೆಲಾಳಗೆ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಬೌಲಿಂಗ್ ಮಾಡಿದರೆ ಆಸ್ಟ್ರೇಲಿಯಾ ಬ್ಯಾಟರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು.

ಲಂಕಾ ತಂಡದ ಬ್ಯಾಟರ್‌ಗಳಾದ ಕುಶಾಲ ಮೆಂಡಿಸ್, ಸದೀರ ಸಮರವಿಕ್ರಮ ಅವರು ಪಾಕ್ ಎದುರಿನ ಪಂದ್ಯದಲ್ಲಿ ತಲಾ ಒಂದು ಶತಕ ಹೊಡೆದಿದ್ದರು. ಅದರಿಂದಾಗಿ ತಂಡವು ಬೃಹತ್ ಗುರಿ ನೀಡಿತ್ತು. ಆದರೆ ಬೌಲರ್‌ಗಳ ವೈಫಲ್ಯದಿಂದಾಗಿ ಲಂಕಾ ಸೋತಿತು.

ಬ್ಯಾಟರ್‌ಗಳು ತಮ್ಮ ಲಯ ಕಾಪಾಡಿಕೊಂಡರೆ ಮತ್ತು ಬೌಲರ್‌ಗಳು ಶಿಸ್ತಿನ ದಾಳಿ ನಡೆಸಿದರೆ ಪಂದ್ಯವು ರೋಚಕ ತಿರುವು ತೆಗೆದುಕೊಳ್ಳಬಹುದು.

ಪಂದ್ಯ ಆರಂಭ: ಮಧ್ಯಾಹ್ನ 2

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್.



ದಸರಾ ನಾಡಕುಸ್ತಿ

ಮೈಸೂರಿನ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ ದಸರಾ ನಾಡಕುಸ್ತಿಯಲ್ಲಿ ದಾವಣಗೆರೆಯ ಕಾರ್ತಿಕ್ ಕಾಟೆ ಮತ್ತು ದೆಹಲಿಯ ವಿಕ್ಕಿ ಅವರ ಸೆಣಸಾಟದ ರೋಚಕ ದೃಶ್ಯ. ಈ ಹಣಾಹಣಿ ಡ್ರಾನಲ್ಲಿ ಅಂತ್ಯಗೊಂಡಿತು

–ಪ್ರಜಾವಾಣಿ ಚಿತ್ರ/ ಅನೂಪ್ ರಾಘ್ ಟಿ.

ಐಒಸಿ ಅಧ್ಯಕ್ಷ ಸ್ಥಾನ: ಮುಂದುವರಿಯಲು ಬಾಕ್‌ಗೆ ಬೆಂಬಲ

ಮುಂಬೈ (ಪಿಟಿಐ/ ಎಎಫ್‌ಪಿ): ಥಾಮಸ್ ಬಾಕ್ ಅವರು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಅಧ್ಯಕ್ಷನ ಹುದ್ದೆಯಲ್ಲಿ ಇನ್ನೊಂದು ಅವಧಿಗೆ ಮುಂದುವರಿಯಬೇಕು ಎಂದು ಸಮಿತಿಯ ಸದಸ್ಯರು ಒತ್ತಾಯಿಸಿದ್ದಾರೆ.

ಐಒಸಿಯ 141ನೇ ಅಧಿವೇಶನ ಇಲ್ಲಿ ಆರಂಭವಾಗಿದ್ದು, ಮೊದಲ ದಿನವಾದ ಭಾನುವಾರ ಸದಸ್ಯರು ಈ ಒತ್ತಾಯ ಮಾಡಿದ್ದಾರೆ. ಜರ್ಮನಿಯ ಬಾಕ್ ಅವರು 2013 ರಲ್ಲಿ ಎಂಟು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. 2021ರ ಮಾರ್ಚ್‌ನಲ್ಲಿ ಅವರು ನಾಲ್ಕು ವರ್ಷಗಳ ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದರು.

ಐಒಸಿ ರೂಪಿಸಿರುವ ನಿಯಮಗಳು (ಒಲಿಂಪಿಕ್ ಚಾರ್ಟರ್) ಅಧ್ಯಕ್ಷರ ಅಧಿಕಾರದ ಅವಧಿಯನ್ನು ಗರಿಷ್ಠ 12 ವರ್ಷಗಳಿಗೆ ಸೀಮಿತಗೊಳಿಸಿದೆ. ಹಿಂದಿನ ಅಧ್ಯಕ್ಷ ಜಾಕ್ ರಾಗ್ ಅವರ ಅವಧಿಯಲ್ಲಿ ಈ ನಿಯಮ ಜಾರಿಯಾಗಿತ್ತು.

ಬಾಕ್ ಅವರ ಅಧಿಕಾರದ ಅವಧಿ 2025 ರಲ್ಲಿ ಪೂರ್ಣಗೊಳ್ಳಲಿದ್ದು, ಈ ಹುದ್ದೆಯಲ್ಲಿ 12 ವರ್ಷ ಪೂರ್ಣಗೊಳಿಸಿದಂತಾಗುತ್ತದೆ. 2025ರ ಬಳಿಕವೂ ಅವರು ಅಧಿಕಾರದಲ್ಲಿ ಮುಂದುವರಿಯಬೇಕಾದರೆ ಒಲಿಂಪಿಕ್ ಚಾರ್ಟರ್‌ಗೆ ತಿದ್ದುಪಡಿ ತರಬೇಕಾಗುತ್ತದೆ. 99 ಸದಸ್ಯರಲ್ಲಿ ಬಹುತೇಕ ಮಂದಿ, ಬಾಕ್ ಅವರಿಗೆ ಬೆಂಬಲ ಸೂಚಿಸಿದ್ದಾರೆ.

ಸದಸ್ಯರಿಗೆ ಧನ್ಯವಾದ ಸಲ್ಲಿಸಿದ ಬಾಕ್, 'ನೀವು ಮಾಡಿರುವ ಮನವಿಯು ನನ್ನ ಹೃದಯಕ್ಕೆ ತಟ್ಟಿದೆ' ಎಂದರು.

ಅಥ್ಲೆಟಿಕ್ಸ್: ಕರ್ನಾಟಕದ ತೀರ್ಥೇಶ್, ವಂದನಾಗೆ ಬೆಳ್ಳಿ

ಜಾವೆಲಿನ್: ಮನು ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಡಿ.ಪಿ.ಮನು ಅವರು ಭಾನುವಾರ ಇಲ್ಲಿ ಕೊನೆಗೊಂಡ 62ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.


ಸರ್ವಿಸಸ್ ತಂಡವನ್ನು ಪ್ರತಿನಿಧಿಸಿದ ಅವರು ಕಂಠೀರವ ಕ್ರೀಡಾಂಗಣದಲ್ಲಿ ಕೊನೆಯ ದಿನ ನಡೆದ ಸ್ಪರ್ಧೆಯಲ್ಲಿ 82.06 ಮೀ. ಸಾಧನೆ ಮಾಡಿದರಲ್ಲದೆ, ಕಳೆದ ವರ್ಷ ತಾವೇ ಸ್ಥಾಪಿಸಿದ್ದ (81.23 ಮೀ.) ಕೂಟ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಆದರೆ ಒಲಿಂಪಿಕ್ಸ್ ಅರ್ಹತೆಗೆ ನಿಗದಿಪಡಿಸಿರುವ 85 ಮೀ. ದೂರ ಕಂಡುಕೊಳ್ಳಲು ವಿಫಲರಾದರು.

ಮನು ಅವರು ತಮ್ಮ ಮೊದಲ ಎಸೆತದಲ್ಲೇ ಈ ದೂರ ಕಂಡುಕೊಂಡರು. ಫೈನಲ್‌ನಲ್ಲಿ ಕಣಕ್ಕಿಳಿದ 12 ಸ್ಪರ್ಧಿಗಳಲ್ಲಿ 80 ಮೀ. ಗಡಿ ದಾಟಿದ್ದು ಅವರೊಬ್ಬರೇ. 77.72 ಮೀ. ಸಾಧನೆ ಮಾಡಿದ ರಾಜಸ್ಥಾನದ ಯಶ್ವೀರ್ ಸಿಂಗ್ ಬೆಳ್ಳಿ ಗೆದ್ದರು.

ಪುರುಷರ 400 ಮೀ. ಓಟದಲ್ಲಿ ಕರ್ನಾಟಕದ ತೀರ್ಥೇಶ್ ಶೆಟ್ಟಿ ಚಿನ್ನ ಗೆಲ್ಲುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡರು. ಅವರು 46.15 ಸೆ.ಗಳಲ್ಲಿ ಎರಡನೆಯವರಾಗಿ ಗುರಿ ತಲುಪಿದರು. ಈ ವಿಭಾಗದ ಚಿನ್ನದ ಪದಕ ಒಎನ್‌ಜಿಸಿಯ ಕೆ.ಅವಿನಾಶ್ (46.05 ಸೆ.) ಪಾಲಾಯಿತು.

ಮಹಿಳೆಯರ 20 ಕಿ.ಮೀ. ನಡಿಗೆ ಸ್ಪರ್ಧೆಯನ್ನು 1 ಗಂಟೆ 40.19 ನಿಮಿಷಗಳಲ್ಲಿ ಪೂರೈಸಿದ ಕರ್ನಾಟಕದ ವಂದನಾ ಅವರು ಬೆಳ್ಳಿ ತಮ್ಮದಾಗಿಸಿಕೊಂಡರು.

ರಿಲೇನಲ್ಲಿ ಕೂಟ ದಾಖಲೆ: ಮಹಿಳೆಯರ 4X100 ಮೀ. ರಿಲೇಯಲ್ಲಿ 44.87 ಸೆ. ಸಾಧನೆಯೊಂದಿಗೆ ಚಿನ್ನ ಗೆದ್ದ ರೈಲ್ವೇಸ್ ತಂಡ, ಕಳೆದ ವರ್ಷ ತಾನೇ ಸ್ಥಾಪಿಸಿದ್ದ ಕೂಟ ದಾಖಲೆಯನ್ನು (44.98 ಸೆ.) ಉತ್ತಮಪಡಿಸಿಕೊಂಡಿತು. ಪುರುಷರ ವಿಭಾಗದಲ್ಲಿ ತಮಿಳುನಾಡು ತಂಡ ಕೂಟ ದಾಖಲೆಯೊಂದಿಗೆ (39.42 ಸೆ.) ಚಿನ್ನ ಜಯಿಸಿತು. ರೈಲ್ವೇಸ್ ಹೆಸರಿನಲ್ಲಿದ್ದ ದಾಖಲೆ (39.75 ಸೆ.) ಮುರಿಯಿತು.



ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಕರ್ನಾಟಕದ ಡಿ.ಪಿ.ಮನು –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್



ತೀರ್ಥೇಶ್ ಶೆಟ್ಟಿ

ಫಲಿತಾಂಶ: ಪುರುಷರ ವಿಭಾಗ: 400 ಮೀ. ಓಟ: ಕೆ.ಅವಿನಾಶ್ (ಒಎನ್‌ಜಿಸಿ; ಕಾಲ: 46.05 ಸೆ.)–1, ತೀರ್ಥೇಶ್ ಶೆಟ್ಟಿ (ಕರ್ನಾಟಕ)–2, ಅಕ್ಷಯ್ ಎನ್. (ಸರ್ವಿಸಸ್)–3; 1,500 ಮೀ. ಓಟ: ಅಭಿಷೇಕ್ ಠಾಕೂರ್ (ಸರ್ವಿಸಸ್; ಕಾಲ: 3 ನಿ. 42.21 ಸೆ.)–1, ಶಶಿ ಸಿಂಗ್ (ಬಿಹಾರ)–2, ಅರ್ಜುನ್ (ಒಎನ್‌ಜಿಸಿ)–3; 4X100 ಮೀ. ರಿಲೇ: ತಮಿಳುನಾಡು (ಕಾಲ: 39.42 ಸೆ.)–1, ಒಡಿಶಾ–2, ಸರ್ವಿಸಸ್–3; 20 ಕಿ.ಮೀ. ನಡಿಗೆ: ಬಿಲಿನ್ ಜಾರ್ಜ್ ಆಂಟೊ (ಕೇರಳ: ಕಾಲ: 1 ಗಂಟೆ 25.02 ನಿ.)–1, ಸರ್ವಿನ್ (ಸರ್ವಿಸಸ್)–2, ಧನಂಜಯ್ ಯಾದವ್ (ಸರ್ವಿಸಸ್)–3; ಜಾವೆಲಿನ್ ಥ್ರೋ: ಡಿ.ಪಿ.ಮನು (ಸರ್ವಿಸಸ್; ದೂರ: 82.06 ಮೀ.)–1, ಯಶ್ವೀರ್ ಸಿಂಗ್ (ರಾಜಸ್ಥಾನ)–2, ವೆಂಕಟ್ ಮಲಿಕ್ (ಒಡಿಶಾ)–3



ವಂದನಾ

ಮಹಿಳೆಯರ ವಿಭಾಗ: 400 ಮೀ. ಓಟ: ದಂಡಿ ಶ್ರೀ (ಆಂಧ್ರ ಪ್ರದೇಶ; ಕಾಲ: 53.26 ಸೆ.)–1, ಸಿಮರ್‌ಜೀತ್ ಕೌರ್ (ಪಂಜಾಬ್)–2, ಕವಿತಾ (ಪೊಲೀಸ್ ಸ್ಪೋರ್ಟ್ಸ್ ಕಂಟ್ರೋಲ್)–3; 1,500 ಮೀ. ಓಟ: ಪೂಜಾ (ರೈಲ್ವೇಸ್; ಕಾಲ: 4 ನಿ. 21.80 ಸೆ.)–1, ಲಿಲಿ ದಾಸ್ (ರೈಲ್ವೇಸ್)–2, ಸ್ನೇಹಾ (ಹರಿಯಾಣ)–3; 4X100 ಮೀ. ರಿಲೇ: ರೈಲ್ವೇಸ್ (ಕಾಲ: 44.87 ಸೆ.)–1, ತಮಿಳುನಾಡು–2, ಪಂಜಾಬ್–3; 20 ಕಿ.ಮೀ. ನಡಿಗೆ: ಮುನಿತಾ (ರೈಲ್ವೇಸ್: ಕಾಲ: 1 ಗಂಟೆ 38.21 ನಿ.)–1, ವಂದನಾ (ಕರ್ನಾಟಕ)–2, ಪೂಜಾ (ರಾಜಸ್ಥಾನ)–3

ರೈಲ್ವೇಸ್‌ಗೆ ಸಮಗ್ರ ಪ್ರಶಸ್ತಿ

ಕೂಟದಲ್ಲಿ ಗಮನಾರ್ಹ ಪ್ರದರ್ಶನ ನೀಡಿದ ರೈಲ್ವೇಸ್ ತಂಡ ಒಟ್ಟು 220 ಪಾಯಿಂಟ್ಸ್ ಕಲೆಹಾಕಿ ಸಮಗ್ರ ಚಾಂಪಿಯನ್‌ಷಿಪ್ ತನ್ನದಾಗಿಸಿಕೊಂಡಿತು. ಮಹಿಳೆಯರ ವಿಭಾಗದ ಪ್ರಶಸ್ತಿಯನ್ನೂ ರೈಲ್ವೇಸ್ (156 ಪಾಯಿಂಟ್ಸ್) ಗೆದ್ದಿತು. ಪುರುಷರ ವಿಭಾಗದಲ್ಲಿ ಸರ್ವಿಸಸ್ ತಂಡ (175 ಪಾಯಿಂಟ್ಸ್) ಚಾಂಪಿಯನ್ ಆಯಿತು.

ಡಿ.ಪಿ. ಮನು ಮತ್ತು ಮಹಾರಾಷ್ಟ್ರದ ಯಮುನಾ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ 'ಶ್ರೇಷ್ಠ' ಅಥ್ಲೀಟ್ ಗೌರವಕ್ಕೆ ಪಾತ್ರರಾದರು.

ದೆಹಲಿ ಹಾಫ್ ಮ್ಯಾರಥಾನ್: ಡೇನಿಯಲ್, ಅಲ್ಮಾಜ್‌ಗೆ ಚಿನ್ನ

ನವದೆಹಲಿ (ಪಿಟಿಐ): ಕೆನ್ಯಾದ ಡೇನಿಯಲ್ ಎಬೆನ್ಯೊ ಮತ್ತು ಇಥಿಯೋ ಪಿಯಾದ ಅಲ್ಮಾಜ್ ಅಯಾನಾ ಅವರು ಭಾನುವಾರ ಇಲ್ಲಿ ನಡೆದ ದೆಹಲಿ ಹಾಫ್ ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಎಲೀಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

ಬುಡಾಪೆಸ್ಟ್‌ನಲ್ಲಿ ಈಚೆಗೆ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 10 ಸಾವಿರ ಮೀಟರ್ ಓಟದಲ್ಲಿ ಬೆಳ್ಳಿ ಪದಕ ಗೆದ್ದಿದ್ದ 28 ವರ್ಷದ ಎಬೆನ್ಯೊ ಅವರು ಇಲ್ಲಿ 59 ನಿಮಿಷ ಮತ್ತು 27 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಅದೇ ದೇಶದ ಮತ್ತೊಬ್ಬ ಓಟಗಾರ ಚಾರ್ಲ್ಸ್ ಮಟಾಟ (60ನಿ. 05ಸೆ.) ಮತ್ತು ಇಥಿಯೋಪಿಯಾದ ಅಡ್ಡಿಸು ಗೊಬೆನಾ (60ನಿ. 51ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ 10 ಸಾವಿರ ಮೀಟರ್ ಓಟದಲ್ಲಿ ಚಿನ್ನದ ಪದಕ ಗೆದ್ದಿದ್ದ 31 ವರ್ಷದ ಅಯಾನಾ 67 ನಿಮಿಷ 59 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಅವರು 2017ರಲ್ಲಿಯೂ ಇಲ್ಲಿ ಚಾಂಪಿಯನ್ ಆಗಿದ್ದರು.

ಉಗಾಂಡಾದ ಸ್ಟೆಲ್ಲಾ ಚೆಸಾಂಗ್ (68ನಿ. 28ಸೆ), ಮತ್ತು ಕೀನ್ಯಾದ ವಿಯೋಲಾ ಚೆಪ್‌ಜೆನೊ (69ನಿ. 09ಸೆ) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು.

ಅಭಿಷೇಕ್, ಕವಿತಾ ವೇಗದ ಓಟಗಾರರು: ಅಭಿಷೇಕ್ ಪಾಲ್ (64ನಿ.07ಸೆ) ಮತ್ತು ಕವಿತಾ ಯಾದವ್ (77ನಿ.42ಸೆ) ಅವರು ಕ್ರಮವಾಗಿ ಭಾರತದ ಪುರುಷ ಮತ್ತು ಮಹಿಳೆಯರ ಎಲೀಟ್ ವಿಭಾಗದಲ್ಲಿ ವೇಗದ ಓಟಗಾರರಾಗಿ ಹೊರಹೊಮ್ಮಿದರು.

ಅಭಿಷೇಕ್ ಅವರು ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದ 10,000 ಮೀ ಓಟದಲ್ಲಿ ಬೆಳ್ಳಿ ಪದಕ ಗೆದ್ದ ಕಾರ್ತಿಕ್ ಕುಮಾರ್ ಅವರನ್ನು ಒಂದು ಸೆಕೆಂಡ್ ಅಂತರದಲ್ಲಿ ಹಿಂದಿಕ್ಕಿ ಮೊದಲ ಸ್ಥಾನ ಪಡೆದರು.

ದಸರಾ: ಎಲೈಟ್ ಗುಂಪಿನ ಸ್ಪರ್ಧೆ ಇಂದಿನಿಂದ

ಮೈಸೂರು: 'ದಸರಾ ಸಿ.ಎಂ. ಕಪ್–2023' ರಾಜ್ಯಮಟ್ಟದ ಕ್ರೀಡಾಕೂಟದ ಎಲೈಟ್ ಗುಂಪಿನ ಸ್ಪರ್ಧೆಗಳು ಅ. 16ರಿಂದ 21ರವರೆಗೆ ನಡೆಯಲಿದ್ದು, ನಾಡಿನ ಕ್ರೀಡಾಪಟುಗಳು ಪ್ರಶಸ್ತಿಗಾಗಿ ಸೆಣೆಸಲಿದ್ದಾರೆ.

ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಒಲಿಂಪಿಕ್ ಸಂಸ್ಥೆ ಸಹಯೋಗದಲ್ಲಿ ನಡೆಯಲಿರುವ ಕ್ರೀಡಾಕೂಟದಲ್ಲಿ ಅಥ್ಲೆಟಿಕ್ಸ್ ಸೇರಿದಂತೆ ಒಟ್ಟು 25 ವಿಭಾಗ ಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಅಥ್ಲೆಟಿಕ್ಸ್‌ನಲ್ಲಿ 135 ಸ್ಪರ್ಧಿಗಳು ಸೇರಿದಂತೆ ಒಟ್ಟು 3359 ಕ್ರೀಡಾಪಟುಗಳು ನೋಂದಾಯಿಸಿಕೊಂಡಿದ್ದಾರೆ.

ಚಾಮುಂಡಿ ವಿಹಾರ ಕ್ರೀಡಾ ಸಮುಚ್ಚಯ, ಮೈಸೂರು ವಿವಿಯ ಕ್ರೀಡಾಂಗಣಗಳು ಹಾಗೂ ಬೆಂಗಳೂರಿನ ಸಾಯ್ ಸೇರಿದಂತೆ ಹತ್ತಕ್ಕೂ ಹೆಚ್ಚು ಸ್ಥಳಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

ಟೆನಿಸ್: ವಿಷ್ಣುವರ್ಧನ್, ಸೂರಜ್ ಮುನ್ನಡೆ

ಧಾರವಾಡ: ಭಾರತದ ವಿಷ್ಣುವರ್ಧನ್ ಮತ್ತು ಸೂರಜ್ ಪ್ರಬೋಧ್ ಅವರು ಧಾರವಾಡ ಜಿಲ್ಲಾ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ಭಾನುವಾರ ಆರಂಭವಾದ ಐಟಿಎಫ್ ಟೂರ್ನಿಯಲ್ಲಿ ಅರ್ಹತಾ ಸುತ್ತಿನಲ್ಲಿ ಮುನ್ನಡೆ ಸಾಧಿಸಿದರು.

ಸಿಂಗಲ್ಸ್ ವಿಭಾಗದಲ್ಲಿ ವಿಷ್ಣು ವರ್ಧನ್ ಅವರು ಪಾರ್ಥ್ ಅಗರವಾಲ್ ಅವರನ್ನು 6–3, 6–2ರಿಂದ ಸೋಲಿಸಿ ಹರ್ತಾ ದ್ವಿತೀಯ ಸುತ್ತಿಗೆ ಪ್ರವೇಶಿಸಿದ್ದಾರೆ. ಕರ್ನಾಟಕದ ಸೂರಜ್ ಆರ್ ಪ್ರಬೋಧ್ 6–2, 6–3ರಿಂದ ಅವರು ಅಥರ್ವ ಶರ್ಮಾ ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಪ್ರವೇಶ ಪಡೆದಿದ್ದಾರೆ.

ವಿಯೆಟ್ನಾಂನ ಹಾಮಿನ್ ಡುಕ್‌ವೊ ಅವರು ಅಮರ್ ಧರಿಯಣ್ಣವರ್ ಅವರನ್ನು 6–2, 6–0ಯಿಂದ ಸೋಲಿಸಿದರು. ಫೈಸಲ್ ಕೈಮರ್ ಅವರು 6–0, 6–4ರಿಂದ ದೀಪಕ್ ಅನಂತರಾಮು ಅವರನ್ನು ಸೋಲಿಸಿದರು.

ರಂಜಿತ್ ವಿರಾಲಿ ಮರುಗೇಶನ್ ಅವರು ಯಶ್ ಚೌರಾಸಿಯಾ ಅವರನ್ನು 6–1, 6–2 ರಿಂದ, ಆಸ್ಟ್ರೇಲಿಯಾದ ಲ್ಯೂಕ್ ಸೊರೆನ್‌ಸನ್ ಅವರು ಅರ್ಜುನ್ ಮಹದೇವನ್ ಅವರನ್ನು 7–6(4), 6–3ರಿಂದ, ಸ್ವಿಟ್ಜರ್‌ಲೆಂಡ್‌ನ ಜಾಕ್ ಕಾರ್ಲ್‌ಸನ್ ವಿಸ್ಟ್ರಾಂಡ್ ಅವರು ಧೀರಜ್ ಕೊಡಂಚ ಶ್ರೀನಿವಾಸನ್ ಅವರನ್ನು 6–2, 6–3ರಿಂದ, ಇಟಲಿಯ ಎನ್ರಿಕೊ ಜಿಯಾಕೊಮಿನಿ ಅವರು ಅಮೆರಿಕ ಜೇಕ್ ಭಂಗ್ಡಿಯಾ ಅವರನ್ನು 6–1, 6–3ರಿಂದ ಹಾಗೂ ಮಧ್ವಿನ್ ಕಾಮತ್ ಅವರು ಆಸ್ಟ್ರೇಲಿಯಾದ ಮ್ಯಾಥ್ಯೂ ವಾಯರೆಂಡಲ್ ಅವರನ್ನು 7–6 (2), 6–1ರಿಂದ ಸೋಲಿಸಿದರು.

ಅರ್ಹತಾ ಸುತ್ತಿನ ಮೊದಲ ಸುತ್ತಿಗೆ 16 ಪಂದ್ಯಗಳು ನಿಗದಿಯಾಗಿದ್ದವು, ಈ ಪೈಕಿ 5 ಪಂದ್ಯಗಳು ಬಾಕಿ ಇವೆ. 16ರಂದು ಎರಡನೇ ಸುತ್ತಿಗೂ 16 ಪಂದ್ಯಗಳು ನಿಗದಿಯಾಗಿವೆ. ಮೊದಲ ಸುತ್ತಿನ ಬಾಕಿ ಐದು ಪಂದ್ಯಗಳೂ ಸೋಮವಾರ ನಡೆಯಲಿವೆ. ಮುಖ್ಯ ಡ್ರಾ ಪಂದ್ಯಗಳು ಅ.17ರಿಂದ ಆರಂಭವಾಗಲಿವೆ.



ವಿಷ್ಣುವರ್ಧನ್ ಅವರು ಚೆಂಡನ್ನು ಹೊಡೆದ ಪರಿ
–ಬಿ.ಎಂ.ಕೇದಾರನಾಥ ಪ್ರಜಾವಾಣಿ ಚಿತ್ರ

ಬಿಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಅಮಯ್ ಮೊರಾಜ್ಕರ್ ಅವರ ಆಟದ ಬಲದಿಂದ ಬಿಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–0ಯಿಂದ ಎಫ್‌ಸಿ ಅಗ್ನಿಪುತ್ರ ತಂಡವನ್ನು ಮಣಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಅಮಯ್ (2ನೇ, 48ನೇ ನಿ.) ಎರಡು ಗೋಲು ಗಳಿಸಿ ಮಿಂಚಿದರು.

ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 1–0ಯಿಂದ ಬೆಂಗಳೂರು ಯುನೈಟೆಡ್ ತಂಡವನ್ನು ಮಣಿಸಿತು. ಅಹಮ್ಮದ್ ಫಯಾಜ್ ಖಾನ್ (7ನೇ) ಸ್ಪೋರ್ಟಿಂಗ್ ಕ್ಲಬ್ ಪರ ಗೆಲುವಿನ ಗೋಲು ದಾಖಲಿಸಿದರು.


ಪ್ರಶಸ್ತಿಯೊಂದಿಗೆ ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಮತ್ತು ಭಾರತದ ರೋಹನ್ ಬೋಪಣ್ಣ –ಪಿಟಿಐ ಚಿತ್ರ

ಶಾಂಘೈ ಓಪನ್: ಬೋಪಣ್ಣ– ಎಬ್ಡೆನ್ ರನ್ನರ್ಸ್ ಅಪ್

ಶಾಂಘೈ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರು ಶಾಂಘೈ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಎಡವಿ ರನ್ನರ್ಸ್ ಅಪ್ ಆದರು.

ಭಾನುವಾರ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯನ್ನು 5–7, 6–2, 10–7 ರಿಂದ ಗೆದ್ದುಕೊಂಡ ಸ್ಪೇನ್‌ನ ಮಾರ್ಸೆಲ್ ಗ್ರಾನೊಲೆರ್ಸ್ ಮತ್ತು ಅರ್ಜೆಂಟೀನಾದ ಹೊರಾಸಿಯೊ ಝೆಬೆಲೊಸ್ ಅವರು ಕಿರೀಟ ಮುಡಿಗೇರಿಸಿಕೊಂಡರು.

ಇಲ್ಲಿ ನಾಲ್ಕನೇ ಶ್ರೇಯಾಂಕ ಹೊಂದಿದ್ದ ಬೋಪಣ್ಣ– ಎಬ್ಡೆನ್ ಜೋಡಿ ಮೊದಲ ಸೆಟ್ ಗೆದ್ದು ಉತ್ತಮ ಆರಂಭ ಪಡೆದಿದ್ದರು. ಆದರೆ ಏಳನೇ ಶ್ರೇಯಾಂಕದ ಗ್ರಾನೊಲೆರ್ಸ್ ಮತ್ತು ಝೆಬೆಲೊಸ್ ಅವರು ಪುಟಿದೆದ್ದು ನಿಂತು ಒಂದು ಗಂಟೆ 23 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು.

ಟೇಬಲ್ ಟೆನಿಸ್: ಯಶಸ್ವಿನಿಗೆ ಕಿರೀಟ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ದೋಹಾದಲ್ಲಿ ನಡೆದ ವಿಶ್ವ ಟೇಬಲ್ ಟೆನಿಸ್ (ಡಬ್ಲ್ಯುಟಿಟಿ) ಯೂತ್ ಸ್ಟಾರ್ ಕಂಟೆಂಡರ್ ಟೂರ್ನಿಯನ್ನು ಗೆದ್ದುಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ ಬೆಂಗಳೂರಿನ 18 ವರ್ಷದ ಆಟಗಾರ್ತಿ 7-11, 15-13, 11-5, 8-11, 11-9 ರಿಂದ ಚೀನಾದ ಯುನಾ ಒಜಿಯೊ ಅವರನ್ನು ಮಣಿಸಿದರು. ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್ ಟೂರ್ನಿಯ 19 ವರ್ಷದೊಳಗಿನ ವಿಭಾಗದಲ್ಲಿ ಚಾಂಪಿಯನ್ ಆದ ಭಾರತದ ಮೊದಲ ಆಟಗಾರ್ತಿ ಎಂಬ ಗೌರವ ಅವರಿಗೆ ಒಲಿಯಿತು.

ಯಶಸ್ವಿನಿ ಮತ್ತು ಸುಹಾನಾ ಸೈನಿ ಜೋಡಿ ಡಬಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ 3-11, 11-4, 5-11, 11-8, 9-11 ರಿಂದ ಚೀನಾದ ಗಾವೊ ಯುಕ್ಸಿನ್– ಲಿಯು ಕ್ವಿನ್‌ರಾನ್ ಎದುರು ಸೋತು ಕಂಚು ತನ್ನದಾಗಿಸಿಕೊಂಡಿತು.